

ಮಾತೃ ಹೃದಯಿ
ಡಾ. ಬಸವಲಿಂಗ ಪಟ್ಟದ್ದೇವರು





ಲೇಖಕರು :
ಜಯಶ್ರೀ ಸುಕಾಲೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ.
Email : kasapabidar@gmail.com - www.kasapabidar.in





ಶ್ರೀಮತಿ ಜಯಶ್ರೀ ಸುಕಾಲೆ (೨೪-೦೪-೧೯೭೩) ಅವರು ಬಹುಮುಖ ಪ್ರತಿಭೆಯ ಗೃಹಿಣಿ. ಅವರು ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಕಾಲಿಟ್ಟಿದ್ದು ಇತ್ತೀಚಿನ ವರ್ಷಗಳಲ್ಲಿ. ಕಾವ್ಯಕ್ಷೇತ್ರ ಪ್ರವೇಶಿಸಿದ ಅವಧಿ ಇನ್ನೂ ಕಡಿಮೆ. ಈ ಕಡಿಮೆ ಅವಧಿಯಲ್ಲೇ ಅವರು ಜೀವನಮೌಲ್ಯಗಳ ಕಾಳಜಿಯ ಕವಯತ್ರಿಯಾಗಿ ರೂಪುಗೊಂಡಿದ್ದು ಆಶ್ಚರ್ಯಕರವಾಗಿದೆ. ಅವರ ಮೊದಲ ಕವನ ಸಂಕಲನವಾದ 'ಶರಣು ಶರಣಾರ್ಥಿ' ಕುರಿತು ಹಿರಿಯ ಕವಿ ನಾಡೋಜ ಚೆನ್ನವೀರ ಕಣವಿ ಅವರು "ಪಲ್ಲವಿಯಿಂದ ಪ್ರಾರಂಭವಾಗುವ ಈ ಪದ್ಯಗಳು ಅದೇ ಧಾಟಿಯಲ್ಲಿ ಮುಂದುವರಿದು ಅಂತಃಕರಣದ ಆಕಾರವನ್ನು ಪಡೆದುಕೊಳ್ಳುತ್ತವೆ. ಅಂತ್ಯಪ್ರಾಸವನ್ನು ಪಾಲಿಸಿಯೂ ಅದರ ಏಕತಾನತೆ ಕಿವಿಗೆ ಬೀಳದಂತೆ ಭಾವತನ್ಮಯತೆ ನೋಡಿಕೊಳ್ಳುತ್ತವೆ" ಎಂದು ತಿಳಿಸಿದ್ದಾರೆ.

ಪ್ರಾಥಮಿಕ ಶಾಲಾ ಹಂತದಲ್ಲೆ ವಚನ ಗಾಯನದಿಂದ ಅವರು ಬಾಲಪ್ರತಿಭೆ ಎನಿಸಿಕೊಂಡಿದ್ದಾರೆ. ಜನಪದ ಗೀತೆಗಳನ್ನು ಹಾಡುವುದರಲ್ಲೂ ಅವರು ಸೈ ಎನಿಸಿಕೊಂಡಿದ್ದಾರೆ. ನಾಟಕದಲ್ಲಿನ ಅವರ ಬಸವೇಶ್ವರ ಪಾತ್ರವನ್ನು ನೋಡಿದವರು ಮರೆಯುವ ಹಾಗಿಲ್ಲ. ಭಾವಪೂರ್ಣ ಭಕ್ತರಿಗೆ ಸಾಕ್ಷಾತ್ ಬಸವಣ್ಣನವರನ್ನೇ ನೋಡಿದ ಅನುಭವವಾಗುತ್ತದೆ. ಶರಣರ ಕುರಿತು ಅನೇಕ ರೂಪಕಗಳನ್ನು ಕೂಡ ಅವರು ರಚಿಸಿದ್ದಾರೆ. ರೂಪಕಗಳ ನಿರ್ದೇಶನದಲ್ಲೂ ಅವರದು ಎತ್ತಿದ ಕೈ. "ವಚನ ಕಲಾ ಸಂಗಮ" ಸಂಸ್ಥೆಯನ್ನು ಸ್ಥಾಪಿಸಿ ಗೃಹಿಣಿಯರಿಗೆ ರಂಗಸ್ಥಳದ ಪರಿಚಯ ಮಾಡಿಸುವ ಮೂಲಕ, ಗೃಹಿಣಿಯರು ಪ್ರತಿಭೆಯಲ್ಲಿ ಯಾರಿಗಿಂತ ಕಡಿಮೆ ಇಲ್ಲ ಎಂಬ ಆತ್ಮವಿಶ್ವಾಸವನ್ನು ಅವರಲ್ಲಿ ಮೂಡಿಸಿದ್ದಾರೆ. ಶರಣರ ಕುರಿತ ಅವರ ಲೇಖನಗಳು ಮತ್ತು ಕವನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ತಮಗೆ ವಹಿಸಿದ ಯಾವುದೇ ಕಾರ್ಯವನ್ನು ನಿಷ್ಠೆಯಿಂದ ಮಾಡುವ ಶ್ರದ್ಧೆಯುಳ್ಳ ಅವರು ಇತರರಿಗೆ ಮಾದರಿಯಾಗಿದ್ದಾರೆ. ಕಾರ್ಯಕ್ರಮ ನಿರ್ವಹಣೆ, ಉಪನ್ಯಾಸ, ಕವನವಾಚನ, ಬೀದರ ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಲೇಖಕಿಯರ ಸಂಘಟನೆ ಮುಂತಾದವು ಅವರಿಗೆ ಪ್ರಿಯವಾದ ಕಾರ್ಯಗಳಾಗಿವೆ.

ಅವರ ವಚನಾಭಿಷೇಕ ಬೀದರ ಜಿಲ್ಲೆಯಲ್ಲಿ ಜನಮನವನ್ನು ಸೂರೆಗೊಂಡಿದೆ. ನೂರೆಂಟು ವಚನಗಳನ್ನು ನಿರಂತರವಾಗಿ ಒಂದೇ ಧಾಟಿಯಲ್ಲಿ ಹಾಡುವುದು ಸಾಮಾನ್ಯ ಮಾತಲ್ಲ. ನೋಡುಗರಿಗೆ ಏದುಸಿರು ಬಿಡುವ ಅನುಭವವಾಗುತ್ತದೆ. ಆದರೆ ಅವರು ಮಾತ್ರ ನಿರರ್ಗಳವಾಗಿ ಹಾಡುತ್ತಲೇ ಇರುತ್ತಾರೆ. ಈ ವಚನಾಭಿಷೇಕದ ಸಂದರ್ಭದಲ್ಲಿ ಕೇಳುಗರು ವಚನಲೋಕದಲ್ಲಿ ವಿಹರಿಸುವ ಅನುಭವ ಪಡೆಯುತ್ತಾರೆ.

ವಚನ ಗಾಯನ, ರೂಪಕ ಮುಂತಾದವುಗಳನ್ನು ಕಲಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ವಚನ ಸಂಸ್ಕಾರ ಬೆಳೆಸುವುದು ಅವರ ಗುರಿಯಾಗಿದೆ.

– ರಂಜಾನ್ ದರ್ಗಾ

ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನ ನಿಮಿತ್ತ

ಸಾಂಸ್ಕೃತಿಕ ಚಿಂತಕರು ಮಾಲಿಕೆ

ಮಾತೃ ಹೃದಯಿ

ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು

ಲೇಖಕರು

ಜಯಶ್ರೀ ಸುಕಾಲೆ

ಪ್ರಕಾಶಕರು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

೨೦೨೦

ಮಾತೃ ಹೃದಯಿ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು
ಲೇ: ಜಯಶ್ರೀ ಸುಕಾಲೆ 'ಬಸವ ಪ್ರಕಾಶ ನಿಲಯ' ಶರಣನಗರ ಕೆ.ಇ.ಬಿ. ರೋಡ್ ಬೀದರ. -೫೮೫೪೦೧.
ಮೊ. ೯೪೮೧೬೩೩೪೬೩/೮೦೭೩೦೧೫೧೧೦.
ಪ್ರಕಾಶಕರು : **ಸುರೇಶ ಚನಶೆಟ್ಟಿ,**
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ. ಮೊ: ೯೯೮೬೭೯೨೩೨೩
E-mail:kasapabidar@gmail.com, web: www.kasapabidar.in
ಪ್ರಥಮ ಮುದ್ರಣ : ೨೦೨೦
ಹಕ್ಕುಗಳು : ಪ್ರಕಾಶಕರು
ಪುಟಗಳು : ೯೬
ಬೆಲೆ : ೧೦೦/-
ಅಕ್ಷರ ಜೋಡಣೆ : ಪಾಟೀಲ ಕಂಪ್ಯೂಟರ್ಸ್, ಬೀದರ.
ಪುಸ್ತಕ ವಿನ್ಯಾಸ : ಆರ್.ವ್ಹಿ. ಕುಂಬಾರ, ಬೀದರ.
ಮುಖಪುಟ ವಿನ್ಯಾಸ : ಅಕ್ಷಯ ಗ್ರಾಫಿಕ್ಸ್, ಬೀದರ
ಮುದ್ರಕರು: ವಿಶ್ವಾಸ ಪ್ರೆಸ್ ಬೆಂಗಳೂರು

ಪುಸ್ತಕ ಪ್ರಕಟಣೆ ಸಲಹಾ ಸಮಿತಿ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಸುರೇಶ ಚನಶೆಟ್ಟಿ

ಗೌರವಾಧ್ಯಕ್ಷರು
ಪಂಚಾಕ್ಷರಿ ಪುಣ್ಯಶೆಟ್ಟಿ

ಗೌರವ ಕಾರ್ಯದರ್ಶಿ
ಡಾ.ಬಸವರಾಜ ಬಲ್ಲೂರ
ಡಾ. ರಾಜಕುಮಾರ ಹೆಬ್ಬಾಳೆ

ಗೌರವ ಕೋಶಾಧ್ಯಕ್ಷರು
ಟಿ.ಎಂ.ಮಚ್ಚೆ

ಉಪಾಧ್ಯಕ್ಷರು
ಜಯದೇವಿ ಯದಲಾಪೂರೆ
ವಿಜಯಕುಮಾರ ಗೌರೆ,
ವಿರುಪಾಕ್ಷ ಗಾದಗಿ

ಮಹಿಳಾ ಪ್ರತಿನಿಧಿ
ಕಸ್ತೂರಿ ಪಟಪಳ್ಳಿ

ಮಹಿಳಾ ಸಾಹಿತಿ
ಮೇನಕಾ ಪಾಟೀಲ

ಮಹಿಳಾ ಘಟಕ ಅಧ್ಯಕ್ಷರು
ಜಯಶ್ರೀ ಸುಕಾಲೆ

ಮಕ್ಕಳ ಘಟಕ ಅಧ್ಯಕ್ಷರು
ರಜಿಯಾ ಬಳಬಟ್ಟಿ

ಪರಿಶಿಷ್ಟ ಜಾತಿ ಪ್ರತಿನಿಧಿ
ಡಾ.ಮಲ್ಲಿಕಾರ್ಜುನ ನಿಂಗದಳ್ಳಿ

ಪರಿಶಿಷ್ಟ ಪಂಗಡ ಪ್ರತಿನಿಧಿ
ಡಾ. ರಾಜಕುಮಾರ ಅಲ್ಲೂರೆ

ಸಂಘ ಸಂಸ್ಥೆ ಪ್ರತಿನಿಧಿ
ಸುಬ್ರಹ್ಮಣ್ಯ ಪ್ರಭು

ಜಿಲ್ಲಾ ವಾರ್ತಾಧಿಕಾರಿ
ಗವಿಸಿದ್ದಪ್ಪ ಹೊಸಮನಿ

ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು
ಸಿದ್ರಾಮ ಸಿಂಧೆ

ನಿಕಟಪೂರ್ವ ಅಧ್ಯಕ್ಷರು
ಪ್ರೊ. ಸಿದ್ರಾಮಪ್ಪ ಮಾಸಿಮಾಡೆ

ಜಿಲ್ಲಾ ಶಿಕ್ಷಣಾಧಿಕಾರಿ
ಶಿವಕುಮಾರ ಸ್ವಾಮಿ

ಗಡಿ ಪ್ರತಿನಿಧಿ
ಪ್ರೊ. ಶಿವಕುಮಾರ ಕಟ್ಟೆ
ವಸಂತ ಹುನಸನಾಳೆ,

ಅಧ್ಯಕ್ಷರು
ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು
ಎಂ. ಎಸ್. ಮನೋಹರ, ಬೀದರ
ಜಗನ್ನಾಥ ಮೂಲಗೆ, ಔರಾದ
ಸಚ್ಚಿದಾನಂದ ಮಠಪತಿ, ಹುಮನಾಬಾದ
ಡಾ. ರುದ್ರಮಣಿ ಮಠಪತಿ, ಬಸವಕಲ್ಯಾಣ
ಶಶಿಧರ ಕೊಸಂಬೆ ಭಾಲ್ಕಿ
ಪ್ರಶಾಂತ ಮಠಪತಿ ಕಮಾಲನಗರ
ಡಾ. ಶಿವಲೀಲಾ ಮಠಪತಿ, ಹುಲಸೂರ
ಅನಿಲಕುಮಾರ ಸಿಂಧೆ, ಚಿಟಗುಪ್ಪ

ಸಂಘಟನಾ ಕಾರ್ಯದರ್ಶಿ
ಉಮಾಕಾಂತ ವಾರದ,
ಶಾಂತಲಿಂಗ ಮಠಪತಿ
ವೀರಶೆಟ್ಟಿ ಪಟ್ನೆ

ಸಂಚಾಲಕರು
ಶಿವಶಂಕರ ಟೋಕರೆ

ಗೌರವ ಸಲಹೆಗಾರರು
ಕಾಶೆಪ್ಪಾ ಬಾಲಕಿಲೆ
ಶರಣಪ್ಪಾ ಮಿಠಾರೆ
ವೈಜಿನಾಥ ಕಮಠಾಣೆ
ಬಸವರಾಜ ಧನ್ನೂರ
ಪ್ರೊ. ಎಸ್. ವಿ. ಕಲ್ಮಠ
ಝಾಕೀರ ಹುಸೇನ್
ಡಾ.ಜಗನ್ನಾಥ ಹೆಬ್ಬಾಳೆ
ಪ್ರೊ. ಶಂಭುಲಿಂಗ ಕಾಮಣ್ಣಾ
ಎಸ.ಎಮ್.ಜನವಾಡಕರ್
ಡಾ.ಮನ್ಮಥ ಡೋಳೆ
ಶಿವಯ್ಯಾ ಸ್ವಾಮಿ

ವಿಶೇಷ ಆಹ್ವಾನಿತರು
ರಾಜೆಂದ್ರಕುಮಾರ ಗಂದಗೆ
ಡಾ.ಸಿ ಆನಂದರಾವ
ಬಾಲಾಜಿ ಬಿರಾದಾರ
ಪಾಂಡುರಂಗ ಬೆಲ್ದಾರ್
ರವೀಂದ್ರ ರೆಡ್ಡಿ
ಡಾ. ಬಂಡಯ್ಯಾ ಸ್ವಾಮಿ

ಕಾರ್ಯಕಾರಿ ಸದಸ್ಯರು
ಜಗನ್ನಾಥಕಮಲಾಪೂರೆ
ಯೋಗೇಶ ಮಠ
ಸಚೀನ ವಿಶ್ವಕರ್ಮ
ದೇವೆಂದ್ರ ಕರಂಜೆ
ಅನೀಲಕುಮಾರ ದೇಶಮುಖ
ಸಿದ್ದಾರೂಢ ಕಂದಗೂಳ
ಶಿವಾನಂದ ಪಾಟೀಲ
ಗಿರಿರಾಜ ವಾಲೆ
ಆನಂದ ಪಾಟೀಲ

ಮುನ್ನುಡಿ

ಸಾಹಿತ್ಯವು ಯಾವಾಗಲೂ ಒಂದು ವಿಶಿಷ್ಟ ಅನುಭವ ಪರಂಪರೆಯನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ. ಒಂದು ಕೃತಿಯನ್ನು ಓದುತ್ತಿದ್ದಂತೆ ಅದರ ಅನುಭವಗಳು ನಮ್ಮೊಳಗೆ ಸೇರಿಕೊಳ್ಳುತ್ತ, ಅಲ್ಲಿನ ಅನುಭವ ಸಾರ್ವತ್ರಿಕರಣಗೊಳ್ಳುತ್ತ ಹೋಗುತ್ತದೆ. ಸಾಹಿತ್ಯಕೃತಿ ನಮ್ಮನ್ನು ತಟ್ಟಬೇಕು ಎಂದರೆ ಅಲ್ಲಿನ ಅನುಭವಗಳು ಗಾಢವಾಗಿರಬೇಕು, ಅಲ್ಲಿನ ಸೃಜನಶೀಲತೆಯ ಸೆಲೆಗಳು ನಮ್ಮನ್ನು ಸೆಳೆಯುವಂತೆ ಇರಬೇಕು. ಆ ಕೃತಿ ತನ್ನ ಸುತ್ತಲಿನ ಜೀವನವನ್ನು, ಪರಿಕರಗಳನ್ನು ಒಳಗೊಂಡಿದ್ದಾಗ ಇದು ಸಾಧ್ಯವಾಗುತ್ತದೆ.

ತಲೆ ತಲಾಂತರಗಳಿಂದ ಕೆಲವರು ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ, ಜಲ, ಜನ ಸಮುದಾಯವನ್ನು ತಮ್ಮದೇ ರೀತಿಯಲ್ಲಿ ಶ್ರೀಮಂತಗೊಳಿಸಲು ಶ್ರಮಿಸಿರುತ್ತಾರೆ. ಅವರ ಶ್ರಮ ಮುಂದಿನ ತಲೆಮಾರಿಗೆ ತಿಳಿಯದೇ ಹೋಗಬಾರದು. ಜನ ಸಮುದಾಯದ ಶ್ರೇಯಸ್ಸಿಗೆ ಅವರುಕೊಟ್ಟ ಕೊಡುಗೆಯನ್ನು ಜನ ನೆನಪಿಸಿಕೊಳ್ಳುವಂತೆ ಆಗಬೇಕು, ಹಾಗೆ ನೆನಪಿಸಿಕೊಂಡರೆ ಅದು ಒಂದು ಸಮುದಾಯದಲ್ಲಿ ಇರುವ, ಇರಬೇಕಾದ ಕೃತಜ್ಞತೆಯ ಕುರುಹು.

ಬೀದರ್ ಜಿಲ್ಲೆಯಲ್ಲಿ ಅಂಥ ಹಿರಿಯರ ಕೊಡುಗೆಯನ್ನು ದಾಖಲು ಮಾಡುವ ಕಾರ್ಯ ನಡೆದು ಅದು ಇದೀಗ ಕಾರ್ಯರೂಪಕ್ಕೆ ಬಂದಿರುವುದು ಶ್ಲಾಘನೀಯ ಕೆಲಸ. ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕದ ಅಧ್ಯಕ್ಷರಾದ ಶ್ರೀ ಸುರೇಶ ಚನಶೆಟ್ಟಿಯವರಿಗೆ ಇಂಥ ವಿಚಾರವೊಂದು ಹೊಳೆದು ಅದನ್ನು ಅವರು ಸ್ವಯಂಸ್ಫೂರ್ತಿಯಿಂದ ಕೈಗೆತ್ತಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಅವರ ಜೀವಿತಾವಧಿಯಲ್ಲಿಯೇ ಅವರು ಪ್ರತಿಪಾದಿಸಿದ ಜೀವನಮೌಲ್ಯಗಳನ್ನು ಅಕ್ಷರರೂಪಕ್ಕೆ ಇಳಿಸಬೇಕು ಎಂದು ಅವರು ಒಂದು ಯೋಜನೆಯನ್ನೂ ರೂಪಿಸಿದರು.

ಅದಕ್ಕೆ ಪೂರಕವಾಗಿ "ಸಾಂಸ್ಕೃತಿಕ ಚಿಂತಕರು' ಎಂಬ ಸರಣಿಯಲ್ಲಿ ೧೭ ಜನ ಸಾಧಕರನ್ನು ಕುರಿತು ಅಷ್ಟೇ ಸಂಖ್ಯೆಯ ಲೇಖಕಿಯರು ಕೃತಿ ರಚಿಸಿದ್ದಾರೆ. ಅದರ ಜೊತೆಗೆ ಜಿಲ್ಲೆಯಲ್ಲಿ "ಕನ್ನಡ ಕಟ್ಟಿದವರು' ಕುರಿತ ಸರಣಿಯಲ್ಲಿ ೧೭ ಜನ ಸಾಧಕರ ಬಗೆಗೆ ಅಷ್ಟೇ ಸಂಖ್ಯೆಯ ಬರಹಗಾರರು ಕೃತಿಗಳನ್ನು ರಚಿಸಿದ್ದಾರೆ. ಇದೆಲ್ಲ ಆಗಿರುವುದು ಜಿಲ್ಲೆಯ ೧೭ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಂಗವಾಗಿ ಎಂಬುದು ಇಲ್ಲಿ ಉಲ್ಲೇಖನಾರ್ಹ.

ಇದು ಒಂದು ಅಪರೂಪದ ದಾಖಲೆಯ ಕಾರ್ಯ; ನಮ್ಮ ಸಮಾಜದ ಏಳಿಗೆಗೆ ದುಡಿದ ಮಹನೀಯರನ್ನು, ಮಹಿಳೆಯರನ್ನು ನೆನಪಿಸಿಕೊಳ್ಳುವ ಕಾರ್ಯ. ಆದರೆ, ಇದು ಕೇವಲ ಒಂದು ದಾಖಲೀಕರಣದ ಕೆಲಸ ಮಾತ್ರ ಅನಿಸದೇ ಆಸಕ್ತರು ಈ ಕೃತಿಗಳನ್ನು ಓದಿದರೆ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳ ಕಾರ್ಯ ಸಾರ್ಥಕ ಎನಿಸುತ್ತದೆ. ಇದಕ್ಕಾಗಿ ದುಡಿದ ಎಲ್ಲರಿಗೂ ನನ್ನ ಅಭಿನಂದನೆಗಳು.

ನಾಡೋಜ ಡಾ. ಮನು ಬಳಿಗಾರ್
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಸದಭಿಪ್ರಾಯ

ಭಾಲ್ಕಿಯ ಹಿರೇಮಠದ ಪೂಜ್ಯರಾದ ಡಾ. ಬಸವಲಿಂಗ ಪಟ್ಟದ್ದೇವರದು ಅಪರೂಪದ ವ್ಯಕ್ತಿತ್ವ. ಗುರುವಿಗೆ ತಕ್ಕ ಶಿಷ್ಯ. ಚೆನ್ನಬಸವ ಪಟ್ಟದ್ದೇವರ ಕನಸುಗಳನ್ನು ನನಸು ಮಾಡುತ್ತ ಮುನ್ನಡೆದವರು. ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ವಿಪುಲ ಬಸವಾದಿ ಶರಣರ ಸಾಹಿತ್ಯ ಗ್ರಂಥಗಳನ್ನು ಪ್ರಕಟಿಸಿ ಮಠವನ್ನು ಕರ್ನಾಟಕ ಮತ್ತು ಮಹಾರಾಷ್ಟ್ರದ ಜನಸಮುದಾಯಗಳಿಗೆ ಸೇತುವೆಯಾಗಿಸಿದವರು. ಇವರ ಮಠದಿಂದ ಪ್ರಕಟವಾದ ಶರಣ ಸಂಸ್ಕೃತಿಯ ಪುಸ್ತಕಗಳು ಮಹಾರಾಷ್ಟ್ರದ ಬಸವಭಕ್ತರಿಗೆ ಜ್ಞಾನರತ್ನಗಳಾಗಿವೆ. ಹೀಗೆ ಎರಡು ರಾಜ್ಯಗಳಿಗೆ ಸಂಬಂಧಿಸಿದ ಯಾವುದಾದರು ಒಂದು ಮಠ ಕರ್ನಾಟಕದಲ್ಲಿದ್ದರೆ ಅದು ಭಾಲ್ಕಿಯ ಹಿರೇಮಠ ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ಗುರುವರ್ಗದ ಮಠವಾಗಿದ್ದ ಇದು ಬಸವಪ್ರಣೀತ ಮಠವಾಗಿ ಬೆಳೆದು ರಾಜ್ಯದ ಗುರುವರ್ಗದ ಮಠಗಳಿಗೆ ಮತ್ತು ವಿರಕ್ತ ಮಠಗಳಿಗೆ ಮಾದರಿಯಾಗಿದೆ. ಇಂಥ ಮಠವನ್ನು ಮುನ್ನಡೆಸುತ್ತಿರುವ ಬಸವಲಿಂಗ ಪಟ್ಟದ್ದೇವರು ಅಭಿನಂದನಾರ್ಹರು.

ಅವರು ನಡೆಸುವ ಪ್ರವಚನ, ಮಠದ ಶಿಸ್ತುಬದ್ಧ ಆಡಳಿತ, ಶಾಲೆ ಕಾಲೇಜು, ವಸತಿಶಾಲೆ, ಅನಾಥಾಶ್ರಮ ಮತ್ತು ಗೋಶಾಲೆ ಗಮನಾರ್ಹವಾಗಿವೆ. ವಿಧವೆಯರು ಮತ್ತು ವಿಚ್ಛೇದಿತ ಮಹಿಳೆಯರು ಮಕ್ಕಳ ಸಹಿತವಾಗಿ ಇಲ್ಲಿ ಆಶ್ರಯ ಪಡೆದಿದ್ದಾರೆ. ಬಡ ಮಕ್ಕಳಿಗೆ ಉಚಿತವಾಗಿ ಊಟ, ವಸತಿ ಮತ್ತು ಶಿಕ್ಷಣದ ವ್ಯವಸ್ಥೆ ಮಾಡಿದ್ದಾರೆ. ಮಹಾರಾಷ್ಟ್ರದ ತುಂಬೆಲ್ಲ ಬಸವತತ್ತ್ವ ಪ್ರಚಾರ ಯಾತ್ರೆ, ಬಸವಕಲ್ಯಾಣದ

ಅನುಭವ ಮಂಟಪದ ಉಸ್ತುವಾರಿ, ಇವೆಲ್ಲವುಗಳ ಮಧ್ಯೆ ಭಕ್ತರ ಮನೆಗಳನ್ನು 'ಮಹಾಮನೆ' ಮಾಡುವ ತವಕ, ಹೀಗೆ ನಿರಂತರವಾಗಿ ಸೇವಾಮಗ್ನರಾಗಿರುವುದನ್ನು ನೋಡಿ ನಾನು ಬಹಳ ಸಂತೋಷ ಪಟ್ಟಿದ್ದೇನೆ.

ಕೊನೆಯ ಉಸಿರಿರುವವರೆಗೂ ಬಸವ ಸಂದೇಶ ಪ್ರಸಾರ ಮಾಡುವುದೇ ನನ್ನ ಜೀವನದ ಗುರಿ. ಯುವ ಪೀಳಿಗೆಗೆ ಸಂಸ್ಕಾರಯುತ ಶಿಕ್ಷಣ ಕೊಡುವುದರ ಕಡೆಗೇ ನನ್ನ ಗಮನ. ಬಸವಕಲ್ಯಾಣದಲ್ಲಿ ಬಸವತತ್ತ್ವ ಪ್ರಚಾರಕ್ಕಾಗಿ ಸಾಧಕರನ್ನು ತರಬೇತಿಗೊಳಿಸುವ ಉದ್ದೇಶದಿಂದ ಶರಣಧಾಮ ನಿರ್ಮಾಣವಾಗಿದ್ದು, ಬಸವತತ್ತ್ವದ ಆಧಾರದ ಮೇಲೆ ಮಠಗಳು ಮುನ್ನಡೆಯುವಂತೆ ಮಾಡುವುದು ನನ್ನ ಆಶಯ ಎಂದು ಪಟ್ಟದ್ದೇವರು ತಿಳಿಸಿದ್ದು ಹೆಮ್ಮೆಯ ವಿಚಾರ.

ಮಠದ ಪೂರ್ವಾಪರದೊಂದಿಗೆ ಬಸವಲಿಂಗ ಪಟ್ಟದ್ದೇವರ ವ್ಯಕ್ತಿತ್ವವನ್ನು ಅರಿಯಲು ಈ ಪುಸ್ತಿಕೆ ಬಹಳ ಉಪಯುಕ್ತವಾಗಿದೆ. ಈ ಪುಸ್ತಕವನ್ನು ಅಲ್ಪಾವಧಿಯಲ್ಲಿ ರಚಿಸಿದ ಕವಯತ್ರಿ ಜಯಶ್ರೀ ಸುಕಾಲೆಯವರ ಪ್ರತಿಭೆ ಮೆಚ್ಚುವಂಥದ್ದು. ಕಿರಿದುದರಲ್ಲೇ ಪಿರಿದನ್ನು ಹೇಳುವ ಅವರ ಶೈಲಿ ಮನೋಜ್ಞವಾಗಿದೆ. ಅವರಿಗೆ ಅಭಿನಂದನೆಗಳು.

ಡಾ. ಎಸ್. ಆರ್. ಗುಂಜಾಳ
ಧಾರವಾಡ
29.01.2019

ಅಕ್ಷರ ಪ್ರೀತಿಯ ನುಡಿ

(ಪ್ರಕಾಶಕರ ಮಾತು)

ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆ ಹಾಗೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ. ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ.

ಸಮಾಜೋಸಾಂಸ್ಕೃತಿಕ ಏಳಿಗೆಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದ್ದು ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು.

ನಮ್ಮ ಮಧ್ಯದ ಅಪರೂಪದ ಸಾಹಿತಿಗಳಾದ **ಶ್ರೀಮತಿ ಜಯಶ್ರೀ ಸುಕಾಲೆ** ಅವರು ಬರೆದ ಮಾತೃ ಹೃದಯಿ **ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು** ಜೀವನ ಸಾಧನೆ ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಬಸವತತ್ವ, ಕನ್ನಡತ್ವವನ್ನು ಸಮನ್ವಯಗೊಳಿಸಿ ಈ ಭಾಗದಲ್ಲಿ ಶೈಕ್ಷಣಿಕವಾಗಿ ಬಹುದೊಡ್ಡ ಕ್ರಾಂತಿ ಮಾಡಿರುವರು. ಅನೇಕ ಶರಣ ಸಾಹಿತ್ಯ ಕುರಿತ, ವಿಶೇಷವಾಗಿ ವೈಚಾರಿಕವಾದ ಹಲವಾರು ಮೌಲಿಕ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಬಸವ ತತ್ವವನ್ನು ನಿಜಾಚರಣೆಯಲ್ಲಿ ತಂದ ಶ್ರೀಗಳ ಬದುಕು ಬರಹ ಕುರಿತ ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ. ಪ್ರಸ್ತುತ ಪುಸ್ತಕಕ್ಕೆ ಮೌಲಿಕ ಮುನ್ನುಡಿ ಬರೆದು ಕೃತಿಯ ಮೌಲ್ಯ ಹೆಚ್ಚಿಸಿದ ನಾಡೋಜ ಡಾ. ಮನು ಬಳಿಗಾರ ಅವರನ್ನು ತುಂಬು ಹೃದಯದಿಂದ ನೆನೆಯುತ್ತೇವೆ. ಈ ಕೃತಿಯನ್ನು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಲು ಅನುಮತಿ ನೀಡಿರುವ ಲೇಖಕರಿಗೂ ಮತ್ತು **ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು** ಅವರಿಗೂ ವಿಶೇಷವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ ವಂದನೆಗಳು.

ಸುರೇಶ ಚನಶೆಟ್ಟಿ
ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ಸಾಂಸ್ಕೃತಿಕ ಚಿಂತಕರು

ಹಿಂದಣ ಹೆಜ್ಜೆಯನರಿತಲ್ಲದೆನಿಂದ ಹೆಜ್ಜೆಯನರಿಯಬಾರದೆಂಬ ಅಲ್ಲಮ ಪ್ರಭುದೇವರ ಮಾತು ಇತಿಹಾಸದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. ಇತಿಹಾಸವೆಂದರೆ ಕೇವಲ ರಾಜ ಮಹಾರಾಜರ ವೈಭವದ ಬದುಕು, ಕೋಟೆ ಕೊತ್ತಲಗಳೇ ಅಲ್ಲ, ರಾಜ ಪರಿವಾರದ ಪರಿಸರ, ಅರಸರ ಸುತ್ತಲಿನ ಜನ ಸಾಮಾನ್ಯರ ಬದುಕಿನ ಏಳುಬೀಳುಗಳು, ಸಮಕಾಲೀನ, ಕಲೆ, ಸಾಹಿತ್ಯ, ಸಂಸ್ಕೃತಿ ಅವುಗಳ ಬೆಳವಣಿಗೆಗೆ ಪೂರಕವಾದ ಅಂಶಗಳೆಲ್ಲ ಸೇರಿ ಇತಿಹಾಸವಾಗುತ್ತದೆ. ಚಾರಿತ್ರಿಕವಾದ ಒಂದು ಕೋಟೆಗೆ ಎಷ್ಟು ಮಹತ್ವವೋ ಒಂದೂರಿನ ಹಳೆ ವಾಡೆ(ಘೂಡೆ)ಗಳಿಗೂ ಅಷ್ಟೇ ಮಹತ್ವವಿರುತ್ತದೆ. ಒಬ್ಬ ರಾಜ ರಾಣಿಗೆ ಇರುವಷ್ಟೆ ಮಹತ್ವ ಒಂದೂರಿನ ಜನಪರ ಕಾಳಜಿಯ ವ್ಯಕ್ತಿಗಳಿಗೂ ಇರುತ್ತದೆ. ಅಂಥ ಸಾಂಸ್ಕೃತಿಕ ವ್ಯಕ್ತಿಗಳ ಕಾರ್ಯ ಸಾಧನೆ ಕಾಲಗತಿಯಲ್ಲಿ ಮರೆಯಾಗಬಾರದೆಂಬ ಕಾರಣವಾಗಿ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿ ಸಮಾಜಕ್ಕೆ ಬೆಳಕಾದ ಸಾಧಕರ ಜೀವನ ಸಾಧನೆ ದಾಖಲಿಸಬೇಕಾಗಿರುವುದು ಪ್ರಜ್ಞಾವಂತ ಸಮಾಜದ ಹೊಣೆಗಾರಿಕೆ ಎಂದರಿತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ **ಸಾಂಸ್ಕೃತಿಕ ಚಿಂತಕರು ಮಾಲಿಕೆ** ಆರಂಭಿಸಿದೆ. ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು. ಹಿತ್ತಲ ಗಿಡ ಮದ್ದಲ್ಲ, ತಮ್ಮ ತಮ್ಮ ನೆಲದಲ್ಲಿ

ಸಾಧಕರಿಗೆ ಮನ್ನಣೆ ದೊರೆಯಲಾರದು ಎಂಬ ತೆಳು ಗ್ರಹಿಕೆಯ ಮಾತಿವೆ. ಅದನ್ನು ಹುಸಿಗೊಳಿಸಲು ಸಾಧಕರ ಜೀವನ ಚರಿತ್ರೆ ಈ ಯೋಜನೆ ರೂಪಿಸಲಾಗಿದೆ. ಸಾಮಾನ್ಯವಾಗಿ ಜೀವನ ಚರಿತ್ರೆಗಳು ವಿವರಗಳ ಕಟ್ಟಾಗಿರುತ್ತವೆ. ಆದರೆ ಈ ಮಾಲಿಕೆಯ ಕೃತಿಗಳು ಹಾಗಲ್ಲ. ನಮ್ಮೆಲ್ಲರ ಅಂತಃಶಕ್ತಿ, ಪ್ರೇರಣೆಯಾಗಿದ್ದು, ಸತ್ಯ, ದಕ್ಷತೆ, ಪ್ರಾಮಾಣಿಕತೆ, ಕಾಯಕ ನಿಷ್ಠೆ, ದಾಸೋಹ ಜೀವನ, ಸಮಯ ಪ್ರಜ್ಞೆ ಇವುಗಳಿಗೆ ವ್ಯಾಖ್ಯಾನ ಬರೆದಂತೆ ಬದುಕಿದವರ ಚರಿತ್ರೆಗಳನ್ನು ಆಯ್ದುಕೊಳ್ಳಲಾಗಿದೆ ಇದೊಂದು ಅಪರೂಪದ ಮಾಲಿಕೆ. ಈ ಪುಸ್ತಕಗಳಲ್ಲಿ ಏಕಕಾಲಕ್ಕೆ ಹಲವು ವ್ಯಕ್ತಿಗಳ ಸಂಬಂಧಗಳನ್ನು ಜೋಡಿಸುವ, ಸಮಕಾಲೀನ ಸಾಂಸ್ಕೃತಿಕ ಚಿಂತನೆಗಳನ್ನು ಸಂಕ್ಷಿಪ್ತವಾಗಿ ದಾಖಲಿಸುವ ಮೂಲಕ ಪರಿಪೂರ್ಣ ರೂಪದ ಜೀವನ ಚರಿತ್ರೆ ಕಟ್ಟಿಕೊಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಸಾಧಕರ ಕುರಿತು ಅಧ್ಯಯನ ಮಾಡುವವರಿಗೆ ಈ ಕೃತಿ ಮೂಲ ಆಕರವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಡಾ. ಬಸವರಾಜ ಬಲ್ಲೂರ

ನಿವೇದನೆ

ಬೀದರ ಜಿಲ್ಲಾ ೧೭ನೇಯ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಯುಕ್ತ ಉನ್ನತ ಸೇವೆಗೈದಿರುವುದನ್ನು ಸ್ಮರಿಸುವ ಸದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ೧೭ ಸಾಧಕರ ಕಿರು ಕೃತಿಯನ್ನು ೧೭ ಲೇಖಕಿಯರಿಂದ ಒಡಮೂಡಿಸುವ ನಿಟ್ಟಿನಲ್ಲಿ ಸಭೆ ಕರೆದು ೧೭ ಸಾಧಕರ ಪಟ್ಟಿ ಓದುತ್ತಾ ಆಯ್ಕೆ ನಿಮ್ಮದು ಎಂದ ತಕ್ಷಣವೇ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು ಎಂದು ಹೇಳಿದೆ.

ನಾನು ಚಿಕ್ಕವಳಿರುವಾಗ ಮೊಟ್ಟ ಮೊದಲು ನೋಡಿದ್ದೆ ಪರಮ ಪೂಜ್ಯ ಡಾ.ಚನ್ನಬಸವ ಪಟ್ಟದ್ದೇವರನ್ನು ನಮ್ಮ ತಂದೆಯವರು ಪೂಜ್ಯರ ಶಾಲೆಯಲ್ಲಿ ಸೇವೆ ಸಲ್ಲಿಸಿದ್ದಕ್ಕಾಗಿ ಅವರು ನಮ್ಮ ಮನೆಗೆ ಬರುತ್ತಿದ್ದರು. ನಮ್ಮೆಲ್ಲರಿಗೂ ೮ ವರ್ಷದವರಿದ್ದಾಗ ಇಷ್ಟಲಿಂಗ ದೀಕ್ಷೆ ಮಾಡಿಸಲಾಗುತ್ತಿತ್ತು ಮುಂದೆ ನನ್ನ ಮದುವೆಯಾಗಿ ಭಾಲ್ಕಿಯಲ್ಲಿ ಇದ್ದಾಗ ಪಿ.ಯು.ಸಿ. ಓದುತ್ತಿದ್ದೆ, ಕಾಲೇಜಿನಿಂದ ಬರುವಾಗ ನಮ್ಮ ಮನೆಯ ಮುಂದಿನ ಮನೆಯಲ್ಲಿದ್ದವರು ಹಿರಿಯ ಜೀವಿ ಸಾಹಿತಿಕಾರರಾದ ಚರಂತಿಮಠ ದಂಪತಿಗಳು ರಾಯಚೂರಿನವರು ಇದ್ದರು. ಅವರು ನನಗೆ ಗರ್ಭಕ್ಕೆ ಇಷ್ಟಲಿಂಗ ಧಾರಣೆ ಮಾಡಿಕೊಳ್ಳಬೇಕೆಂದು ಹೇಳಿ ಭಾಲ್ಕಿ ಶ್ರೀ ಮಠಕ್ಕೆ ಕಳುಹಿಸಿದರು. ಅಲ್ಲಿ ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರ ಆರ್ಶಿವಾದ ಪಡೆದು ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರಿಂದ ಗರ್ಭಕ್ಕೆ ಇಷ್ಟಲಿಂಗ ದೀಕ್ಷೆ ಪಡೆದ ನನಗೆ ನನ್ನ ದೀಕ್ಷಾ ಗುರುವಿಗೆ ಒಂದು ಚಿಕ್ಕ ಋಣ ತೀರಿಸುವ ಭಾಗ್ಯ ದೊರೆಯುವ ಅವಕಾಶ ತಪ್ಪಿಸಿಕೊಳ್ಳಬಾರದೆಂಬ ಹಂಬಲದಿಂದ ಈ ಕಿರು ಕೃತಿಯನ್ನು ತುಂಬಾ ಸಂತೋಷದಿಂದ ಬರೆದೆ. ಪರಮ ಪೂಜ್ಯರು ಹಿರೇಮಠ ಸಂಸ್ಥಾನದ ಪೀಠಾಧ್ಯಕ್ಷರಾಗಿದ್ದ ಪೂಜ್ಯ ಶ್ರೀ ಮ.ಘ.ಚ. ಡಾ. ಬಸವಲಿಂಗ ಪಟ್ಟದ್ದೇವರ ಹಿರಿದಾದ ಸಾಧನೆಯನ್ನು ನಾನು ಈ ಸಣ್ಣ ಕಿರುಕೃತಿಯೊಳಗೆ ಹಿಡಿದಿಡಲು ಅಸಾಧ್ಯವೆಂದು ಗೊತ್ತಿದ್ದರೂ ನನ್ನಂಥ

ಅನೇಕ ಸಾಮಾನ್ಯ ಜನರಿಗೆ ದೊಡ್ಡ ದೊಡ್ಡ ಗ್ರಂಥಗಳು ತೆಗೆದುಕೊಂಡು ಓದಲಿಕ್ಕಾಗದಲ್ಲಿ ಈ ಒಂದು ಚಿಕ್ಕ ಕೃತಿಯಲ್ಲಿ ಅಲ್ಪಸ್ವಲ್ಪ ಮಟ್ಟಿಗಾದರೂ ಪೂಜ್ಯ ಶ್ರೀಗಳ ಕಿರು ಪರಿಚಯ ಎಲ್ಲರ ಕೈಗೆಟುಕುವ ಹಾಗೆ ಮಾಡಿದ್ದಾರೆ. ಈ ಮಹಾನ್ ಕಾರ್ಯಕ್ಕೈಗೊಂಡು ಇಂಥ ಸದಾವಕಾಶ ಒದಗಿಸಿಕೊಟ್ಟ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಸುರೇಶ ಚೆನ್ನಶೆಟ್ಟಿಯವರಿಗೂ ಹಾಗೂ ಕ.ಸಾ.ಪ. ದ ಎಲ್ಲ ಅಧ್ಯಕ್ಷರಿಗೂ, ಪದಾಧಿಕಾರಿಗಳಿಗೂ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಚಿಕ್ಕ ಕೃತಿಯನ್ನು ಬರೆಯುವ ಮುನ್ನ ಪೂಜ್ಯರ ಅಪ್ಪಣೆ ಪಡೆಯಬೇಕೆಂದು ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರಿಗೆ ದೂರವಾಣಿ ಮೂಲಕ ವಿನಂತಿಸಿದಾಗ ಅವರು ಒಪ್ಪಿ ಸಂತೋಷದಿಂದ ನನಗೆ ಬೇಕಾದ ಎಲ್ಲಾ ಗ್ರಂಥಗಳನ್ನು ಮತ್ತು ಸಲಹೆ ಸಹಕಾರ ನೀಡಿ ಪ್ರೋತ್ಸಾಹಿಸಿದ ಪೂಜ್ಯರಿಗೆ ತುಂಬು ಹೃದಯದಿಂದ ಭಕ್ತಿಪೂರ್ವಕ ಶರಣು ಶರಣಾರ್ಥಿ ಅರ್ಪಿಸುತ್ತೇನೆ.

ನನಗೆ ವಯಸ್ಸಾಗಿದೆ ನೀನು ಎಷ್ಟು ಅವಸರದಲ್ಲಿ ಹೇಳುತ್ತಿರುವಿ ಆದರೂ ನಿನ್ನ ವಿಶ್ವಾಸಕ್ಕೆ ಮಣಿದು ಬರೆಯುವೆ ಎಂದು ಪ್ರೀತಿಯಿಂದ ಸದಭಿಪ್ರಾಯ ಬರೆದು ಕೊಟ್ಟ ಡಾ. ಎಸ್.ಆರ್. ಗುಂಜಾಳ ಅಪ್ಪನವರಿಗೂ, ಮುನ್ನುಡಿ ಬರೆದಿರುವ ನಾಡೋಜ ಡಾ. ಮನು ಬಳಿಗಾರ ಅವರಿಗೂ, ಅತ್ಯಂತ ಒತ್ತಡದ ಮಧ್ಯೆಯೂ ಆತ್ಮಿಯತೆಯಿಂದ ಲೇಖಕರ ಪರಿಚಯ ಬರೆದುಕೊಟ್ಟ ಸದಾ ನನಗೆ ಪ್ರೋತ್ಸಹಿಸುವ ಶ್ರೀ ರಂಜಾನ್ ದರ್ಗಾರವರಿಗೂ ಹೃತ್ಪೂರ್ವಕ ಶರಣು ಶರಣಾರ್ಥಿ. ಈ ನನ್ನ ಕಾರ್ಯಕ್ಕೆ ಕೈಜೋಡಿದ ಆತ್ಮೀಯ ಸಹೋದರ ಸಚ್ಚಿದಾನಂದ ಮಠಪತಿಯವರಿಗೂ ಅವರ ಬಳಗಕ್ಕೂ ನನ್ನ ಶರಣುಗಳು ಸಲ್ಲುತ್ತವೆ. ಅತ್ಯಂತ ಕಡಿಮೆ ಸಮಯದಲ್ಲಿ ಈ ಕೃತಿ ಬರೆದು ಕೊಡಬೇಕಾಗಿದ್ದರಿಂದ ಎಲ್ಲಾ ರೀತಿಯಿಂದ ಸಹಕರಿಸಿದ ನನ್ನ ಪರಿವಾರದವರೆಲ್ಲರಿಗೂ ಶರಣು ಶರಣಾರ್ಥಿ. ಈ ಚಿಕ್ಕ ಕೃತಿಯನ್ನು ತುಂಬಾ ಕಡಿಮೆ ಬೆಲೆ ಇರುವುದರಿಂದಾಗಿ ಎಲ್ಲರೂ ಸಹೃದಯದಿಂದ ಖರೀದಿಸಿ ಓದುವಿರೆಂಬ ಆಶಯದಿಂದ ಓದುಗರೆಲ್ಲರಿಗೂ, ಸಹಕರಿಸಿದ ಸರ್ವರಿಗೂ ಶರಣು ಶರಣಾರ್ಥಿ.

ಜಯಶ್ರೀ ಪಿ.ಸುಕಾಲೆ

ಬೀದರ.

ಪರಿವಿಡಿ

ಮಾತೃ ಹೃದಯಿ

ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು

ಹಿನ್ನೆಲೆ :

ಕನ್ನಡ ಸಾಹಿತ್ಯಲೋಕದೊಳಗೆ ಪ್ರವೇಶಿಸಿದಾಗ ಅತ್ಯಮೂಲ್ಯವಾದ ವಚನ ಸಾಹಿತ್ಯ ಕಂಡು ಬರುವುದು. ಹನ್ನೆರಡನೆಯ ಶತಮಾನದ ವಚನ ಚಳುವಳಿ ಮಾನವೀಯತೆಗಾಗಿ ನಡೆದ ಚಳುವಳಿ, ಸಮಾನತೆಗಾಗಿ ನಡೆದ ಚಳುವಳಿಯಾಗಿದೆ. ಅನುಭವ ಮಂಟಪವೆಂಬ ವಿಶ್ವಸಂಸ್ಥೆ ಸ್ಥಾಪಿಸಿ ಅದರ ಮೂಲಕ ಜನಸಾಮಾನ್ಯರನ್ನು ಕರುಣೆ ಕಳಕಳಿಯಿಂದ ಸ್ಪರ್ಶಿಸಿ ಅಪ್ಪಿಕೊಂಡು ಅಣ್ಣಾ, ಅಪ್ಪಾ, ಅಯ್ಯಾ ಎಂದು ಒಂದುಗೂಡಿಸಿ ಪುರೋಹಿತರ ಕಪಿಮುಷ್ಟಿಯಿಂದ ಬಿಡಿಸಿ ಸತ್ಯದರ್ಶನ ಮಾಡಿಸುತ್ತಾ ಜನಸಾಮಾನ್ಯರಾದ ಕಸಗೂಡಿಸುವವರು, ತೊಗಲು ಹದಮಾಡುವವರು, ಚಪ್ಪಲಿ ಹೊಲಿಯುವವರ್‍ಯಾರೇ ಆಗಲಿ ಎಲ್ಲಾ ಕಾಯಕ ಜೀವಿಗಳಿಗೆ ಮುಗಿಲೆತ್ತರದ ಅನುಭಾವಿಯರನ್ನಾಗಿ ಮಾಡಿ ಅದ್ಭುತವಾದ ತರಬೇತಿಕೊಟ್ಟರು ಬಸವಣ್ಣನವರು.

ಕಲ್ಯಾಣ ಕರ್ನಾಟಕದ ಅತ್ಯಂತ ಶ್ರೇಷ್ಠ ಮಠಗಳ ಸಾಲಿನಲ್ಲಿ ನಿಂತುಕೊಳ್ಳುವ ಭಾಲ್ಕಿ ಹಿರೇಮಠ ಸಂಸ್ಥಾನ ಭಾರತದ ಪ್ರಸಿದ್ಧ ಲಿಂಗಾಯತ ಮಠಗಳಲ್ಲಿ ಒಂದಾಗಿದೆ. ಶ್ರೀ ಮಠದ ಹಿನ್ನಲೆಯಾಗಿ ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕವಾಗಿ ಒಂದು ಚಿಕ್ಕ ಪಕ್ಷಿನೋಟ ನೋಡೋಣ.

ಹೀರೆಮಠ ಸಂಸ್ಥಾನ ಮೂಲತಃ ಗುರುವರ್ಗದ ಮಠವಾಗಿದೆ. ಆದರೆ ಈ ಮಠ ಧಾರ್ಮಿಕವಾಗಿಯಾಗಲಿ, ಸಾಂಸ್ಕೃತಿಕವಾಗಿಯಾಗಲಿ, ಆಡಳಿತಾತ್ಮಕವಾಗಿಯಾಗಲಿ ಯಾವುದೇ ಸಾಂಪ್ರದಾಯಿಕ ವಿಧಿನಿಯಮಗಳಿಗೆ ಬದ್ಧವಾಗಿಲ್ಲ. ಬಸವಾದಿ ಶರಣರ ತತ್ವದ ತಳಹದಿಯ ನೆಲೆಯಲ್ಲಿ ನಿಂತುಕೊಂಡು ಡಾ.ಚನ್ನಬಸವ ಪಟ್ಟದ್ದೇವರಿಂದಾಗಿ ಸ್ವತಂತ್ರವಾಗಿಯೇ ಬೆಳೆದು ಬಂದಿದೆ.

ಭಾಲ್ಕಿ ಮಠದ ಇತಿಹಾಸದಲ್ಲಿ ಪರಮ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಒಬ್ಬ ಯುಗಪುರುಷರು. "ಒಳಗೆ ಲಿಂಗದ ಕೂಟದಲ್ಲಿ ಮನವಡಗಿರಬೇಕು, ಹೊರಗೆ ಜಂಗಮಮಾಟದಲ್ಲಿ ತನುವಿಡಿದಿರಬೇಕು" ಎಂಬ ವಚನ ವಾಕ್ಯಕ್ಕೆ ಜೀವಂತ ನಿದರ್ಶನವೆನಿಸಿದ್ದರು. ಈ ತತ್ವ ಅವರಲ್ಲಿ ೧೨ನೇ ಶತಮಾನದಷ್ಟು ಹಳೆಯದು, ೨೧ನೆಯ ಶತಮಾನದಷ್ಟು ಹೊಸದು, ಹೀಗಾಗಿ ಅವರ ವ್ಯಕ್ತಿತ್ವದಲ್ಲಿ ಸಂಪ್ರಾದಾಯ ಮತ್ತು ಅದರ ಆಧುನಿಕತೆ ಎದ್ದು ಕಾಣುತ್ತಿತ್ತು. ಡಾ.ಚನ್ನಬಸವ ಪಟ್ಟದ್ದೇವರು ಕಾವಿಉಟ್ಟು, ಕಾಷಾಂಬರ ತೊಟ್ಟು ಮಠದಲ್ಲಿ ಕುಳಿತು ಮಂತ್ರ-ತಂತ್ರ, ದೀಪ-ಧೂಪ, ಜಪ-ತಪ, ಮಡಿ-ಮೈಲಿಗೆ, ತೀರ್ಥ-ಪ್ರಸಾದ, ತಾಯಿತ-ದಾರ, ಟೆಂಗು, ನಿಂಬೆಹಣ್ಣು, ಉಪಹಾರ-ಅನುಷ್ಠಾನ ಎಂದು ಅಮಾಯಕ ಜನರ ಮುಂದೆ ಕನವರಿಸುತ್ತ ವ್ಯರ್ಥಕಾಲ ಕಳೆಯದೆ ಚರ ಜಂಗಮರಾಗಿ ಬಸವಾದಿ ಶರಣರ ಮಾರ್ಗದಲ್ಲಿ ಸಮಾಜದ ಏಳ್ಗೆಗಾಗಿ ಜೀವನ ಪರ್ಯಂತರ ಕಾಯಕಯೋಗಿಯಾಗಿ ಕನ್ನಡ ನುಡಿ ಶಿಕ್ಷಣಕ್ಕಾಗಿ ಹೋರಾಡುತ್ತ ಕನ್ನಡದ ಪಟ್ಟದ್ದೇವರೆ ಆಗಿದ್ದಾರೆ. ಎಂಟು ನೂರು ವರ್ಷದ ನಂತರ ಅದೇ ಕಲ್ಯಾಣ ನಾಡಿನ ಭಾಲ್ಕಿ ಹಿರೇಮಠದಲ್ಲಿ ಬಸವ ಯುಗದ ಜ್ಯೋತಿಯನ್ನು ಹೊತ್ತಿಸಿದ್ದರು. ಅಂಥ ಶರಣ ಸಂಸ್ಕೃತಿಯ ಭವ್ಯ ಪರಂಪರೆಯ ಘನ ಪೀಠಕ್ಕೆ ಶ್ರೀಮದ್ ಘನಲಿಂಗ ಚಕ್ರವರ್ತಿ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ದಿವ್ಯತಾರೆಯಾಗಿ ಬಂದರು.

ಪೂಜ್ಯರಾದ ಡಾ.ಚನ್ನಬಸವ ಪಟ್ಟದ್ದೇವರಿಂದ ಪ್ರಾರಂಭವಾಗಿರುವ ಭಾಲ್ಕಿಯಲ್ಲಿನ ಶರಣ ಸಂಸ್ಕೃತಿಯ ಘನ ಪೀಠಕ್ಕೆ ವಾರಸುದಾರರಾಗಿ ಡಾ.ಬಸವಲಿಂಗ ಪಟ್ಟದ್ದೇವರು ಪೀಠದ ಅಧಿಕಾರ ವಹಿಸಿಕೊಂಡಿದ್ದು ೧೯೮೫ ರಲ್ಲಿ. ಗುರುವಿಗೆ ತಕ್ಕ ಶಿಷ್ಯರಾಗಿ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಮಠದ ಪೀಠ ಅಲಂಕರಿಸಿದ ದಿನದಿಂದಲೂ ಲೋಕಕಲ್ಯಾಣಕ್ಕಾಗಿ ಹಗಲಿರುಳು ದುಡಿಯುತ್ತಿರುವವರು. ಗುರು ಹಾಕಿರುವ ಲೋಕೋದ್ಧಾರದ ದಾರಿಯನ್ನು ಹೆದ್ದಾರಿಯನ್ನಾಗಿ ಮಾಡಿಕೊಂಡು ಮುನ್ನಡೆಯುತ್ತಿರುವವರು. ಬಸವ ಧರ್ಮದ ಪರಂಪರೆಯನ್ನು ಬೆಳೆಸುತ್ತಾ ಶರಣರಂತೆ ನಿರಂತರ ಕಾಯಕದಲ್ಲಿ ತೊಡಗಿಸಿಕೊಂಡು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ ಹೀಗೆ ಮುಂತಾದ ಹಲವಾರು ಕ್ಷೇತ್ರಗಳಲ್ಲಿ ಅವರ ಸಾಧನೆ ಮುಂದುವರೆದಿದೆ.

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಶರಣರ ತತ್ವಗಳನ್ನು ಆಚರಿಸಬೇಕೆಂದು ಹಂಬಲ ತುಂಬಿದ ಮನದಿಂದ ಬಸವಣ್ಣನವರನ್ನು ಕಣ ಕಣದಲ್ಲಿ ತುಂಬಿಕೊಂಡು ತಾಯಿ ಹೃದಯ ಹೊಂದಿರುವ ಪೂಜ್ಯ ಶ್ರೀಗಳು ಸಮಕಾಲಿನ ಸಮಾಜವನ್ನು ಸಂವೇದನಾ ಶೀಲತೆಯಿಂದ ಗಮನಿಸುತ್ತಾ, ಬಂದ ಸಮಸ್ಯೆಗಳಿಗೆ ತೀವ್ರವಾಗಿ ಸ್ಪಂದಿಸುತ್ತಿದ್ದಾರೆ. ಅಜ್ಞಾನ, ಬಡತನ, ನಿರುದ್ಯೋಗ, ಜಾತಿಯತೆ, ಅಸ್ಪೃಶ್ಯತೆಯಂಥ ಸಮಸ್ಯೆಗಳ ನಿರ್ಮೂಲನೆಗಾಗಿ ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ಭೂಕಂಪ, ಬರಗಾಲ, ಸುನಾಮಿ, ನೆರೆಹಾವಳಿಯಂಥ ಸಂದರ್ಭಗಳಲ್ಲಿ ನೊಂದು ಬೆಂದ ಜೀವಿಗಳಿಗೆ ಸಹಾಯ ಸಹಕಾರ ನೀಡುತ್ತಾ ಮಾನವೀಯತೆ ಮೆರೆಯುತ್ತಿದ್ದಾರೆ. ದಲಿತ, ವಿಧವೆ, ವಿಚ್ಛೇದಿತೆ, ವೃದ್ಧ, ಅನಾಥರಂಥ ಲೋಕನಿರ್ಲಕ್ಷಿತ, ನಿರಾಶ್ರಿತ, ನಿರ್ಗತಿಕ, ನಿಶ್ಯಕ್ತ ಜನರನ್ನು ಕಂಡು ದಯೆ ಕರುಣೆಯಿಂದ ಅವರಿಗೆ ಆಶ್ರಯ ನೀಡಿ ಆತ್ಮಸ್ಥೈರ್ಯ ತುಂಬುತ್ತಿದ್ದಾರೆ. ಜಾನುವಾರುಗಳ ಮೇಲೆಯೂ ಸಹ ಜೀವದಯೆ ತೋರುತ್ತಾರೆ. ಉಚಿತ

ಸಾಮೂಹಿಕ ಮದುವೆ, ಅಂತರ್ಜಾತಿ ವಿವಾಹ ಮಾಡಿಸುತ್ತಾ ಸಮಾಜದಲ್ಲಿ ಐಕ್ಯತೆ, ಸಾಮರಸ್ಯತೆ, ಸೌಹಾರ್ದತೆಯಿಂದ ವಿಶ್ವಬಂಧುತ್ವದಂಥ ಮೌಲ್ಯಗಳನ್ನು ಬೆಳೆಸುತ್ತಿದ್ದಾರೆ. ಬಸವಣ್ಣನವರ ನುಡಿಯಂತೆ ಸಕಲ ಜೀವರಾಶಿಗೆ ಲೇಸಾಗಲೆಂಬ ಬಯಕೆ ಪೂಜ್ಯ ಶ್ರೀಗಳದಾಗಿದೆ.

ಭಾಲ್ಕಿ ಹಿರೇಮಠ ಸಂಸ್ಥಾನದ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಬಸವಣ್ಣನವರ ವಚನದಲ್ಲಿ ಬರುವ ದಯವಿಲ್ಲದ ಧರ್ಮವದಾವುದಯ್ಯಾ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ, ದಯವೇ ಧರ್ಮಧ ಮೂಲವಯ್ಯಾ ಕೂಡಲಸಂಗಯ್ಯಾ ನಂತಲ್ಲದೊಲ್ಲನಯ್ಯಾ ಎಂಬ ವಚನದಂತೆ ದಯಾಗುಣ ಅವರ ರೋಮ ರೋಮಗಳಲ್ಲಿ ವ್ಯಾಪಿಸಿದೆ. ೧೨ನೇ ಶತಮಾನದಲ್ಲಿ ಬಸವಣ್ಣ ಹಾಗೂ ೨೦ನೇ ಶತಮಾನದಲ್ಲಿ ಡಾ.ಚನ್ನಬಸವ ಪಟ್ಟದ್ದೇವರು ಹೇಗೋ ಹಾಗೆಯೇ ಈ ಕಾಲದಲ್ಲಿ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ದಯೆಯೇ ಧರ್ಮದ ಮೂಲವೆಂಬ ನೆಲೆಯಲ್ಲಿ ಸಾಮಾಜಿಕ ಅದ್ಭುತ ಕಾರ್ಯ ಸಾಧನೆ ಮಾಡುವ ನಿಟ್ಟಿನಲ್ಲಿದ್ದಾರೆ.

ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ದೃಷ್ಟಿಯಲ್ಲಿ ಧರ್ಮವೆಂದರೆ ಗುಡಿ-ಗುಂಡಾರಗಳಲ್ಲ. ದೇವರೆಂದರೆ ಆ ಗುಡಿಯೊಳಗೆ ಇರುವ ಕಲ್ಲು, ಕಟ್ಟಿಗೆ, ಕಂಚು, ಹಿತ್ತಾಳೆ, ಬೆಳ್ಳಿ ಚಿನ್ನದ ಮೂರ್ತಿಗಳಲ್ಲ. ಲಿಂಗವೆಂದರೆ ಸ್ಥಾವರ ಲಿಂಗವಲ್ಲ. ಧರ್ಮ ಸಾಹಿತ್ಯವೆಂದರೆ ವೇದ, ಶಾಸ್ತ್ರ, ತರ್ಕ, ಪುರಾಣಗಳಲ್ಲ. ಅಭಿಷೇಕ, ದೀಪೋತ್ಸವ, ಎಲೆಪೂಜೆ, ತೀರ್ಥಯಾತ್ರೆಯಂಥ ಕನಿಷ್ಠ ಧರ್ಮಾಚರಣೆಯ ಮಾರ್ಗಹಿಡಿದು, ಮುಗ್ಧಜನರನ್ನು ಮೌಢ್ಯತೆಗೆ ನೂಕುವವರಲ್ಲ. ಅವರ ಪಾಲಿಗೆ ಎಲ್ಲರೂ ವೈಚಾರಿಕ ಹಾಗೂ ವೈಜ್ಞಾನಿಕ ದೃಷ್ಟಿಯಿಂದ ಕೂಡಿದ ಬಸವಣ್ಣನವರು ಕೊಟ್ಟ ಇಷ್ಟಲಿಂಗ ಪೂಜೆ ಮಾಡಿಕೊಂಡು, ಅವರು ಸ್ಥಾಪಿಸಿದ ಲಿಂಗಾಯತ ಧರ್ಮ ಪಾಲಿಸಬೇಕೆಂಬ ಹಂಬಲದಿಂದ ಬಸವ ಧರ್ಮದ

ವಿಶ್ವಮೌಲ್ಯಗಳನ್ನೊಳಗೊಂಡ ವಚನ ಸಾಹಿತ್ಯಕ್ಕಾಗಿಯೇ ತಮ್ಮ ಜೀವನವನ್ನೇ ಸಮರ್ಪಿಸಿಕೊಂಡು ಇಡೀ ವಿಶ್ವಕ್ಕೆ ಬಸವ ಧರ್ಮದ ಭದ್ರ ತಳಹದಿ ಒದಗಿಸಬೇಕೆಂಬ ಮಹಾನ್ ಉದ್ದೇಶ ಹೊತ್ತುಕೊಂಡು ಹಗಲಿರುಳು ಶ್ರಮಿಸುತ್ತಾ ಮಠದ ಆಶ್ರಯದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಚನ ಸಾಹಿತ್ಯದ ತತ್ವಗಳನ್ನು ಲೋಕಾದಾದ್ಯಂತ ವಿಸ್ತರಿಸುತ್ತಿದ್ದಾರೆ.

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ದೇಶಿ ಭಾಷೆಯ ಜೊತೆಗೆ ದೇಶಿ ಸಂಸ್ಕೃತಿಯ ಕಡೆಗೂ ವಿಶೇಷ ಒಲವು ಹೊಂದಿದ್ದಾರೆ. ಜಾಗತೀಕರಣದ ಈ ಯುಗದಲ್ಲಿ ವಚನ ಸಾಹಿತ್ಯದ ಜೊತೆ ಜೊತೆಗೆ ವಚನ ಸಂಗೀತ, ಭಜನೆ, ರಂಗೋಲಿ, ಯೋಗ, ಜನಪದ ಕ್ರೀಡೆಗಳಂಥ ದೇಶಿ ಕಲೆಗಳನ್ನು ಬೆಳೆಸುತ್ತಿರುವ ಪೂಜ್ಯ ಶ್ರೀಗಳ ಸಾಹಿತ್ಯಿಕ ಸಾಧನೆಯು ಕೂಡ ಉನ್ನತವಾದ್ದದಾಗಿದೆ. ಪೂಜ್ಯರು ಸಾಹಿತಿಯಾಗಿ ಅನೇಕ ಕೃತಿಗಳನ್ನು ರಚಿಸಿದ್ದಲ್ಲದೆ ಪ್ರಕಾಶಕರಾಗಿ, ಪೋಷಕರಾಗಿ ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸುತ್ತಿದ್ದಾರೆ. ಇದುವರೆಗೆ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಕನ್ನಡವಲ್ಲದೆ ಅನ್ಯ ಭಾಷೆಗಳಲ್ಲೂ ಶರಣರ ತತ್ವ ಗಳನ್ನು ಪ್ರತಿಬಿಂಬಿಸುವ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಶರಣ ಸಾಹಿತ್ಯ, ಸಂಸ್ಕೃತಿಯನ್ನು ಕರ್ನಾಟಕದಾಚೆ ಹೊರ ದೇಶದಲ್ಲಿಯೂ ಕೂಡ ಪಸರಿಸುತ್ತಿರುವುದು ಶ್ರೀಗಳ ಮಹತ್ವವಾದ ಕಾರ್ಯಗಳಲ್ಲೊಂದಾಗಿದೆ.

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಜೀವನ :

ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಮೂಲತಃ ಅಂದಿನ ಆಂಧ್ರಪ್ರದೇಶ ಇಂದಿನ ತೆಲಂಗಾಣದ ಮೇದಕ ಜಿಲ್ಲೆಯ ನಾರಾಯಣಖೇಡ ತಾಲ್ಲೂಕಿನ ನಾಗೂರು ಗ್ರಾಮದವರು. ಹೈದ್ರಾಬಾದ ನಿಜಾಮನ ಕಾಲದಲ್ಲಿ ಬೀದರ ಜಿಲ್ಲೆಯಲ್ಲಿಯೇ ಇದ್ದ ನಾಗೂರುಗ್ರಾಮ ಪ್ರಾರಂಭದಿಂದಲೂ ಕನ್ನಡವನ್ನೇ ಮಾತೃ ಭಾಷೆಯನ್ನಾಗಿ ಹೊಂದಿದೆ. ವಾಸ್ತವಿಕವಾಗಿ ಕರ್ನಾಟಕದ್ದೇ ಆಗಿರುವ ನಾಗೂರು ಗ್ರಾಮ ಅಂದು ಆಂಧ್ರದಲ್ಲಿದ್ದರೂ(ಇಂದಿನ ತೆಲಂಗಾಣ) ಕರ್ನಾಟಕದೊಂದಿಗೇನೇ ಹೆಚ್ಚಿನ ಸಂಬಂಧವಿರುವ ಕೆಲವೇ ಮನೆಗಳಿಂದ ಕೂಡಿದ ಒಂದು ಪುಟ್ಟ ಗ್ರಾಮವಾಗಿತ್ತು.೧೯ನೇ ಶತಮಾನದ ನಾವದಗಿ ಗ್ರಾಮದ ಮಹಾನುಭಾವಿ ರೇವಪ್ಪಯ್ಯಾನವರ ಪಾದಸ್ಪರ್ಶ-ಲಿಂಗಾನುಷ್ಠಾನದಿಂದ ಹಾಗೂ ಪೂಜ್ಯ ಲಿಂಗೈಕ್ಯ ಡಾ.ಚನ್ನಬಸವ ಪಟ್ಟದ್ದೇವರು ಆ ಊರ ಜನತೆಯ ಜೀವಾಳವಾಗಿ ಇಡೀ ಗ್ರಾಮವೇ ಧನ್ಯತೆ ಪಡೆದುಕೊಂಡಿತ್ತು.

ಪೂಜ್ಯರ ಜನನ-ಬಾಲ್ಯ:

ನಾಗೂರು ಗ್ರಾಮದ ಕಾಡೋದೆ ಮನೆತನದ ರಾಚಪ್ಪ ಮತ್ತು ಭಾಗೀರಥಿ ದಂಪತಿಯರು ಬಸವವಾಣಿಯಾದ "ಮನೆ ನೋಡಾ ಬಡವರು ಮನ ನೋಡಾ ಘನಮನ ಸಂಪನ್ನರು" ಎಂಬಂತೆ ಮನೆಯಿಂದ ಬಡವರಾದರೂ ಮನಸ್ಸಿನಿಂದ ಶ್ರೀಮಂತರಾಗಿದ್ದರು. ಸಾತ್ವಿಕತೆ, ಸದ್ಗುಣ, ಸಂಪನ್ನತೆಯಿಂದ ಕೂಡಿದ ಅವರು ನಾಗೂರು ಗ್ರಾಮದಲ್ಲಿ ಅತ್ಯಂತ ಸ್ವಾಭಿಮಾನಿಗಳಾಗಿ ನ್ಯಾಯ-ನೀತಿಯಿಂದ ಬದುಕಿದವರು, ಧರ್ಮ-ಶಿಕ್ಷಣದ ಬಗ್ಗೆ ವಿಶೇಷ ಒಲವನ್ನಿಟ್ಟುಕೊಂಡು ಜೀವನ ಸಾಗಿಸುತ್ತಿದ್ದ ದಂಪತಿಯರ ಉದರದಲ್ಲಿ ೧೯೫೦ ರ ಆಗಸ್ಟ್ ೨೫ ರಂದು ನಾಗೂರು ಗ್ರಾಮಕ್ಕೆ ಸುದಿನ. ಅದರಲ್ಲೂ ಕಾಡೋದೆ ಮನೆತನದಲ್ಲಿ ಶಿವ ಮೊಗ್ಗೊಂದು ಅರಳಿದ ಆನಂದದ ಸುದ್ದಿ ಔರಾದನ ಘೂಳೆ ಮನೆತನದಿಂದ ಕಾಡೋದೆ ಮನೆತನದಲ್ಲಿ ಸಂತಸ ಮೂಡಿಸುತ್ತದೆ.

ಭಾಗೀರಥಿ ಚೊಚ್ಚಲ ಹೆರಿಗೆಗಾಗಿ ತವರೂರಾದ ಔರಾದಕ್ಕೆ ಹೋಗಿದ್ದಳು. ಅಲ್ಲಿ ತಮ್ಮ ಮೊದಲ ಮಗುವಿಗೆ ಜನ್ಮ ನೀಡುತ್ತಾಳೆ. ಆ ಮಗುವೇ ಶಿವರಾಜ. ಇಂದಿನ ಪೂಜ್ಯ ಶ್ರೀಗಳಾಗಿದ್ದಾರೆ. ಮಗು ಹುಟ್ಟಿದ ವಾರ್ತೆ ಸಂತಸ ಮೂಡಿಸಿದರೂ, ಹುಟ್ಟಿದ ಮಗು ಅಳಲಿಲ್ಲ. ಭಾಗೀರಥಿಗೆ ಗಾಬರಿಯಾಯಿತು. ಇದು ಅಳುವ ಮಗು ಅಲ್ಲವೆಂದು ಆ ತಾಯಿಗೇನು ಗೊತ್ತು ತನ್ನ ಮಗು ಅಳುವವರನ್ನು ಸಂತೈಸುವ ಶಿಶುವಾಗಿ ತನೊನ್ಡಲಾಳದಲ್ಲಿ ಅರಳಿ ಮುಂದೆ ಅನೇಕರಿಗೆ ಮಾರ್ಗದರ್ಶಿಯಾಗುತ್ತಾನೆಂಬ ಮುಂದಾಲೋಚನೆ ಯಾರಿಗೆ ಬರಲು ಸಾಧ್ಯ? ಸಹಜವಾಗಿ ಮಗು ಅಳದೆ ಇದ್ದಾಗ ಆತಂಕಗೊಳ್ಳುತ್ತಾಳೆ. ಮತ್ತೊಂದು ಕ್ಷಣದಲ್ಲಿ ತನಗೆ ತಾನೇ ಧೈರ್ಯವನ್ನು ತಂದುಕೊಂಡು ನನ್ನ ಮಗ ಮನಸ್ಸಿನಲ್ಲಿಯೇ ಶಿವಧ್ಯಾನ ಮಾಡುತ್ತಾನೆ ಎನ್ನುತ್ತಾ ಸಮಾಧಾನವಾಗುತ್ತಿದ್ದರು.

ದಿನಗಳೆದಂತೆ ಶಿವರಾಜ ಹುಟ್ಟಿದಾಗ ಅಳಲಿಲ್ಲ. ವರ್ಷಗಳು ತುಂಬುತ್ತಿದ್ದರೂ ಬಾಯಿಂದ ಮಾತುಗಳೇ ಹೊರಬರಲಿಲ್ಲ. ಆಗಂತೂ ಹೆತ್ತ ಕರುಳಿಗೆ ಸಂಕಟದ ಚಡಪಡಿಕೆ ಸಹಜವಾಗಿ ಆಯಿತು. ಒಂದಲ್ಲ-ಎರಡಲ್ಲ, ಏಳು ವರ್ಷಗಳವರೆಗೆ ಭಾಗೀರಥಿ ಈ ನೋವನ್ನು ಮೌನವಾಗಿ ಅನುಭವಿಸಿದಳು.

ಕಂಡ ಕಂಡ ದೇವರಿಗೆ ಕೈ ಮುಗಿದಳು. ಹರಕೆ ಹೊತ್ತಳು ತವರಿನ ಪಕ್ಕದ ಬಸವಣ್ಣ-ಆಂಧ್ರದ ಝುರಾ ಸಂಗಮನಾಥನಲ್ಲಿ ಬೇಡಿಕೊಂಡು ಗಂಟೆ ಕಟ್ಟಿದರೂ ಶಿವರಾಜರ ಗಂಟಲು ತೆಗೆಯಲಿಲ್ಲ. ಎಲ್ಲರೂ ಮಗುವನ್ನು ಮೂಕನೆಂದು ಭಾವಿಸಿ ಪ್ರಯತ್ನವೆಲ್ಲ ವ್ಯರ್ಥವೆಂದರು. ಆದರೂ ತಾಯಿಯ ಕರುಳು ಸುಮ್ಮನಿರಲಿಲ್ಲ. ಅವರು ತನ್ನ ಪ್ರಯತ್ನವನ್ನು ಮುಂದುವರೆಸಿದರು.

ಔರಾದದ ಗ್ರಾಮ ದೇವತೆ ಅಮರೇಶ್ವರ, ಪ್ರಾಚೀನ ಕಾಲದಿಂದಲೂ ಈ ದೇವಸ್ಥಾನ ಆ ಭಾಗದಲ್ಲಿ ತುಂಬಾ ಪ್ರಸಿದ್ಧವಾಗಿದೆ. ಅಲ್ಲಿಯ ಗುಡಿಯಲ್ಲಿ

ಗಂಟೆ ಕಟ್ಟಿದರೆ ಮಗುವಿಗೆ ಮಾತು ಬರಬಹುದೆಂಬುದು ಭಾಗೀರಥಿಯ ಮನದಾಸೆಯನ್ನು ತನ್ನ ತಂದೆ ಮಡಿವಾಳಪ್ಪನವರಿಗೆ ತಿಳಿಸುತ್ತಾಳೆ.

ಮಡಿವಾಳಪ್ಪ ತುಂಬ ವಿಚಾರವಂತರಾಗಿದ್ದರು. ಆ ಕಾಲದಲ್ಲಿ ಖ್ಯಾತರಾಗಿದ್ದ ಭಾಲ್ಕಿಯ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರ ನಿಷ್ಠಾವಂತ ಭಕ್ತರಾಗಿದ್ದರು. ಅವರಿಗೆ ಗುಡಿ-ಗುಂಡಾರ, ದೇವರು-ದಿಂಡಿರುಗಳ ಮೇಲೆ ಯಾವ ನಂಬಿಕೆಯೂ ಇದ್ದಿರಲಿಲ್ಲ. ಇಷ್ಟು ದಿವಸ ಅವರು ಮಗಳ ಮನಸ್ಸಿಗೆ ನೋವಾಗಬಾರದೆಂದು ಅವಳು ಯಾವ ದೇವರ ಹೆಸರಿನಲ್ಲಿ ಏನೇ ಮಾಡಿದರೂ ನೋಡಿಯೂ ನೋಡದಂತೆ ಸುಮ್ಮನಾಗಿದ್ದರು. ಆದರೆ ಈ ಸಲ ಅಮರೇಶ್ವರ ದೇವಸ್ಥಾನದಲ್ಲಿ ಗಂಟೆ ಕಟ್ಟಬೇಕೆನ್ನುವ ಮಗಳ ವಿಚಾರವನ್ನು ಮಡಿವಾಳಪ್ಪ ಒಪ್ಪುವುದಿಲ್ಲ.

ನೋಡು ಮಗಳೇ ಯಾವ ದೇವರಿಗೆ ಗಂಟೆ ಕಟ್ಟಿದ್ದರೂ ಪ್ರಯೋಜನವಿಲ್ಲ ನನ್ನ ಮಾತಿನಿಂದ ನಿನಗೆ ನೋವಾಗಬಹುದು ನನಗಂತೂ ನಿನ್ನ ಸ್ಥಿತಿ ನೋಡಲಿಕ್ಕಾಗದು. ನಮ್ಮ ಪಾಲಿಗೆ ನಿಜವಾದ ದೇವರೆಂದರೆ ಗುಡಿಯೊಳಗಿರುವ ಕಲ್ಲಿನ ಮೂರ್ತಿಯಲ್ಲ. ಮಾತಾಡುವ ದೇವರನ್ನು ಬಿಟ್ಟು ಮಾತಾಡದ ದೇವರ ಬೆನ್ನ ಹತ್ತಿರುವ ನಿನಗೆ ನಾನು ಹೇಗೆ ಹೇಳಲಿ ಭಾಲ್ಕಿಯಲ್ಲಿ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರಿದ್ದಾರೆ. ಮಗುವನ್ನು ಕರೆದುಕೊಂಡು ಅಲ್ಲಿಗೆ ಹೋಗೋಣ. ಅವರ ದರ್ಶನ ಮಾಡಿಸಿಕೊಂಡು ಬರೋಣ ಎಂದು ಮಡಿವಾಳಪ್ಪನವರು ಮಗಳು ಭಾಗೀರಥಿ ಮತ್ತು ಮಗುವನ್ನು ಕರೆದುಕೊಂಡು ಭಾಲ್ಕಿಯಲ್ಲಿ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರ ಆಶೀರ್ವಾದವೂ ಪಡೆದುಕೊಂಡು ಬರುತ್ತಾರೆ. ಹೀಗೆ ಅವಳು ಮಗನಿಗೆ ಮಾತು ಬರಲೆಂದು ಏನೆಲ್ಲಾ ಪ್ರಯತ್ನ ಮಾಡುತ್ತಾಳೆ. ಕೊನೆಗೆ ಏಳು ವರ್ಷಗಳ ನಂತರ ಮಾತು ಬರುವ ಸಂದರ್ಭ ಬಂದು 'ಘಂಟೆ' ಎಂಬ ಶಬ್ದ ಆ ಮಗುವಿನ ಧ್ವನಿ ಪಟಲವನ್ನು ಸೀಳಿಕೊಂಡು ಶಬ್ದ ಹೊರಬರುತ್ತದೆ. ಅದನ್ನು ಕೇಳಿದ

ಭಾಗೀರಥಿಗೆ ಭಾಗ್ಯದ ಬಾಗಿಲೇ ತೆರೆದಂತಾಯಿತು. ಹಿರಿಹಿರಿ ಹಿಗ್ಗಿ ಗುರು ಕರುಣಿಸಿದರೆಂದು ಕೈ ಮುಗಿದಳು.

ಶಿವರಾಜರು ಬಾಲ್ಯದಿಂದಲೂ ತುಂಬ ಸಹನಶೀಲ ಸ್ವಭಾವ ಹೊಂದಿದವರು. ನೋವು-ನಲಿವುಗಳೇನೆ ಇದ್ದರೂ ಯಾರ ಮುಂದೆಯೂ ಹೇಳುತ್ತಿರಲಿಲ್ಲ. ಹಸಿವಾದರೂ ಕೂಡ ತಾಯಿ ಮುಂದೆಯೂ ಸಹ ಬಾಯ್ಬಿಡುತ್ತಿರಲಿಲ್ಲ. ಅವರ ಸ್ವಭಾವ ನಯ ನಾಜೂಕಿನಿಂದ ಕೂಡಿತ್ತು. ಅವರಿಗೆ ಇಷ್ಟವಾದ ಊಟವೆಂದರೆ ಹಾಲು-ಅನ್ನ ಇಲ್ಲವೆ ಹಾಲು-ಬೆಲ್ಲ, ರೊಟ್ಟಿ ಪ್ರತಿನಿತ್ಯ ಅವರು ಅದನ್ನೇ ಊಟ ಮಾಡುವುದನ್ನು ಕಂಡು ಅವರ ತಾಯಿ ಏನಿದು? ಸ್ವಲ್ಪವಾದರೂ ಖಾರ ತಿನ್ನಬಾರದೆ? ಖಾರ ತಿನ್ನದಿದ್ದರೆ ನಿನ್ನಲ್ಲಿ ಶಕ್ತಿ ಬರುವುದಾದರೂ ಹೇಗೆ? ಎಂದು ಕಾಳಜಿ ಪೂರ್ವಕವಾಗಿ ಗದರಿಸುತ್ತಿದ್ದಳು. ಆಗ ಬಾಲಕ ಶಿವರಾಜರ ಮನಸ್ಸಿಗೆ ತುಂಬಾ ಬೇಸರವಾಗುತ್ತಿತ್ತು ಒಂದೆಡೆ ಹೋಗಿ ಗಳಗಳನೇ ಅಳುವುದರ ಮೂಲಕ ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಿದ್ದರು.

ಬಾಲಕ ಶಿವರಾಜರಲ್ಲಿ ವಯಸ್ಸಿಗೆ ಮೀರಿದ ವೈಚಾರಿಕತೆ ಇತ್ತು. ಅಪಾರವಾದ ಸಾಮಾಜಿಕ ಕಳಕಳಿ ಇತ್ತು ಹೀಗಾಗಿ 'ಬೆಳೆವ ಸಿರಿ ಮೊಳಕೆಯಲ್ಲಿ' ಎನ್ನುವಂತೆ ಸಾಮಾಜಿಕ ಅನುಕಂಪವುಳ್ಳ ಸ್ವಾಮೀಜಿ ಎನಿಸಿಕೊಂಡಿರುವ ಬಸವಲಿಂಗ ಪಟ್ಟದ್ದೇವರ ಈ 'ಬಸವಾನುಕಂಪ' ಎಂಬ ದೊಡ್ಡ ಗುಣ ಅವರಲ್ಲಿ ಬಾಲಕರಿದ್ದಾಗಲೆ ಅಂಕುರಿಸಿತೆಂದು ಹೇಳಬಹುದು. ಜಾತಿಯತೆಯನ್ನು ಬಾಲ್ಯದಿಂದಲೇ ಒಪ್ಪದೇ ಎಲ್ಲರನ್ನು ಅಪ್ಪಿಕೊಂಡು ಬದುಕುವ ಆತ್ಮೀಯ ಗುಣವೇ ಅವರನ್ನು ಮಹಾತ್ಮರನ್ನಾಗಿಸಿತು.

ಶಿಕ್ಷಣ :

ನಾಗೂರು ಗ್ರಾಮದಲ್ಲಿ ಶಿವರಾಜರು ಓದಲು ಪ್ರಾರಂಭಿಸಿದ ಕಾಲದಲ್ಲಿಯೇ ಸರ್ಕಾರಿ ಕನ್ನಡ ಕಿರಿಯ ಪ್ರಾಥಮಿಕ ಶಾಲೆ ಆರಂಭವಾಗಿತ್ತು. ಶಾಲೆಗೆ ಕಟ್ಟಡವಿರಲಿಲ್ಲ. ಗ್ರಾಮದ ಹನುಮಾನ ಮಂದಿರದಲ್ಲಿ ನಡೆಸಬೇಕೆಂದು ಒಬ್ಬ ಶಿಕ್ಷಕರನ್ನು ನೇಮಿಸಿತ್ತು. ಆದರೆ ಅಲ್ಲಿ ಶಿಕ್ಷಕರೂ ಸರಿಯಾಗಿ ಶಾಲೆಗೆ ಬರುತ್ತಿರಲಿಲ್ಲ. ಯಾವ ಪಾಲಕರೂ ಅಲ್ಲಿಗೆ ಮಕ್ಕಳನ್ನು ಕಳಿಸುತ್ತಿರಲಿಲ್ಲ. ಏಕೆಂದರೆ ಅದೇ ಹನುಮಾನ ಮಂದಿರದಲ್ಲಿಯೇ ಖಾಸಗಿ ಕನ್ನಡ ಶಾಲೆಯೊಂದು ಶಂಕರ ಹೊಡಗೆ ಎಂಬವರು ನಿಷ್ಠಾವಂತ ಶಿಕ್ಷಕರಾಗಿದ್ದರು ಅವರು ಮಕ್ಕಳಿಗೆ ತುಂಬಾ ಉತ್ತಮ ರೀತಿಯಿಂದ ಅಭ್ಯಾಸ ಮಾಡಿಸುತ್ತಿದ್ದರು. ಅದಕ್ಕಾಗಿ ಎಲ್ಲರೂ ತಮ್ಮ ಮಕ್ಕಳನ್ನು ಖಾಸಗಿ ಶಾಲೆಯಲ್ಲಿಯೇ ಕಳಿಸುತ್ತಿದ್ದರು. ಶಿವರಾಜರಿಗೂ ಕೂಡ ಪ್ರಾರಂಭದ ಅಭ್ಯಾಸವೂ ಕೂಡ ಶಂಕರ ಹೊಡಗೆಯವರ ಖಾಸಗಿ ಶಾಲೆಯಲ್ಲಿಯೇ ನಡೆಯುತ್ತದೆ. ಆ ಕಾಲದಲ್ಲಿ ಬರೆಯುವುದಕ್ಕೆ ಪೆನ್ನಿನ ಅನುಕೂಲತೆ ಇದ್ದಿರಲಿಲ್ಲ. ಅದಕ್ಕಾಗಿ ಗಲಗವನ್ನು ಬಳಸಿ ಕನ್ನಡದ ಅ ಆ ಇ ಅಕ್ಷರಗಳನ್ನು ತೀಡುತ್ತಾ ೪ನೇ ತರಗತಿಯವರೆಗೆ ಕಲಿತರು. ಮುಂದಿನ ಶಿಕ್ಷಣಕ್ಕೆ ನಾಗೂರದಲ್ಲಿ ಯಾವುದೇ ಅನುಕೂಲತೆಗಳಿದ್ದಿರಲಿಲ್ಲ. ಆದ್ದರಿಂದ ಮುಂದಿನ ಓದು ಔರಾದ ಪಟ್ಟಣದಲ್ಲಿ ಅಜ್ಜಿಯ ಮನೆಯಲ್ಲಿದ್ದು ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಮುಂದುವರೆಸಿದರು.

ಭಾಗೀರಥಿ ರಾಚಪ್ಪ ದಂಪತಿಯರು ಮಕ್ಕಳು ಚೆನ್ನಾಗಿ ಓದಬೇಕೆಂಬ ಹಂಬಲದಿಂದ ತಮ್ಮಲಿದ್ದ ಬೆಳ್ಳಿ ಬಂಗಾರವನ್ನು ಮಾರಿ, ಹಣ ತೆಗೆದುಕೊಂಡು ೧೯೬೩ ರಲ್ಲಿ ಔರಾದಲ್ಲಿ ಮನೆ ಮಾಡಿಕೊಂಡು ತಮ್ಮ ಮಕ್ಕಳನ್ನು ಅಲ್ಲೇ ಮಾಧ್ಯಮಿಕ ಶಾಲೆಗೆ ಸೇರಿಸಿದರು. ಮಕ್ಕಳು ಓದಿ ವಿದ್ಯಾವಂತರಾಗಿ ಸರ್ಕಾರಿ ಅಧಿಕಾರಿಗಳಾಗಬೇಕು ಎಂಬ ಹಿರಿದಾದ ಉದ್ದೇಶದಿಂದ ಬಡತನವನ್ನು ಮೆಟ್ಟಿನಿಂತು ತಮ್ಮ ಮಕ್ಕಳಾದ ಶಿವರಾಜ,

ಸೋಮನಾಥ ಮತ್ತು ಸಂಗಪ್ಪ ಎಂಬ ಮೂವರಿಗೂ ಶಿಕ್ಷಣ ಕೊಡಿಸುವುದಕ್ಕೆ ಮುಂದಾದರು.

ಶಿವರಾಜರು ಅಜ್ಜನ ಮನೆಯಿಂದ ತಂದೆ-ತಾಯಿಯರ ಜೊತೆಯಲ್ಲಿ ಇದ್ದು ತನ್ನ ವಿದ್ಯಾಬ್ಯಾಸ ಮುಂದುವರೆಸಿದರು. ಅವರು ಓದಲು ಸೇರಿದ ಶಾಲೆ ಸಂಯುಕ್ತ ಪ್ರೌಢ ಶಾಲೆಯಾಗಿತ್ತು. ಕನ್ನಡ, ಮರಾಠಿ ಮಾಧ್ಯಮಗಳೆರಡೂ ಈ ಶಾಲೆಯಲ್ಲಿದ್ದು ವಿದ್ಯಾರ್ಥಿಗಳು ತಮ್ಮ ತಮ್ಮ ಆಸಕ್ತ ಮಾಧ್ಯಮದಲ್ಲಿ ಓದಬಹುದಾಗಿತ್ತು. ೩೫ ಜನ ಶಿಕ್ಷಕರು ಈ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ರು. ಇಂಥ ದೊಡ್ಡದಾದ ಕನ್ನಡ ಮಾಧ್ಯಮ ಶಾಲೆಯಲ್ಲಿ ತಮ್ಮ ಕಲಿಕೆ ಮುಂದುವರೆಸಿದರು.

ಈಗ ಕರ್ನಾಟಕದಲ್ಲಿ ಕನ್ನಡ ಮಾಧ್ಯಮದಲ್ಲಿ ಇಷ್ಟೊಂದು ದೊಡ್ಡ ಶಾಲೆ ನೋಡಲು ಸಿಗುವುದು ತುಂಬಾ ಕಷ್ಟವಾಗಿದೆ. ಎಲ್ಲರೂ ಇಂಗ್ಲೀಷ್ ಭಾಷಾ ವ್ಯಾಮೋಹಕ್ಕೆ ಸಿಕ್ಕಿ, ಪಾಲಕ-ಪೋಷಕರೂ ಕೂಡ ಇಂಗ್ಲಿಷ್ ಮಾಧ್ಯಮದತ್ತ ಮುಖ ಮಾಡಿದ್ದಾರೆ. ಅದಕ್ಕಾಗಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ದಿನೇ ದಿನೇ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಹಾಗೆ ನೋಡಿದರೆ ಕನ್ನಡ ಮಾಧ್ಯಮ ಶಾಲೆಯಲ್ಲಿ ಕಲಿತಂಥ ಅನೇಕ ಸಾಧಕರು, ಪ್ರತಿಭಾವಂತರು ನಮ್ಮ ಸಮಾಜದಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ. ಇಂತಹ ಸಾಧಕರಲ್ಲಿ ನಮ್ಮ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಒಬ್ಬರು. ಇವರು ಬಾಲ್ಯದಲ್ಲಿ ಅತ್ಯಂತ ಶಿಸ್ತಿನ ವಿದ್ಯಾರ್ಥಿ, ಪ್ರತಿನಿತ್ಯ ಬೆಳಗಿನ ಜಾವ ೫ ಗಂಟೆಗೆ ಎದ್ದು ಸ್ನಾನ ಮಾಡಿ ಹಣೆಗೆ ವಿಭೂತಿ ಧರಿಸಿ ಇಷ್ಟಲಿಂಗ ಪೂಜೆ ಮುಗಿಸಿ ಶಾಲೆಗೆ ಹೋಗುತ್ತಿದ್ದರು. ಶಾಲೆಯಲ್ಲಿ ಆಗಾಗ ನಡೆಯುತ್ತಿದ್ದ ಭಾಷಣ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಅತ್ಯಂತ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಇವರ ನಿರಂತರ ಓದು ಶಾಂತ ಸ್ವಭಾವ ನಿಷ್ಠೆ, ಪ್ರಾಮಾಣಿಕತೆ ಮತ್ತು ಕ್ರೀಯಾಶೀಲತೆಯ ಗುಣಗಳು ಶಿಕ್ಷಕರಿಗೆ ತುಂಬಾ ಮೆಚ್ಚಿಗೆಯಾಗಿತ್ತು.

ಶಿಕ್ಷಕರ ಅಚ್ಚು ಮೆಚ್ಚಿನ ವಿದ್ಯಾರ್ಥಿಯಾಗಿ ಅಭ್ಯಾಸ ಮುಂದುವರೆದು ಔರಾದನಲ್ಲಿಯೇ ಹೈಸ್ಕೂಲ್ ಓದುತ್ತಿದ್ದಾಗ ಅವರ ಕುಟುಂಬದಲ್ಲಿ ಬಡತನದ ಪರಿಸ್ಥಿತಿ ಇನ್ನಷ್ಟು ಉಲ್ಬಣಗೊಂಡಿತ್ತು. ಆಗ ಆವರ ಸಂಬಂಧಿಕರಾದ ಚಿಕ್ಕಪ್ಪ ಕುನಮಾರಪಳ್ಳಿ ನಾಗಶೆಟ್ಟೆಪ್ಪಾ ಗಂದಿಗುಡೆಯವರ ಸಹಕಾರ ಪಡೆದು ಶಿವರಾಜರವರು ಔರಾದದ ಪ್ರೌಢ ಶಾಲೆಯಲ್ಲಿ ೧೦ನೇ ತರಗತಿಯವರೆಗೆ ಅಭ್ಯಾಸ ಮಾಡಿದರು. ೧೯೬೮-೬೯ನೇ ಶೈಕ್ಷಣಿಕ ವರ್ಷದಲ್ಲಿ ಅವರು ೧೦ನೇ ತರಗತಿಯ ಪರೀಕ್ಷೆಯನ್ನು ಔರಾದ ತಾಲ್ಲೂಕಿನ ಕಮಲನಗರದ ಶಾಂತಿವರ್ಧಕ ಪ್ರೌಢ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದು ೧೦ನೇ ತರಗತಿಯಲ್ಲಿ ಉತ್ತೀರ್ಣರಾಗುತ್ತಾರೆ.

ಕಾಲೇಜು ಶಿಕ್ಷಣ :

ಶಿವರಾಜರು ಅನೇಕ ಕಷ್ಟಗಳು ಬಂದರೂ ಸಹ ಎದುರಿಸುತ್ತಾ ಹತ್ತನೇ ತರಗತಿ ಒಮ್ಮೆಲೇ ಪಾಸು ಮಾಡಿದ್ದಕ್ಕಾಗಿ ಸಂತೋಷ ಒಂದೆಡೆಯಾದರೆ ಕಾಲೇಜಿಗೆ ಕಳುಹಿಸುವ ಸಾಮರ್ಥ್ಯ ಇಲ್ಲವೆಂಬ ಕೊರಗು ಇನ್ನೊಂದು ಕಡೆ ಭಾಗೀರಥಿ-ರಾಚಪ್ಪನವರಿಗೆ ಕಾಡುತ್ತದೆ. ಆ ಕಾಲದಲ್ಲಿ ಕಾಲೇಜು ಕಲಿಯಬೇಕಾದರೆ ಔರಾದನಲ್ಲಿ ಇರಲಿಲ್ಲ. ಬೀದರಕ್ಕೋ ಅಥವಾ ಭಾಲ್ಕಿಗೋ ಹೋಗಬೇಕಾಗುತ್ತಿತ್ತು. ಅಲ್ಲಿಗೆ ಕಳಿಸಿ ಓದಿಸುವ ಶಕ್ತಿ ಆ ಕುಟುಂಬದವರಿಗಿರಲಿಲ್ಲ. ಚಿಂತೆ ಮಾಡಿ ಫಲವಿಲ್ಲವೆಂದು ಅವರಿಗೆ ಕಾಲೇಜು ಕಲಿಸುವ ವಿಚಾರವನ್ನೇ ಕೈಬಿಟ್ಟರು.

ಓದಬೇಕೆಂಬ ಅಪಾರವಾದ ಹಂಬಲ ಹೊಂದಿದ್ದ ಶಿವರಾಜರು ತಂದೆ-ತಾಯಿಯರ ಈ ನಿರ್ಧಾರದಿಂದ ತುಂಬ ಸಂಕಟಕ್ಕೊಳಗಾದರು. ಕಾಲೇಜಿಗೆ ಹೋಗುವ ಮಾರ್ಗ ಕುರಿತು ಸ್ವತಃ ಹಗಲಿರುಳು ಚಿಂತಿಸತೊಡಗಿದರು. ಕೊನೆಗೆ ಮನಸ್ಸಿದ್ದಲ್ಲಿ ಮಾರ್ಗ ಎಂಬಂತೆ ಭಾಲ್ಕಿಯಲ್ಲಿ ಉಚಿತ ಪ್ರಸಾದ ನಿಲಯವಿದ್ದ ವಿಷಯ ಅವರಿವರಿಂದ ಕೇಳಿದ್ದರು. ಅದನ್ನು

ಪೂಜ್ಯ ಚನ್ನಬಸವ ಪಟ್ಟದ್ದೇವರು ನಡೆಸುತ್ತಾರೆ ಎಂಬುದನ್ನು ಕೂಡ ಅವರಿವರಿಂದಲೇ ತಿಳಿದುಕೊಂಡಿದ್ದರು. ಈ ಸಂದರ್ಭದಲ್ಲಿ ಆ ಸಂಗತಿ ತಟ್ಟನೆ ನೆನಪಿಗೆ ಬಂದಿತು. ಆಗ ಮೊದಲಿಗೆ ಶಿವರಾಜರು ಭಾಲ್ಕಿ ಹಿರೇಮಠಕ್ಕೆ ಧಾವಿಸಿ ಬರುತ್ತಾರೆ. ಪೂಜ್ಯ ಶ್ರೀ ಚನ್ನಬಸವ ಪಟ್ಟದ್ದೇವರು ತುಂಬಾ ತಡವಾಗಿ ಬಂದಿದಿಯಾ ಏನು ಮಾಡಲಿ ಎಂದು ಹಾನಗಲ್ಲ ಕುಮಾರೇಶ್ವರ ಉಚಿತ ಪ್ರಸಾದ ನಿಲಯದಲ್ಲಿರಲು ಅನುಮತಿ ಕೊಡಲಿಲ್ಲ. ತಿರುಗಿ ನಾಗೂರಿಗೆ ಮರಳಿದರು. ಏನಾದರೂ ಮಾಡಬೇಕು ಎಂಬ ಚಿಂತೆ ಕಾಡತೊಡಗಿತು. ಆಗ ಗುರುಲಿಂಗಪ್ಪ ಘೂಳೆ, ರಾಚಪ್ಪಾ ಮುದ್ದಾ ಅವರಿಗೆ ಭಾಲ್ಕಿಯ ಪೂಜ್ಯ ಶ್ರೀಗಳ ಜೊತೆಗೆ ನಿಕಟವಾದ ಸಂಬಂಧ ಇರುವ ವಿಷಯ ತಿಳಿದು ಅವರಲ್ಲಿ ಹೋಗಿ ಸಹಾಯ ಕೇಳಿಕೊಂಡರು.

ಒಂದು ದಿನ ಅವರಿಬ್ಬರೂ ಕೂಡಿ ಶಿವರಾಜರನ್ನು ಭಾಲ್ಕಿಯ ಪೂಜ್ಯರಲ್ಲಿಗೆ ಕರೆದುಕೊಂಡು ಹೋದರು. ಮಠದಲ್ಲಿ ಪೂಜ್ಯ ಶ್ರೀ ಚನ್ನಬಸವ ಪಟ್ಟದ್ದೇವರಿಗೆ ಭಕ್ತಿಯಿಂದ ನಮಸ್ಕರಿಸಿ ಕುಳಿತುಕೊಂಡರು. ಅಪ್ಪಗಳು ನಗುಮುಖದಿಂದ ಏನು ಗುರುಲಿಂಗಪ್ಪ ಧೊರಿ ಏನು ವಿಷಯ ಅಂದರು. ಆಗ ಗುರುಲಿಂಗಪ್ಪನವರು ಪೂಜ್ಯ ಶ್ರೀಗಳಿಗೆ ಶಿವರಾಜರ ಬಡತನ ಪರಿಸ್ಥಿತಿಯ ಬಗ್ಗೆ ತಿಳಿಸುತ್ತಾ ಅವರನ್ನು ಮಠದ ಹಾನಗಲ್ ಕುಮಾರೇಶ್ವರ ಉಚಿತ ಪ್ರಸಾದ ನಿಲಯದಲ್ಲಿ ಪ್ರವೇಶ ದಯಪಾಲಿಸಬೇಕೆಂದು ಪ್ರಾರ್ಥಿಸಿಕೊಂಡರು. ಆಗ ಪೂಜ್ಯರು ಸೀಟುಗಳೆಲ್ಲ ಭರ್ತಿಯಾಗಿವೆ ಪ್ರವೇಶ ಕೊಡಲು ಸಾಧ್ಯವಿಲ್ಲ ಎಂದಾಗ ಶಿವರಾಜರಿಗೆ ಇಲ್ಲಿ ಜಾಗ ಸಿಗದಿದ್ದರೆ ಏನು ಗತಿ ಎಂದು ಒಂದು ಕ್ಷಣ ಎದೆ ಝುಲ್ಲೆಂದು ಕಣ್ಣಿಗೆ ಕತ್ತಲೆಯೇ ಬಂದಂತಾಯಿತು. ಇವರ ಮಾನಸಿಕ ಸ್ಥಿತಿ ಅರಿತ ಗುರುಲಿಂಗಪ್ಪ ಘೂಳೆಯವರು ಪೂಜ್ಯ ಪಟ್ಟದ್ದೇವರಲ್ಲಿ ಪರಿಪರಿಯಾಗಿ ವಿನಂತಿಸಿಕೊಂಡರು. ಹುಡುಗ ತುಂಬಾ ಸಂಭಾವಿತನಾಗಿದ್ದಾನೆ. ಸೇವಾ ಗುಣವು ಅವನಲ್ಲಿದೆ ದಯವಿಟ್ಟು ಅವನ ಮೇಲೆ ಕೃಪೆ ತೋರಿಸಿರಿ ಎಂದು ಅತ್ಯಂತ ವಿನಮ್ರವಾಗಿ ಒತ್ತಾಯಿಸಿದರು.

ಕೊನೆಗೆ ಪೂಜ್ಯ ಪಟ್ಟದ್ದೇವರಿಗೆ ಶಿವರಾಜರ ಮೇಲೆ ಕರುಣೆ ಹುಟ್ಟಿತ್ತು. ಅವರನ್ನು ಪ್ರಸಾದನಿಲಯದಲ್ಲಿ ಸೇರಿಸಿಕೊಳ್ಳಲು ಒಪ್ಪಿಕೊಂಡಾಗ ಶಿವರಾಜರಿಗೆ ಮಹದಾನಂದವಾಯಿತು. ಅಂತೂ ಕೊನೆಗೆ ಪ್ರಸಾದ ನಿಲಯದಲ್ಲಿ ಸೇರಿದ ಮೇಲೆ ಭಾಲ್ಕಿಯ ಸಿ.ಬಿ.ಕಾಲೇಜಿನಲ್ಲಿ ಪಿ.ಯು.ಸಿ.ಗೆ ಪ್ರವೇಶ ಪಡೆಯುತ್ತಾರೆ. ಆಗಿನ ಕಾಲದಲ್ಲಿ ಮಠದೊಳಗೆ ವಸತಿಗೆ ವ್ಯವಸ್ಥೆ ಇರದ ಕಾರಣ ಹಿರೇಮಠ ಗಲ್ಲಿಯ ಬಸವಂತರಾಯ ಪಾಟೀಲ್‌ರ ಮನೆಯಲ್ಲಿ ಬಾಡಿಗೆ ಕೋಣೆ ಪಡೆದು ಉಳಿಯುತ್ತಾರೆ. ಮಾಧ್ಯಮಿಕ ಶಾಲೆಯಿಂದಲೂ ಮಿತ್ರರಾಗಿದ್ದ ಕಲ್ಲಪ್ಪಾ ಮುದ್ದಾ–ಸೂರ್ಯಕಾಂತ ಏಕಲಾರ ಸಹ ಇವರ ಜೊತೆಯಲ್ಲಿ ಉಳಿದುಕೊಂಡರು.

ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರು ಇವರಿಗೆ ಮಠದಲ್ಲಿ ನೀರು ತರುವ, ಕಸ ಗೂಡಿಸುವ ಕಾಯಕ ಒಪ್ಪಿಸುತ್ತಾರೆ. ನಿಷ್ಠೆಯಿಂದ ಕಾಯಕ ಮಾಡುತ್ತಲೇ ಒಂದೇ ವರ್ಷದ ಕೋರ್ಸಾಗಿದ್ದ ಅಂದಿನ ಪಿ.ಯು.ಸಿ ಯನ್ನು ೧೯೭೦ ರಲ್ಲಿ ಮುಗಿಸುತ್ತಾರೆ. ಇವರ ಸೇವಾ ಮನೋಭಾವನೆ, ಕಾರ್ಯದಕ್ಷತೆ ಅರಿತ ಪೂಜ್ಯರು ಇವರಿಗೆ ಬಿ.ಎ.ಓದಲು ಅನುಕೂಲ ಮಾಡಿಕೊಟ್ಟು ತಮ್ಮ ಮಠದಲ್ಲಿಯೇ ಇರಬೇಕೆಂದು ಹೇಳುತ್ತಾರೆ. ಇವರು ಬಿ.ಎ. ಓದುತ್ತಿದ್ದ ಕಾಲದಲ್ಲಿ ಮಠದೊಳಗೆ ಹಳೆಯದಾದ ಒಂದೆರೆಡು ಕೋಣೆಗಳು ತುಂಬ ಜೀರ್ಣವಾಗಿದ್ದವು. ಜಂತೆ ತೊಲೆಗಳೆಲ್ಲ ಕಿತ್ತು ಹೋಗಿ ಕೇವಲ ಗಚ್ಚಿನ ಛತ್ತನ್ನು ಹೊತ್ತು ನಿಂತಿದ್ದವು. ಅಂಥದ್ದೆ ಆದ ಒಂದು ಕೋಣೆಯಲ್ಲಿ ಇವರು ವಾಸ ಮಾಡುತ್ತಿದ್ದರು. ಇವರ ಜೊತೆ ಬಿ.ಎನ್.ಸೋಲಾಪೂರೆ, ಬಾಬು ವಡ್ಡೆ, ಹೆಚ್.ಸಿ.ಖಡ್ಕೆ, ಶರಣಪ್ಪ ಭೈರೆ ಎಂಬ ವಿದ್ಯಾರ್ಥಿಗಳು ಉಳಿದುಕೊಂಡಿದ್ದರು. ಇನ್ನೂ ಇವರ ಅನೇಕ ಸಹಪಾಠಿಗಳು ಶಿವರಾಜರೊಂದಿಗೆ ಬಿ.ಎ.ಓದುತ್ತಿದ್ದವರು ಊಟಕ್ಕೆ ಮಠದ ಕುಮಾರೇಶ್ವರ ಉಚಿತ ಪ್ರಸಾದ ನಿಲಯವನ್ನೇ ಆಶ್ರಯಿಸಿಕೊಂಡಿದ್ದರು.

ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಹಾನಗಲ್ ಕುಮಾರೇಶ್ವರ ಉಚಿತ ಪ್ರಸಾದ ನಿಲಯದ ವಿದ್ಯಾರ್ಥಿಗಳಿಗೆ ಪ್ರತಿನಿತ್ಯ ಬೆಳಗಿನ ಜಾವ ೫ ಗಂಟೆಗೆ ಎಬ್ಬಿಸುತ್ತಿದ್ದರು. ಎದ್ದ ಕೂಡಲೇ ಸಾಮೂಹಿಕ ಪ್ರಾರ್ಥನೆ ಮತ್ತು ವಚನ, ಪ್ರವಚನ. ಆನಂತರ ಒಬ್ಬ ಹುಡುಗನಿಂದ ಒಂದು ವಚನದ ಅರ್ಥ ಮಾಡುವುದು ಆಮೇಲೆ ಶ್ರೀಗಳಿಂದ ಆಶೀರ್ವಚನ ನಂತರ ಸ್ನಾನ ಪೂಜಾದಿ ಮುಗಿಸಿಕೊಂಡು ೭-೩೦ ರಿಂದ ಮಧ್ಯಾಹ್ನ ೧೨-೩೦ ರ ವರೆಗೆ ಕಾಲೇಜು ೧ ಗಂಟೆಗೆ ಊಟ ಆಮೇಲೆ ಸಾಯಂಕಾಲದವರೆಗೆ ಅಭ್ಯಾಸ ಮತ್ತು ಪ್ರಾರ್ಥನೆ ರಾತ್ರಿ ೮-೦೦ ಗಂಟೆಗೆ ಊಟ, ೧೦ ಗಂಟೆವರೆಗೆ ಅಭ್ಯಾಸ ಆಮೇಲೆ ನಿದ್ದೆ, ಇದು ಪೂಜ್ಯ ಪಟ್ಟದ್ದೇವರು ವಿದ್ಯಾರ್ಥಿಗಳಿಗೆ ಹಾಕಿಕೊಟ್ಟ ದಿನಚರಿಯಾಗಿತ್ತು. ಶಿವರಾಜರು ಈ ದಿನಚರಿ ಚಾಚೂ ತಪ್ಪದೇ ಅತ್ಯಂತ ಶಿಸ್ತಿನಿಂದ ಅನುಸರಿಸುತ್ತಿದ್ದರು. ಬಿಡುವಿನ ವೇಳೆಯಲ್ಲಿ ಪ್ರಸಾದ ನಿಲಯದ ವಿದ್ಯಾರ್ಥಿಗಳು ಸಿನಿಮಾ ನೋಡಲು ಹೋಗೋಣವೆಂದು ಶಿವರಾಜರಿಗೂ ಒತ್ತಾಯಿಸಿದರೂ ಇವರು ಒಪ್ಪದೇ ಅಲ್ಲಿಯೇ ನಡೆಯುತ್ತಿದ್ದ ಪೂಜ್ಯಶ್ರೀ ಲಿಂಗಾನಂದ ಸ್ವಾಮೀಗಳವರ ಪ್ರವಚನ ಕೇಳುವುದುಕ್ಕೆ ಹೋಗುತ್ತಿದ್ದರು.

ಬಿ.ಎ. ಯಲ್ಲಿ ಇವರು ಕನ್ನಡ ಪ್ರಧಾನ ವಿಷಯುವಾಗಿ ತೆಗೆದುಕೊಂಡಿದ್ದರು. ಡಾ.ಜಿ.ಬಿ.ವಿಸಾಜಿ ಹಾಗೂ ಭೈರೂಡಗಿರವರು ಪಾಠ ಬೋಧನೆ ಮಾಡುತ್ತಿದ್ದರು. ಕನ್ನಡ ಉಪನ್ಯಾಸಕರಾದ ಇವರು ಹೇಳುವ ಪಾಠ ಗಮನವಿಟ್ಟು ಆಲಿಸುತ್ತಿದ್ದರು. ಸಿದ್ದರಾಮನ ವಚನ ಹಾಗೂ ಚಾಮರಸನ ಪ್ರಭುಲಿಂಗ ಲೀಲೆಯನ್ನು ಭೋದಿಸುತ್ತಿದ್ದಾಗ ತನ್ಮಯತೆಯಿಂದ ಕೇಳುತ್ತಿದ್ದರು. ಹೀಗಾಗಿ ಅವರಿಗೆ ಸಾಹಿತ್ಯದಲ್ಲಿ ಆಸಕ್ತಿ ಹುಟ್ಟಿತ್ತು. ಕವಿತೆಗಳನ್ನು ಬರೆಯಲು ಪ್ರಾರಂಭಿಸಿದರು. ಪೂಜ್ಯ ಶ್ರೀಗಳು ಅನೇಕ ಕವಿತೆಗಳನ್ನು ಬರೆದರು. ಆ ಕವಿತೆಗಳಲ್ಲಿನ ಒಂದು ಕವಿತೆ ನೋಡೋಣ.

ಭಾಲ್ಕಿಯ ಮಠವಣ್ಣ ಶ್ರೀ ಚನ್ನಬಸವಣ್ಣ
ತಮಂಥ ಘನ ಜ್ಯೋತಿ ಕಿರಿದೇ ಅಣ್ಣ
ಕಾಯಕವೇ ಕೈಲಾಸವೆಂದರಿತ ನೀವಣ್ಣ
ಭೂಲೋಕವು ಶಿವಲೋಕವ ಮಾಡಿದ
ಮಹಾಮಾನವರಣ್ಣಾ.

ಹಿರೇಮಠ ಸಂಸ್ಥಾನವು ಆಧ್ಯಾತ್ಮಿಕ-ಧಾರ್ಮಿಕ ಹಾಗೂ ಸಾಹಿತ್ಯಕ ಪರಿಸರದಿಂದ ಕೂಡಿತ್ತು. ಅಲ್ಲಿ ಶರಣಮಯ ವಾತಾವರಣ ತುಂಬಿಕೊಂಡಿತ್ತು. ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಮಠದಲ್ಲಿ ಶರಣರ ಜಯಂತಿ, ಶಿವಾನುಭವ ಗೋಷ್ಠಿಯಂತಹ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿದ್ದರು. ಆಗಾಗ ಕವಿ ಸಮ್ಮೇಳನಗಳು ನಡೆಯುತ್ತಿದ್ದವು. ಹೀಗೆ ಅನೇಕ ಕಾರ್ಯಕ್ರಮಗಳು ಮಠದಲ್ಲಿ ಮಾತ್ರವಲ್ಲದೆ ಜಿಲ್ಲೆಯಾದ್ಯಂತ ಹಾಗೂ ನೆರೆ ಹೊರೆಯ ಗಡಿ ಗ್ರಾಮಗಳಲ್ಲಿಯೂ ಕೂಡ ಕಾರ್ಯಕ್ರಮ ನಡೆದಾಗ ಪೂಜ್ಯರ ಜೊತೆಗೂಡಿ ಶಿವರಾಜರು ಹಲವಾರು ಕಾರ್ಯಕ್ರಮಗಳಿಗೆ ಹೋಗುತ್ತಿದ್ದರು.

ಮುಂದೆ ಇವರು ತಮ್ಮ ಗೆಳೆಯರೊಂದಿಗೆ ಕೂಡಿಕೊಂಡು 'ಶರಣ ಬಳಗ' ಎಂಬ ಒಂದು ಸಂಘವನ್ನೇ ಕಟ್ಟಿದ್ದರು. ಎಲ್ಲ ಗೆಳೆಯರು ಸೇರಿ ಆ ಸಂಘಕ್ಕೆ ಶಿವರಾಜರನ್ನೇ ಅಧ್ಯಕ್ಷರನ್ನಾಗಿ ಮಾಡಿದರು. ನಂತರ ಸಂಘದ ಅಡಿಯಲ್ಲಿ ಪೂಜ್ಯರ ದಿವ್ಯ ಸಾನಿಧ್ಯದಲ್ಲಿ ಮಠವಷ್ಟೇ ಅಲ್ಲ ಸಂತಪೂರ, ಔರಾದದಂಥ ಅನೇಕ ಊರುಗಳಲ್ಲಿಯೂ ಶರಣರ ತತ್ವದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯನಿರ್ವಹಿಸುತ್ತಾರೆ. ಒಮ್ಮೆ ಸಿದ್ಧರಾಮೇಶ್ವರರ ಜಯಂತೋತ್ಸವವನ್ನು ೧೯೭೪ರ ಜನೆವರಿ ೧೪ ರಂದು ಔರಾದನ ಅಮರೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಳ್ಳುತ್ತಾರೆ. ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರ ದಿವ್ಯ ಸಾನಿಧ್ಯದಲ್ಲಿ ನೆರವೇರಿದ ಆ ಕಾರ್ಯಕ್ರಮಕ್ಕೆ ಅಪಾರ ಸಂಖ್ಯೆಯಲ್ಲಿ ಜನ ಸೇರುತ್ತಾರೆ. ಸುತ್ತ-ಮುತ್ತಲಿನ

ಗ್ರಾಮಗಳ ದಲಿತ ಜನಾಂಗವೂ ಅಲ್ಲಿ ನೆರೆಯುತ್ತಾರೆ. ಆ ದಲಿತ ಜನರಲ್ಲಿ ಕೌಠಾ ಗ್ರಾಮದ ವಿಠಲ ಎಂಬ ವ್ಯಕ್ತಿ ಶಿವರಾಜರಿಗೆ ಚೀಟಿಯ ಮೂಲಕ ತಾನೂ ಭಾಷಣ ಮಾಡುವುದಕ್ಕಾಗಿ ಕೇಳಿಕೊಳ್ಳುತ್ತಾನೆ. ಅದನ್ನು ಪೂಜ್ಯರ ಗಮನಕ್ಕೆ ತಂದು ಯಾವುದೇ ಆತಂಕಗಳಿಗೆ ಕಾರಣವಾಗದ ಹಾಗೆ ಭಾಷಣಕ್ಕೆ ಅವಕಾಶ ಒದಗಿಸಿಕೊಡುತ್ತಾರೆ.

ವಿಠಲ ಸಿದ್ದರಾಮ ಶಿವಯೋಗಿಗಳನ್ನು ಕುರಿತು ಅದ್ಭುತವಾಗಿ ಮಾತನಾಡುತ್ತಾನೆ. ಅವನ ಮಾತು ಪೂಜ್ಯರಿಗೆ ತುಂಬ ಮೆಚ್ಚುಗೆಯಾಗುತ್ತದೆ. ಆಗ ಅವನನ್ನು ಕರೆದು ಪೂಜ್ಯರು ನೀನು ವಿಠಲ ಅಲ್ಲ 'ಸಿದ್ಧರಾಮ' ಎಂದು ಕೊಂಡಾಡಿದರು. ಮತ್ತೇ ಇಷ್ಟಲಿಂಗ ದೀಕ್ಷೆ ನೀಡಿ ಅಂದಿನಿಂದ ವಿಠಲ ಸಿದ್ಧರಾಮನಾಗುತ್ತಾನೆ. ಈ ವಿಠಲ ಬೇರೆ ಯಾರು ಅಲ್ಲ. ಇಂದಿನ ಪ್ರಸಿದ್ಧ ಶ್ರೀ ಸಿದ್ಧರಾಮ ಬೆಲ್ದಾಳ ಶರಣರೇ. ಇವರನ್ನು ಬೆಳಕಿಗೆ ತಂದ ಕೀರ್ತಿಯಲ್ಲಿ ಮುಖ್ಯ ಪಾತ್ರ ವಹಿಸಿದವರು ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಎಂದು ಹೇಳಬಹುದು.

ಇವರು ಕೇವಲ ಕಾರ್ಯಕ್ರಮಗಳ ಸಂಘಟಕರಾಗದೇ ಪ್ರಮುಖ ಪ್ರವಚನಕಾರರಾಗಿ ಸಹ ಕಾರ್ಯನಿರ್ವಹಿಸುತ್ತಿದ್ದರು. ಶರಣರ ವೇಷ ಧರಿಸಿ ಏಕಾಭಿನಯಪಾತ್ರನ್ನೊಳಗೊಂಡ ಅನೇಕ ಶರಣರ ಪಾತ್ರ ಧರಿಸಿದ್ದಾರೆ. ಇವರಿಗೆ ಸಿದ್ಧರಾಮರ ವೇಷ ಧರಿಸುವುದೆಂದರೆ ತುಂಬಾ ಆಸಕ್ತಿ, ಅದು ಅವರ ಅಚ್ಚು-ಮೆಚ್ಚಿನ ವೇಷವಾಗಿತ್ತು. ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಇವರ ನಡೆ-ನುಡಿಗಳೆಲ್ಲವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಇವರಲ್ಲಿನ ಸಂಭಾವಿತ ಗುಣ, ಶಾಂತ ಸಮಾಧಾನದ ಸ್ವಭಾವ, ಶರಣರ ಬಗೆಗಿನ ಒಲವು ಅವರಿಗೆ ತುಂಬಾ ಹಿಡಿಸಿದವು.

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ವೃತ್ತಿ–ವೈವಿಧ್ಯಃ

ಓದು ಮುಗಿದಿದ್ದರಿಂದ ಶಿವರಾಜರಿಗೆ ಅವರ ತಂದೆ ತಾಯಿಯರು ಸರ್ಕಾರಿ ನೌಕರಿಯ ಕುರ್ಚಿಯಲ್ಲಿ ನೋಡಬೇಕೆಂಬ ಹಿರಿದಾದ ಕನಸ್ಸನ್ನು ಕಾಣುತ್ತಿದ್ದರು. ಅವರ ತಾಯಿ ಭಾಗೀರಥಿ ಎಲ್ಲ ಜ್ಯೋತಿಷ್ಯರಲ್ಲಿ ತನ್ನ ಮಗನ ನೌಕರಿಯ ಬಗ್ಗೆ ಭವಿಷ್ಯ ಕೇಳಲು ಪ್ರಾರಂಭಿಸಿದಳು. ಒಂದು ದಿನ ಅವರ ಮನೆಯವರೆಲ್ಲರಿಗೂ ಪರಿಚಯವಿರುವ ಒಬ್ಬ ವ್ಯಕ್ತಿ ಶಿವರಾಜರಿಗೆ ನೌಕರಿ ಕೊಡಿಸುತ್ತೇನೆಂದು ನಂಬಿಸಿ ಭಾಗಿರಥಿಯಿಂದ ಹಣ ಪಡೆದುಕೊಂಡು ಹೋದವನು ಹಿಂತಿರುಗಲೇ ಇಲ್ಲ. ಆ ವ್ಯಕ್ತಿ ಮಾಡಿದ ಮೋಸ ಶಿವರಾಜರ ಮನಸ್ಸಿನ ಮೇಲೆ ತುಂಬ ಪರಿಣಾಮ ಬೀರಿತು. ಮೊದಲೇ ಮನದಲ್ಲಿ ಮನೆ ಮಾಡಿದ ವೈರಾಗ್ಯ ಹೊರಹೊಮ್ಮಿ ಬರಲು ಆ ಮೋಸ ಕಾರಣವಾಯಿತು. ಶಿವರಾಜರು ನೌಕರಿಯ ಆಸೆಯನ್ನೇ ಬಿಟ್ಟರು. ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರ ಜೊತೆ ಊರಿಂದ ಊರಿಗೆ ಕಾರ್ಯಕ್ರಮಗಳು ಮಾಡುತ್ತಾ ಹೋಗುತ್ತಿದ್ದರು.

ಹೀಗೆ ಮುಂದೆ ಒಂದು ಕಾರ್ಯಕ್ರಮಕ್ಕಾಗಿ ಪೂಜ್ಯರ ಜೊತೆ ಹೋದಾಗ ಬೆಳಗ್ಗೆ ಪೂಜ್ಯ ಅಪ್ಪಾಜಿಯವರ ಜೊತೆ ವಾಯುವಿಹಾರಕ್ಕೆಂದು ಹೋದರು. ಅಲ್ಲಿ ಪ್ರಶಾಂತವಾದ ಸ್ಥಳದಲ್ಲಿ ಗುಡ್ಡವೊಂದರ ಮೇಲೆ ಪೂಜ್ಯರು ಕುಳಿತುಕೊಂಡು, ಶಿವರಾಜರನ್ನು ಕುಳಿತುಕೊಳ್ಳಲು ಸೂಚಿಸಿದ್ದರು. ಆಮೇಲೆ ಪೂಜ್ಯ ಶ್ರೀಗಳು 'ಇಲ್ಲಿಯವರೆಗೆ ಮಠಕ್ಕೆ ಅನೇಕ ಮರಿಗಳಾಗಿ ಹೋಗಿದ್ದಾರೆ ಯಾರು ಸರಿಬರಲಿಲ್ಲ ಆದ್ದರಿಂದ ನೀನು ಮಠದ ಅಧಿಕಾರಿಯಾಗಿ ಸೇವೆ ಮಾಡು' ಎಂದರು.

ಕನಸು ಮನಸ್ಸಿನಲ್ಲೂ ನಿರೀಕ್ಷಿಸದ ಪೂಜ್ಯ ಅಪ್ಪಾಜಿಯವರ ಈ ಮಾತು ಕೇಳಿದ ಶಿವರಾಜರಿಗೆ ಒಮ್ಮೆಲೆ ಗಾಬರಿಯಾಯಿತು. ದಿಕ್ಕೇ ತೋಚದಂತಾಯಿತು. ಪೂಜ್ಯರು ಮುಂದುವರೆದು ನನ್ನ ಸಂಪೂರ್ಣ ಶಕ್ತಿ ನಿನಗೆ ಬರುತ್ತದೆ ಹೆದರುವುದು ಪ್ರಶ್ನೆ ಬೇಡ ಮಠಾಧೀಶನಾಗುವ

ಯೋಗ್ಯತೆ ನಿನ್ನಲ್ಲಿ ಖಂಡಿತವಾಗಿಯೂ ಎದ್ದು ಕಾಣುತ್ತಿದೆ. ಅದು ನನ್ನ ದೃಷ್ಟಿಗೆ ಆಗಲೇ ಹೊಳೆದಿದೆ. ನನ್ನ ಮಾತನ್ನು ನಂಬು ಎಂದು ಹೇಳಿದರು. ಆಗ ಶಿವರಾಜರಿಗೆ ದುಃಖ ಉಮ್ಮಳಿಸಿ ಬಂದಿತು. ಆ ಸಮಯದಲ್ಲಿ ಪೂಜ್ಯ ಅಪ್ಪಾಜಿಯವರಿಗೆ ಒಪ್ಪಿಗೆ ಕೊಡಲು ಶಿವರಾಜರಿಗೆ ಸಾಧ್ಯವಾಗಲಿಲ್ಲ. ಪೂಜ್ಯ ಶ್ರೀಗಳು ಮೇಲಿಂದ ಮೇಲೆ ಒತ್ತಾಯಿಸಲು ಪ್ರಾರಂಭಿಸಿದರು. ಅವರಿವರಿಂದ ಹೇಳಿಸುವದು ಶುರುವಾಯಿತು. ವ್ಹಿ.ಸಿದ್ಧರಾಮಣ್ಣ ಶರಣರು, ಬೆಲ್ದಾಳ ಶರಣರು, ಸುಜ್ಞಾನಿತಾಯಿ, ಭಂಡಾರಿ ಶರಣರು ಹೀಗೆ ಇವರೆಲ್ಲರೂ ಶಿವರಾಜರಿಗೆ ಒತ್ತಡ ಹಾಕುತ್ತಿದ್ದರು. ಆದರೂ ಶಿವರಾಜರು ಒಪ್ಪಲಿಲ್ಲ ಆಯಿತು ಎಂದು ಸುಮ್ಮನಾಗುತ್ತಿದ್ದರು.

ಒಂದು ದಿನ ರಾತ್ರಿ ಮಠದಲ್ಲಿ ಮಲಗಿದ್ದ ಶಿವರಾಜರನ್ನು ಪೂಜ್ಯ ಅಪ್ಪಾಜಿಯವರು ಎಬ್ಬಿಸಿದ್ದರು. ಮಧ್ಯ ರಾತ್ರಿ ಸಮಯದಲ್ಲಿ ಎಲ್ಲರೂ ಗಾಢ ನಿದ್ರೆಯಲ್ಲಿದ್ದರು. ಮಠದಲ್ಲಿ ಪ್ರಶಾಂತವಾಗಿತ್ತು ಪೂಜ್ಯರು ಎಬ್ಬಿಸಿ ಹೇಳಿದರು ನೋಡು ಬಸವ ಗುರುವಿನ ಸೇವೆ ಮಾಡುವ ಮಠ ಇದಾಗಿದೆ. ಅದನ್ನು ಮುಂದುವರೆಸಿಕೊಂಡು ಹೋಗುವ ಗುಣ ನಿನ್ನಲ್ಲಿದೆ ಹಾಗೆಂದು ನನಗೆ ನನ್ನ ಅಂತರಂಗ ಹೇಳುತ್ತಿದೆ. ನೀನು ಧೈರ್ಯದಿಂದ ಒಪ್ಪಿಕೋ ನಿನ್ನಲ್ಲಿ ತಾನಾಗಿಯೇ ಶಕ್ತಿ ಬರುತ್ತದೆ. ನೀನು ಒಪ್ಪದೇ ಇದ್ದರೆ ಬಸವಾದಿ ಶರಣರಿಗೆ ಅಪಚಾರ ಮಾಡಿದಂತಾಗುತ್ತದೆ ಎಂಬ ಅಪ್ಪನವರ ಹೃದಯಾಳದ ಮಾತು ಶಿವರಾಜ ಅಂತರಂಗ ಹೊಕ್ಕಿತು. ಅಪ್ಪನವರ ಕಳಕಳಿಯ ಮಾತಿನಿಂದ ಉಮ್ಮಳಿಸಿದ ದುಃಖ ಮರೆತು ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರಿಗೆ ಸಾಷ್ಟಾಂಗ ಎರಗಿದ್ದರು.

ಅಯ್ಯಾ ನಿಮ್ಮ ಶರಣರೆನ್ನ ಪಾವನವ ಮಾಡಿ,
ತಿಳುಹಿ ತಮ್ಮಂತೆ ಎನ್ನ ಮಾಡಿದ ಬಳಿಕ,
ನಾನು ಅವರು ಮಾಡಿದಂತಾದೆನಯ್ಯಾ.
ನಾನೊಬ್ಬನು ನಿಮ್ಮ ಶರಣರ ಬಳಿ ಬಳಿಯವನು.

ಕೂಡಲಸಂಗನ ಶರಣರು ಮಚ್ಚಿ ಎನಗೊಲಿದಡೆ
ನಾನು ಬದುಕಿದೆನಲ್ಲದೆ, ಸಮರ ಸಂಗಕ್ಕೆ ಸರಿಯೇ
ಹೇಳಾ, ಚನ್ನಬಸವಣ್ಣಾ.

ಎಂಬ ಬಸವಣ್ಣನವರ ವಚನವು ನನ್ನನ್ನು ಗಟ್ಟಿಗೊಳಿಸಿತು. ಬಸವ ಗುರುವಿನ ಸೇವೆಗಾಗಿಯೇ ನನ್ನ ಮುಂದಿನ ಬದುಕು ಎಂದು ಮನಸ್ಸಿನಲ್ಲಿಯೇ ನಿರ್ಧಾರ ಮಾಡಿದೆ ಮುಂದೆ ೧೯೭೮ ರಲ್ಲಿ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಬಸವ ಜಯಂತಿಯಂದು ಜಂಗಮ ದೀಕ್ಷೆ ನೀಡಿ ಶಿವಲಿಂಗ ದೇವರು ಎಂದು ನಾಮಕರಣ ಮಾಡಿದರು. ಕೈಯಲ್ಲಿ ಧರ್ಮ ಗುರು ಬಸವಣ್ಣನವರ ವಚನ ಕಟ್ಟಿರುವ ಜೋಳಿಗೆ ಕೊಟ್ಟು ಮಸ್ತಕದ ಮೇಲೆ ತಮ್ಮ ಲಿಂಗಹಸ್ತವನ್ನಿಟ್ಟು ಲೋಕಾರ್ಪಿತವಾಗಿಸಿದ್ದರು.

ಮನೆಯವರ ವಿರೋಧ :

ಶಿವರಾಜರು ಸನ್ಯಾಸಿಯಾದ ವಿಷಯು ಅವರ ಮನೆಯವರಿಗೆಲ್ಲರಿಗೂ ತಿಳಿಯಿತು. ಸುದ್ಧಿ ತಿಳಿದ ಅವರಿಗೆ ಆಕಾಶವೇ ಮೈಮೇಲೆ ಬಿದ್ದಂತಾಗಿ ಹೌಹಾರಿ ಕೂಡಲೇ ರಾಚಪ್ಪ ದಂಪತಿಯರು ನಾಗೂರದಿಂದ ಭಾಲ್ಕಿಗೆ ಓಡೋಡಿ ಬಂದರು. ಮಠದಲ್ಲಿ ಕಾವಿ ಧರಿಸಿ ಶಿವಲಿಂಗ ದೇವರಾಗಿ ಕುಳಿತ ಮಗನನ್ನು ನೋಡಿ ಗಾಬರಿಗೊಂಡು ದಂಪತಿಯರು ದುಃಖಿಸುತ್ತಾ ಮಗನಿಗೆ ಸನ್ಯಾಸಿತನ ಬಿಟ್ಟು ಬಿಡುವಂತೆ ಕೇಳಿಕೊಂಡರು. ಪೂಜ್ಯ ಪಟ್ಟದ್ದೇವರಲ್ಲಿ ಅವರನ್ನು ಮನೆಗೆ ಕಳಿಸುವಂತೆ ಅಂಗಲಾಚಿ ಬೇಡಿಕೊಂಡರು. ಭೀಮಣ್ಣ ಖಂಡ್ರೆಯವರಲ್ಲಿಗೆ ಹೋಗಿ ಶಿವರಾಜರ ತಾಯಿ ಭಾಗಿರಥಿ ಹೊರಳಾಡಿ ಅತ್ತರು. ಮಠದಲ್ಲಿಯೇ ಉಪವಾಸ ಸತ್ಯಾಗ್ರಹ ಮಾಡುತ್ತೇನೆಂದು ಮುಷ್ಕರ ಕುಳಿತರು. ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಮಠದಲ್ಲಿ ಈ ರೀತಿ ಧರಣಿ ಕುಳಿತ ದಂಪತಿಗಳಿಗೆ ತಿಳಿಸಿ ಹೇಳಲು ಪ್ರಯತ್ನ ಮಾಡಿದರು.ಶಿವರಾಜ

ನಿಮಗೊಬ್ಬರಿಗೆ ಮಾತ್ರ ಮಗನಲ್ಲ. ಅವನು ಇಡೀ ಲೋಕಕ್ಕೆ ಮಗನಾಗಿದ್ದಾನೆ. ಬಸವಣ್ಣನವರ ಕರುಣೆಯ ಕಂದನಾಗಿ ಲೋಕದ ಸೇವೆಗೆಂದು ಹುಟ್ಟಿದ್ದಾನೆ. ಬಸವ ಇಚ್ಛೆಯೇ ಹೀಗಿರುವಾಗ ಯಾರು ಏನು ಮಾಡಲಿಕ್ಕಾಗದು ನಿಮಗೆ ಇಂಥಾ ಮಗನ ಹೆರುವ ಭಾಗ್ಯ ದೊರೆತದ್ದಕ್ಕೆ ಹೆಮ್ಮೆ ಪಡುವುದನ್ನು ಬಿಟ್ಟು ಹೀಗೆ ಸಣ್ಣ ಮಕ್ಕಳಂತೆ ಅಳುತ್ತ ಕೂಡುವುದೇ? ವ್ಯರ್ಥಮೋಹ ಒಳ್ಳೆಯದಲ್ಲ ಎಂದು ಪರಿಪರಿಯಾಗಿ ಪೂಜ್ಯರು ದಂಪತಿಯರಿಗೆ ತಿಳಿಹೇಳಿದರೂ ಅರ್ಥವಾಗುವುದಿಲ್ಲ.

ಕರ್ತವ್ಯದ ಕರೆ ಹೆತ್ತಕರುಳಿನ ಮೊರೆಯು ಶಿವಲಿಂಗ ದೇವರಿಗೆ ಧರ್ಮ ಸಂಕಟವೆನಿಸಿದ್ದರೂ ಕರ್ತವ್ಯದ ಕರೆಯ ಧ್ವನಿ ಹೆಚ್ಚಾಗಿ ಅವ್ವ ಭಾಗಿರಥಿಯವರಿಗೆ ತಿಳಿಹೇಳಿ ಹಿಂದಕ್ಕೆ ಹೋಗಲು ಒಪ್ಪಿಸುತ್ತಾರೆ. ರಾಚಪ್ಪ ದಂಪತಿಯರು ಮನಸ್ಸಿಲ್ಲದ ಮನಸ್ಸಿನಿಂದ ಭಾರವಾದ ಹೃದಯ ಹೊತ್ತು ನಾಗೂರಕ್ಕೆ ಹೊರಟು ಹೋಗುತ್ತಾರೆ.

ಪಟ್ಟಾಭಿಷೇಕ :

ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಶ್ರೀ ಶಿವಲಿಂಗ ದೇವರ ಸ್ಥಿರ–ಚರ ಪಟ್ಟಾಧಿಕಾರ ಮಹೋತ್ಸವವನ್ನು ೦೧–೦೬–೧೯೮೫ ರಿಂದ ೦೨–೦೬–೧೯೮೫ ರವರೆಗೆ ಎರಡು ದಿವಸಗಳವರೆಗೆ ಅದ್ಧೂರಿಯಾಗಿ ನಡೆಯಿತು. ರಾಜ್ಯಾದ್ಯಾಂತ ಮಠಾಧೀಶರು ಗಣ್ಯಾತಿಗಣ್ಯರೆಲ್ಲರೂ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಮರಿದೇವರಾಗಿದ್ದ ಶ್ರೀ ಶಿವಲಿಂಗ ದೇವರಿಗೆ ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರು 'ಬಸವಲಿಂಗ ಪಟ್ಟದ್ದೇವರು' ಎಂದು ನಾಮಕರಣ ಮಾಡಿದರು. ಧರ್ಮಗುರು ಬಸವಣ್ಣನವರ ಮಹಾಚೇತನ ಸಾಕ್ಷಿಯಾಗಿ ಅವರಿಗೆ ಪಟ್ಟಾಧ್ಯಕ್ಷರನ್ನಾಗಿ ಮಾಡಿದರು. ಪಟ್ಟಾಧಿಕಾರ ನೇರವೇರಿಸಿದ ಮೇಲೆ ಪೂಜ್ಯ ಶ್ರೀಗಳು ಸಿಂಹಾಸನದಿಂದ ಕೆಳಗಿಳಿದು ಪೂಜ್ಯ ಶ್ರೀ

ಡಾ.ಬಸವಲಿಂಗ ಪಟ್ಟದ್ದೇವರಿಗೆ ಕುಳಿಸಿದ್ದರು. ಅಲ್ಲಿ ನೆರೆದಿದ್ದ ಅಪಾರ ಸಂಖ್ಯೆಯಲ್ಲಿದ್ದ ಜನಸ್ತೋಮವನ್ನು ಉದ್ದೇಶಿಸಿ ಹೇಳಿದರು, ಸದ್ಭಕ್ತರೇ ಇದುವರೆಗೆ ನಾವು ಗಳಿಸಿದ ನಮ್ಮೊಳಗಿನ ಶಕ್ತಿಯನ್ನೆಲ್ಲ ನೂತನ ಶ್ರೀಗಳಿಗೆ ಧಾರೆ ಎರೆಯುತ್ತಿದ್ದೇನೆ. ಇನ್ನೂ ಮುಂದೆ ನನಗೂ ಅವರಿಗೂ ಯಾವ ವ್ಯತ್ಯಾಸವಿಲ್ಲ. ನಾನೇ ಅವರು ಅವರೇ ನಾನು ನನ್ನನ್ನು ನೀವೀಗ ಅವರಲ್ಲಿಯೇ ಕಾಣಬೇಕು ಎಂದು ಹೃದಯ ಸ್ಪರ್ಶಿಯಾಗುವ ಮಾತನಾಡಿದರು. ಆ ಮೇಲೆ ನೂತನ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರಿಗೆ ಭಕ್ತಿಪೂರ್ವವಾಗಿ ಶರಣು ಸಲ್ಲಿಸಿ ಪ್ರತಿಜ್ಞೆ ಮಾಡಿದರು.

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಹೇಳುತ್ತಾರೆ. 'ನನ್ನ ತಂದೆಯ ಚರಣಕ್ಕೆ ನಾನು ಹೂವು ತರುವೆನಲ್ಲದೆ ಹುಲ್ಲು ತಾರೆನು, ಇನ್ನು ಮುಂದೆ ಅವರ ಮಾರ್ಗವೇ ನನ್ನ ಮಾರ್ಗ, ಆ ಮಾರ್ಗಕ್ಕೆ ಎಳ್ಳಷ್ಟು ಚ್ಯುತಿ ಬರದಂತೆ ಕಾಳಜಿ ಪೂರ್ವಕವಾಗಿ ನಡೆದುಕೊಳ್ಳುತ್ತೇನೆ ಎಂದು ಪ್ರತಿಜ್ಞೆ ಮಾಡಿದ ನಂತರ ಗುರು-ಶಿಷ್ಯರ ಈ ಮಾತುಗಳನ್ನು ಕೇಳಿ ನೆರೆದ ಜನರೆಲ್ಲರ ಕಣ್ಣಲ್ಲಿ ಆನಂದದ ಭಾಷ್ಪಗಳು ಸುರಿದವು. ನೆರೆದವರೆಲ್ಲರೂ ಜಯಘೋಷಗಳ ಝೇಂಕಾರವು ಮುಗಿಲು ಮುಟ್ಟುವ ರೀತಿಯಲ್ಲಿ ಜಯಕಾರ ಹಾಕುತ್ತಿದ್ದರು. ಮುಂದೆ ಪರಮ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಹಿರೇಮಠದ ಸಂಸ್ಥಾನದ ಪೀಠಾಧಿಪತಿ ಪೀಠಕ್ಕೆ ಅಂಟಿಕೊಳ್ಳದೆ ಸಂಚಾರಿ ಜಂಗಮರಾಗಿ, ಕಾಯಕಯೋಗಿ ಚನ್ನಬಸವ ಪಟ್ಟದ್ದೇವರ ಶಿಶುವಾಗಿ ಕಾರ್ಯ ಸಾಧನೆಗೈಯುತ್ತಾ ಮುನ್ನಡೆಯುತ್ತಾರೆ.

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಕಾರ್ಯಸಾಧನೆ :

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು, ಡಾ.ಚನ್ನಬಸವ ಪಟ್ಟದ್ದೇವರು ಹೇಳಿದ ಹಾಗೆ ಲೋಕಕ್ಕೆ ಮಗನಾಗಿ ಗುರು ಹಾಕಿದ ಬಸವ ಪರಂಪರೆಯ ಮಾರ್ಗದಲ್ಲಿ ದುಡಿಯುತ್ತಿದ್ದಾರೆ. ಮಠಾಧೀಶರಾಗಿ ಇಷ್ಟಲಿಂಗ ಪೂಜೆ ಪ್ರವಚನ, ಧ್ಯಾನ ಇವುಗಳಷ್ಟೇ ಧಾರ್ಮಿಕ ಕೆಲಸವೆಂದು ಭಾವಿಸದೆ ಇಡೀ ಸಮಾಜವನ್ನೇ ದಾಸೋಹದ ನೆಲೆಯಾಗಿ ಕಂಡುಕೊಂಡರು. ಅವರು ಅತ್ಯಂತ ಶ್ರದ್ಧೆ-ನಿಷ್ಠೆಯಿಂದ, ಸಾಮಾಜಿಕ-ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಹಿತ್ಯಕವಾಗಿ ಸಮಾಜದ ಹಲವಾರು ಕ್ಷೇತ್ರಗಳಲ್ಲಿ ಮಾಡುತ್ತಿರುವ ಅವರ ಕಾರ್ಯ ಸಾಧನೆಗಳನ್ನು ಗುರುತಿಸಬಹುದು.

ಸಾಮಾಜಿಕ ಕ್ಷೇತ್ರ :

ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು 'ದಯೆಯೇ ಧರ್ಮದ ಮೂಲವಯ್ಯಾ' ಎಂಬ ಬಸವಣ್ಣನವರ ತತ್ವದಂತೆ ಸಾಮಾಜಿಕವಾಗಿ ಅದ್ಭುತ ಕಾರ್ಯಸಾಧನೆ ಮಾಡುತ್ತಿದ್ದಾರೆ, ಅಂಥ ಮಹತ್ವವಾದ ಅನೇಕ ಸಾಧನೆಯ ಒಂದು ಚಿಕ್ಕ ನೋಟವಾಗಿ ನೋಡಿದಾಗ, ಅನಾಥ ಶಿಶುಗಳ ಸಂರಕ್ಷಣಾ ಧಾಮ ನವಜಾತ ಶಿಶುಗಳ ರಕ್ಷಣೆಗಾಗಿ ಸ್ಥಾಪಿಸಿದ ಅನಾಥ ಶಿಶುಗಳ ಸಂರಕ್ಷಣಾ ಧಾಮ ೨೦೦೪ ರಲ್ಲಿ ಸ್ಥಾಪಿಸಿದರು. ಮದುವೆಯಾಗದೆ ಗರ್ಭಿಣಿಯಾಗಿ ಹೆತ್ತ ಮಗುವನ್ನು ಮಾನಕ್ಕೋ ಬಡತನಕ್ಕೋ ಅಥವಾ ಮತ್ತ್ಯಾವುದೋ ಒತ್ತಡಕ್ಕೆ ಒಳಗಾಗಿ ಅವರು ಹಸುಳೆಯನ್ನು ಚರಂಡಿಯಲ್ಲೋ, ತಿಪ್ಪೆಗುಂಡಿಯಲ್ಲೋ, ಮುಳ್ಳುಕಂಟಿಯಲ್ಲೋ, ಮತ್ತೆಲ್ಲೆಲ್ಲೊ ಸಿಕ್ಕ ಸಿಕ್ಕ ಸ್ಥಳಗಳಲ್ಲಿ ಎಸೆಯುತ್ತಿದ್ದಾರೆ. ಹೀಗಾಗಿ ಇಂದು ಅದೆಷ್ಟೊ ಕಂದಮ್ಮಗಳು ಕಣ್ಣು ತೆರೆದು ಬೆಳಕು ಕಾಣುವ ಮುನ್ನವೇ ಹಡೆದಮ್ಮನಿಂದಲೇ ಮೃತ್ಯುಲೋಕಕ್ಕೆ ಮರಳುತ್ತಿವೆ. ಇಂಥ ಅನಾಹುತವನ್ನು ಕಂಡ ಪೂಜ್ಯ ಶ್ರೀಗಳ ತಾಯಿ ಹೃದಯ ಕರಗಿ

ಮಮ್ಮಲ ಮರಗುತ್ತಾ, ಕೂಡಲೇ ಅವರು ಅಂಬ್ಯುಲೆನ್ಸ್ ಮೂಲಕ ಹಿಂದೆ-ಮುಂದೆ ನೋಡದೆ ಆ ಮಗುವಿಗೆ ತಮ್ಮ ಮಡಿಲಿಗೆ ಹಾಕಿಕೊಂಡು ಹಸುಳೆಗಳ ಜೀವ ಉಳಿಸುತ್ತಾ ಪೂಜ್ಯರು ಅವುಗಳನ್ನು ತಮ್ಮ ಸಂರಕ್ಷಣ ಧಾಮದಲ್ಲಿ ಸುರಕ್ಷತೆಯಿಂದ ಇಟ್ಟಿದ್ದಾರೆ.

ಶರಣ ಸಂಸ್ಕೃತಿಯನ್ನು ಬಿಂಬಿಸುವ ಹೆಸರುಗಳನ್ನು ಕೊಡುತ್ತಾ ಗಂಡಾದರೆ ಬಸವ ಪ್ರಣವ, ಬಸವಪ್ರಭು ಹೀಗೆ ಹೆಣ್ಣು ಮಗುವಿಗೆ ಬಸವಾಂಜಲಿ, ಬಸವಶ್ರೀ ಎಂಬ ಇತ್ಯಾದಿಯಾಗಿ ನಾಮಕರಣ ಮಾಡಿ, ಪಾಲನೆ-ಪೋಷಣೆಗಾಗಿ ದಾದಿಯರನ್ನು ನೇಮಿಸಿದ್ದಾರೆ. ಇಲ್ಲಿ ಅನಾಥ ಶಿಶುಗಳ ಜೊತೆಗೆ ಜೀವನದಲ್ಲಿ ನೊಂದು-ಬೆಂದು ಜೀವನೋತ್ಸಾಹವನ್ನೇ ಕಳೆದುಕೊಂಡ ಅಬಲೆ ಸ್ತ್ರೀಯರಿಗೂ ಆಶ್ರಯ ನೀಡಿ ಅವರಿಗೆ ಭದ್ರವಾದ ನೆಲೆ ಒದಗಿಸಿ ಅವರಲ್ಲಿ ಆತ್ಮಸ್ಥೈರ್ಯ ತುಂಬಿ ಬದುಕಲು ಆಶ್ರಯವಾಗಿದ್ದಾರೆ.

ಬಸವ ಶಿಶುಗಳ ದಿನಾಚರಣೆ :

ಶ್ರೀ ಬಸವಲಿಂಗ ಪಟ್ಟದ್ದೇವರು ಪ್ರತಿ ವರ್ಷ ತಾವು ಹುಟ್ಟಿದ ದಿವಸ (ಆಗಸ್ಟ್) ೨೫ ಕ್ಕೆ ಬಸವ ಶಿಶುಗಳ ಹುಟ್ಟು ಹಬ್ಬವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸುತ್ತಾರೆ. ಪೂಜ್ಯ ಶ್ರೀಗಳ ದೃಷ್ಟಿಯಲ್ಲಿ ಅನಾಥ ಮಕ್ಕಳು ದೇವರಾಗಿ ಕಂಡಿವೆ. ಅದಕ್ಕಾಗಿ ಅವರು ಗುರುಕುಲದ ಹೆಬ್ಬಾಗಿಲು 'ಬಸವ ಮಹಾಮನೆ' ದ್ವಾರದ ಬಳಿ ತೊಟ್ಟಿಲು ಕಟ್ಟಿದ್ದಾರೆ. ತಮಗೆ ಮಗು ಬೇಡವಾದರೆ ದಯವಿಟ್ಟು ಯಾರು ಮಗುವನ್ನು ರಸ್ತೆಯ ಮೇಲೆ ಬಿಸಾಡಬೇಡಿ, ತಮಗೆ ಸಾಕಲಿಕ್ಕಾಗದಿದ್ದರೆ ನಮಗೆ ಕೊಡಿ ಇಲ್ಲವೆ ಸಮಾಜದಲ್ಲಿ ಸಾಕಿ ಬೆಳೆಸುವಂಥವರು ಬೇಕಾದಷ್ಟು ಜನರಿದ್ದಾರೆ ಅವರಿಗಾದರೂ ನೀಡಿ ಎನ್ನುತ್ತಾರೆ. ಅದಕ್ಕಾಗಿಯೇ ಅವರು ಅನಾಥ ಶಿಶುಗಳ ಸಂರಕ್ಷಣ ಧಾಮಕ್ಕೆ ಕರ್ನಾಟಕ ಸರ್ಕಾರದಿಂದ ೨೦೧೦ ರಲ್ಲಿ ಮಾನ್ಯತೆ ಪಡೆದುಕೊಂಡಿದ್ದಾರೆ. ಒಬ್ಬ ಮಠಾಧೀಶರಾಗಿ ಪೂಜ್ಯರು ಅನಾಥ

ಮಕ್ಕಳಿಗೆ ತಾಯಿಯಾಗಿ ಮಮತೆ ವಾತ್ಸಲ್ಯಗಳಿಂದ ಎಲ್ಲವೂ ತಾವೇ ಆಗಿ ಅನಾಥ ಮಕ್ಕಳನ್ನು ಅನಾಥ ಎಂದರೆ ಮಕ್ಕಳ ಮೃದು ಮನಸ್ಸಿಗೆ ನೋವಾಗಬಾರದೆಂದು ಬಸವಶಿಶುಗಳೆಂದು ಕರೆಯುತ್ತಾ, ಪೂಜ್ಯರು ಡಾ.ಸರ್ವೇಪಲ್ಲಿ ರಾಧಾಕೃಷ್ಣನ್‌ರಂತೆ ಹಾಗೂ ಪಂಡಿತ ಜವಾಹರಲಾಲ್ ನೆಹರುರಂತೆ ಶ್ರೀ ಬಸವಲಿಂಗ ಪಟ್ಟದ್ದೇವರು ತಮ್ಮ ಜನ್ಮ ದಿನವನ್ನು ಸುದೈವಿ ಮಕ್ಕಳ ದಿನಾಚರಣೆಯಾಗಿ ಆಚರಿಸುತ್ತಿರುವ ಮಹನೀಯರಾಗಿದ್ದಾರೆ.

ಬಾಲ ಕಾರ್ಮಿಕರ ಪುನರ್ವಸತಿ ಶಾಲೆ :

ಹಳ್ಳಿಯ ಜನರು ಬದುಕನ್ನು ಹುಡುಕಿಕೊಂಡು ನಗರ ಸೇರುತ್ತಿದ್ದಾರೆ. ಜೀವನಾವಶ್ಯಕ ವಸ್ತುಗಳ ಬೆಲೆಗಳು ದಿನದಿಂದ ದಿನಕ್ಕೆ ದುಬಾರಿಯಾಗಿತ್ತಾ ಜೀವನ ಸಾಗಿಸುವುದು ಕಷ್ಟವಾಗುತ್ತಿದೆ. ಹಾಗೆಯೇ ಜೀವನದಲ್ಲಿ ಎಲ್ಲರ ಬೇಡಿಕೆಗಳು ಹೆಚ್ಚಾಗಿವೆ. ಅದಕ್ಕಾಗಿ ದಿನೇ ದಿನೇ ಬಾಲ ಕಾರ್ಮಿಕರ ಸಂಖ್ಯೆ ಏರುತ್ತಿದೆ. ಇದನ್ನು ಗಮನಿಸಿದ ಪೂಜ್ಯರು ಅಕ್ಕಮಹಾದೇವಿ ಬಾಲ ಕಾರ್ಮಿಕರ ಪುನರ್ವಸತಿ ಶಾಲೆಯನ್ನು ಪ್ರಾರಂಭಿಸಿದರು. ೧೯೯೨ ರ ಜೂನ್ ತಿಂಗಳಲ್ಲಿ ಭಾಲ್ಕಿ ತಾಲೂಕಿನ ಕರಡಿಯಾಳದ ಚನ್ನಬಸವೇಶ್ವರ ಗುರುಕುಲದ ಆವರಣದಲ್ಲಿ ನಡೆಯುತ್ತಿತ್ತು.

ಅಬಲೆಯರಿಗೆ ಆಶ್ರಯ :

ಈಗ ಅನೇಕ ಮಹಿಳೆಯರು ಗಂಡನನ್ನು ಕಳೆದುಕೊಂಡವರು, ವಿಚ್ಛೇದನಗೊಂಡ ಮಹಿಳೆಯರೂ ಸಾಕಷ್ಟು ಸಂಖ್ಯೆಯಲ್ಲಿರುವ ಅಬಲೆಯರಿಗೆ ನಾನಾ ರೀತಿಯ ಕೆಲಸಗಳನ್ನು ಕೊಟ್ಟು ಬದುಕುವ ಮಾರ್ಗ ತೋರಿಸುತ್ತಿದ್ದಾರೆ.

ವಿಶೇಷಚೇತನರ, ಮಹಿಳೆಯರ ವಸತಿ ಸಂಗೀತ ಶಾಲೆ :

ವಿಶೇಷಚೇತನ (ಅಂಗವಿಕಲ) ಮಹಿಳೆಯರಿಗಾಗಿ ವಸತಿ ಶಾಲೆ ತೆರೆಯಬೇಕೆಂದು ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರ ಹಿರಿದಾದ ಸಂಕಲ್ಪವನ್ನು ಡಾ. ಬಸವಲಿಂಗ ಪಟ್ಟದ್ದೇವರು ಸಾಕಾರಗೊಳಿಸಿದ್ದಾರೆ. ಮಹಿಳೆಯರಿಗಾಗಿ ಸಂಗೀತ ಶಾಲೆಯನ್ನು ಔರಾದ ತಾಲ್ಲೂಕಿನ ಖೇಡ ಸಂಗಮದ ನೀಲಾಂಬಿಕಾ ಆಶ್ರಮದಲ್ಲಿ ೧೯೯೪ ರಲ್ಲಿ ಪ್ರಾರಂಭಿಸಿದ್ದಾರೆ. ಅದು ನೀಲಾಂಬಿಕಾ ಅಂಗವಿಕಲ ಮಹಿಳೆಯರ ವಸತಿ ಸಂಗೀತ ಪಾಠಶಾಲೆ ಎಂಬುದೇ ಅದರ ಹೆಸರಾಗಿದೆ. ನೀಲಾಂಬಿಕಾ ಸಂಗೀತ ಪಾಠ ಶಾಲೆಯನ್ನು ಹಿರೇಮಠದಲ್ಲಿ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಪ್ರಾರಂಬಿಸಿದ ಶಾಲೆಯನ್ನು ಪೂಜ್ಯರು ಅದನ್ನು ಉಳಿಸಿ ಬೆಳೆಸಿಕೊಂಡು ನಡೆಸಿದ್ದಾರೆ.

ವೃದ್ಧಾಶ್ರಮ :

ಆಧುನಿಕ ಜೀವನದ ಬೆನ್ನಹತ್ತಿ ಹಣದ ಗುಂಗಿನಲ್ಲಿ ಹೆತ್ತು-ಹೊತ್ತ ತಂದೆ ತಾಯಿಯರನ್ನು ಕಡೆಗಣಿಸುವವರ ಸಂಖ್ಯೆಯು ತುಂಬಾ ಹೆಚ್ಚಾಗುತ್ತಿದೆ. ಮೊಮ್ಮಕ್ಕಳನ್ನು ಆಡಿಸುತ್ತಾ ನೆಮ್ಮದಿಯಿಂದ ದಿನಗಳೆಯುವ ವಯಸ್ಸಿಲ್ಲಿ ಹತಾಶರಾಗಿ ಒದ್ದಾಡುವುದನ್ನು ಶ್ರೀ ಬಸವಲಿಂಗ ಪಟ್ಟದ್ದೇವರ ಕರುಳು ಚುರ್ರೆಂದು ಮಕ್ಕಳಿಂದ ನಿರ್ಲಕ್ಷಿತ ವೃದ್ಧರಿಗೆ ಮಠದ ಅಡಿಯಲ್ಲಿ ವೃದ್ಧಾಶ್ರಮ ತೆರೆಯುವ ಉದ್ದೇಶ ಹೊಂದಿದ್ದಾರೆ.

ಪ್ರಸಾದ ನಿಲಯ :

ಶ್ರೀ ಹಾನಗಲ್ ಕುಮಾರೇಶ್ವರ ಉಚಿತ ಪ್ರಸಾದ ನಿಲಯ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಮೊದಲಿಗೆ ಮೋರ್ಗಿಯಲ್ಲಿ ೧೯೩೬ ರಲ್ಲಿ ಸ್ಥಾಪಿಸಿದರು. ಮುಂದೆ ಅನಿವಾರ್ಯ ಕಾರಣಗಳಿಂದ ಔರಾದ

ತಾಲ್ಲೂಕಿನ ಸಂಗಮದಲ್ಲಿ ಅಲ್ಲಿಂದ ವರ್ಗಾವಣೆಯಾಗಿ ಕಮಲನಗರಕ್ಕೆ ಬಂದು ಕೊನೆಗೆ ಹಿರೇಮಠದಲ್ಲಿ ಭದ್ರವಾಗಿ ನೆಲೆ ಕಂಡಿತು. ಈಗ ಈ ಪ್ರಸಾದ ನಿಲಯವನ್ನು ಪೂಜ್ಯರು ತುಂಬ ಉತ್ತಮ ರೀತಿಯಿಂದ ಮುನ್ನಡೆಸುತ್ತಿದ್ದಾರೆ.

ಡಾ.ಚನ್ನಬಸವ ಪಟ್ಟದ್ದೇವರ ಪ್ರಸಾದ ನಿಲಯ :

ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಎಸ್.ಎಸ್.ಎಲ್.ಸಿ. ನಂತರ ಉನ್ನತ ಶಿಕ್ಷಣಕ್ಕಾಗಿ ನಗರಗಳಿಗೆ ಬರುವ ಹಳ್ಳಿಯ ಬಡವಿದ್ಯಾರ್ಥಿಗಳಿಗಾಗಿ ಊಟ ಹಾಗೂ ವಸತಿಯ ಸಮಸ್ಯೆಯನ್ನು ಮನಗಂಡು ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರ ಹೆಸರಿನಲ್ಲಿ ಬೀದರದಲ್ಲಿ ಪ್ರಸಾದ ನಿಲಯವನ್ನು ಆಗಸ್ಟ್ ೨೦೦೭ ರಲ್ಲಿ ಪ್ರಾರಂಭಿಸಿದ್ದಾರೆ. ಈ ಪ್ರಸಾದ ನಿಲಯವನ್ನು ಬೀದರನ ವಿದ್ಯಾನಗರದ ಬಡಾವಣೆಯಲ್ಲಿ ಮಠದ ಕಟ್ಟಡದಲ್ಲಿ ಎಲ್ಲಾ ಜಾತಿ ಜನಾಂಗದ ವಿದ್ಯಾರ್ಥಿಗಳಿಗೂ ಪ್ರವೇಶ ಕಲ್ಪಿಸಿದ್ದಾರೆ.

ಶ್ರೀ ಚನ್ನಬಸವೇಶ್ವರ ನಿತ್ಯದಾಸೋಹ :

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು 'ಶ್ರೀ ಚನ್ನಬಸವೇಶ್ವರ ನಿತ್ಯದಾಸೋಹವನ್ನು ಮಠದಲ್ಲಿ ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಬೆಳಗಿನ ಉಪಹಾರದ ಜೊತೆಗೆ ಹಾಗೂ ಮಧ್ಯಾಹ್ನ ಮತ್ತು ರಾತ್ರಿ ಊಟ ಅಲ್ಲಿ ಪ್ರತಿನಿತ್ಯ ಸಿಗುವ ವ್ಯವಸ್ಥೆ ಮಾಡಿದ್ದಾರೆ. ೧೨ನೆಯ ಶತಮಾನದ ಬಸವಣ್ಣನವರ ನಿತ್ಯದಾಸೋಹದ ಪರಿಕಲ್ಪನೆಯನ್ನು ಈ ಕಾಲದಲ್ಲಿ ಶ್ರೀ ಬಸವಲಿಂಗ ಪಟ್ಟದ್ದೇವರು ಭಾಲ್ಕಿ ಹಿರೇಮಠದಲ್ಲಿ ಸಾಕಾರಗೊಳಿಸುತ್ತಿದ್ದಾರೆ.

ಉಚಿತ ಸಾಮೂಹಿಕ ವಿವಾಹ :

ನಮ್ಮ ದೇಶದಲ್ಲಿ ಪ್ರತಿಯೊಂದು ಗಂಡು ಹೆಣ್ಣಿನ ನಿಜವಾದ ಜೀವನ ಪ್ರಾರಂಭವಾಗುವುದು ಈ ಮದುವೆಯಿಂದಲೇ, ಮದುವೆ ಎಂಬುದು ಗಂಡು ಹೆಣ್ಣನ್ನು ನೈತಿಕ ನೆಲೆಯಲ್ಲಿ ಪರಸ್ಪರ ಅರ್ಥಪೂರ್ಣವಾಗಿ ಬೆಸೆಯುವ ಒಂದು ಪವಿತ್ರವಾದ ಸಮಾರಂಭ. ಈ ಉಚಿತ ಸಾಮೂಹಿಕ ವಿವಾಹಗಳನ್ನು ಪೂಜ್ಯ ಶ್ರೀಗಳು ೨೦೦೦ ರಿಂದ ಪ್ರಾರಂಭಿಸಿದ್ದಾರೆ. ಅಂದಿನಿಂದ ಪ್ರತಿವರ್ಷ ನಿರಂತರವಾಗಿ ಹಮ್ಮಿಕೊಳ್ಳುವುದರ ಮೂಲಕ ದೇಶದ ಸಮಾಜದ ಅನೇಕ ಬಡ ಜನರ ಮದುವೆ ಮಾಡಿಸಿ ಅವರನ್ನು ಆರ್ಥಿಕ ಸಂಕಷ್ಟದಿಂದ ಬಿಡುಗಡೆ ಮಾಡುತ್ತಿದ್ದಾರೆ ಅವರ ಬಾಳು ಬೆಳಗಿಸುತ್ತಿದ್ದಾರೆ.

ಅಂತರ್ಜಾತಿ ವಿವಾಹ :

ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರ ಆಶ್ರಯದಲ್ಲಿ ಬರುವ ಧರ್ಮದ ನೆಲೆಗಟ್ಟಿನ ಮೇಲೆ ಅಂದು ಅನೇಕ ಜನರಿಗೆ ಅಂತರ್ಜಾತಿ ವಿವಾಹ ನಡೆಸಿದ್ದರು. ತಮ್ಮ ಗುರುವಿನ ಮೌಲ್ಯಗಳನ್ನು ಬೆಳೆಸಿಕೊಂಡು ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಕೂಡ ಅಂತರ್ಜಾತಿ ವಿವಾಹಗಳನ್ನು ನೇರವೇರಿಸಿವುದರ ಮೂಲಕ ಸಮಾಜದಲ್ಲಿ ಪರಸ್ಪರ ಪ್ರೀತಿ ವಿಶ್ವಾಸ, ಐಕ್ಯತೆ ಅಖಂಡತೆಯಂಥ ಕಲ್ಯಾಣ ರಾಜ್ಯ ನಿರ್ಮಾಣದ ಕಾರ್ಯವನ್ನು ಮುಂದುವರೆಸಿಕೊಂಡು ನಡೆಸಿದ್ದಾರೆ.

ದಲಿತೋದ್ಧಾರ-ದಲಿತರಿಗೆ ಲಿಂಗದೀಕ್ಷೆ :

ಶತ ಶತಮಾನಗಳಿಂದಲೂ ಹೀನಕುಲವೆಂದು ಹೀಯಾಳಿಸಿ ಅಸ್ಪೃಶ್ಯರೆಂದು ನರಕ ಸದೃಶ್ಯವಾದ ಬದುಕಿಗೆ ನೂಕಲ್ಪಟ್ಟವರಿಗೆ ಬಸವಣ್ಣನವರು ಹೇಗೆ ಅಪ್ಪನು ನಮ್ಮ ಮಾದರ ಚೆನ್ನಯ್ಯಾ, ಬೊಪ್ಪನು

ನಮ್ಮ ಡೋಹರ ಕಕ್ಕಯ್ಯಾ, ಚಿಕ್ಕಯ್ಯಾನಮ್ಮಯ್ಯಾ ಕಾಣಯ್ಯಾ ಎಂದು ಅವರೆಲ್ಲರನ್ನು ಕೀಳಾಗಿ ನೋಡದೆ ಮೇಲೆತ್ತಿ ಈ ಸಮಾಜದಲ್ಲಿ ಬದುಕುವ ದಾರಿ ತೋರಿದರು ಹಾಗೆಯೇ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಪ್ರಾರಂಭಿಸಿದ ಈ ದಲಿತೋದ್ಧಾರದ ಪರಂಪರೆ ಭಾಲ್ಕಿ ಹಿರೇಮಠದಲ್ಲಿ ಇನ್ನೂ ನಿಂತಿಲ್ಲ. ೧೨ನೇ ಶತಮಾನದ ಒಬ್ಬ ದಲಿತ ಶರಣರಾಗಿ ಕರ್ನಾಟಕದಲ್ಲಿ ಸುಮಾರು ಐವತ್ತಕ್ಕೂ ಮೀರಿ ಅವರ ಮಠಗಳಿಗೆ ಈ ಮಠಗಳಿಗೆ ಶೂದ್ರರೇ ಲಿಂಗದೀಕ್ಷೆ ಪಡೆದು ಮಠಾಧೀಶರಾಗಿದ್ದಾರೆ.

ಶ್ರೀ ಬಸವಲಿಂಗ ಪಟ್ಟದ್ದೇವರು ೨೦೦೭ ರಲ್ಲಿ ಹಿರೇಮಠದ ಆಶ್ರಯದಲ್ಲಿ ರಾಜ್ಯಮಟ್ಟದ ಉರಿಲಿಂಗ ಪೆದ್ದಿ ಮಠಾಧೀಶ್ವರರ ಪ್ರಥಮ ಸಮಾವೇಶ ಮಾಡುವುದರ ಮೂಲಕ ಜನರಲ್ಲಿನ ದಲಿತ ಮಠಾಧೀಶರ ಬಗೆಗಿನ ಕೀಳು ಭಾವನೆಯನ್ನು ತೊಡೆದುಹಾಕಲು ಪ್ರಯತ್ನಿಸಿದ್ದರು. ಈಗ ಭಾಲ್ಕಿಯ ಅಶೋಕನಗರದ ದಲಿತರ ಓಣಿಯಲ್ಲಿ ಶರಣ ಉರಿಲಿಂಗ ಪೆದ್ದಿಯವರ ಮಠವಿದೆ. ಇನ್ನು ಮುಂದುವರೆದು ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ದಲಿತರಿಗೆ ಲಿಂಗದೀಕ್ಷೆ ನೀಡುವ ಕಾರ್ಯಕ್ರಮಗಳು ಕರ್ನಾಟಕ ಅಷ್ಟೆ ಅಲ್ಲ ಮಹಾರಾಷ್ಟ್ರ, ಆಂಧ್ರದಂಥ ಅನೇಕ ರಾಜ್ಯಗಳನ್ನು ದಾಟಿ ಅನೇಕ ದಲಿತ ಜನಾಂಗಕ್ಕೆ ಲಿಂಗದೀಕ್ಷೆ ನೀಡುತ್ತಾ ಬಸವಧರ್ಮದ ಪ್ರಸಾರದಲ್ಲಿ ತೊಡಗಿಸಿಕೊಂಡಿದ್ದಾರೆ.

ಗೋಶಾಲೆ :

ನಮ್ಮ ದೇಶದಲ್ಲಿ ಆಕಳಿಗೆ ಗೋಮಾತೆ, ಕಾಮಧೇನು ಎಂದು ತುಂಬಾ ಪೂಜ್ಯತೆಯಿಂದ ಕಾಣಲಾಗುತ್ತದೆ. ಆಕಳು ಅತ್ಯಂತ ಸಮಾಧಾನದ ಗುಣ ಹೊಂದಿರುವ ಪ್ರಾಣಿ ಎನ್ನಲಾಗಿದೆ. ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಪೂಜ್ಯ ಶ್ರೀ ಡಾ.ಚನ್ನಬಸವದೇವರಷ್ಟೆ ದಿವ್ಯ ದಯ ಗುಣ ಹೊಂದಿದವರು ಹೀಗಾಗಿ ಅವರು ತಮ್ಮ ಗುರುವಿನಿಂದ ಪ್ರಾರಂಭವಾದ

ಈ ಗೋರಕ್ಷಣಾ ಕಾರ್ಯಕ್ಕೆ ಅಧಿಕೃತವಾಗಿ ಚಾಲನೆ ನೀಡಿ ೧೯೯೨ ರಲ್ಲಿ ಒಂದು ಗೋ-ಶಾಲೆಯನ್ನು ತೆರೆದರು. ಈ ಗೋಶಾಲೆಯನ್ನು ಕರಡಿಯಾಳದ ಚನ್ನಬಸವೇಶ್ವರ ಗುರುಕುಲದ ಆವರಣದಲ್ಲಿ ಸ್ಥಾಪಿಸಿದ್ದಾರೆ. ಆ ಗೋಶಾಲೆಯಲ್ಲಿರುವ ಆಕಳ ಹಾಲಿನಿಂದ ಮಜ್ಜಿಗೆ, ಮೊಸರು ಮಾಡಿ ಗುರುಕುಲದ ಮಕ್ಕಳಿಗೆ ನೀಡಲಾಗುತ್ತದೆ. ಇನ್ನೂ ಈ ಗೋಶಾಲೆಯ ದನಗಳ ಸೆಗಣಿಯಿಂದ ವಿಭೂತಿ ತಯಾರಿಸಲಾಗುತ್ತಿತ್ತು.

ದುಶ್ಚಟ ದುರ್ಗುಣಗಳ ನಿರ್ಮೂಲನೆ :

ಮಾನವ ದೇಹವೆಂದರೆ ಸಾಮಾನ್ಯವಲ್ಲ. ಇದನ್ನು ಹಾಳು ಮಾಡಿಕೊಳ್ಳಬಾರದು ಪ್ರಸಾದ ಕಾಯವನ್ನು ಕೆಡಿಸಲಾಗದೆಂಬ ಶರಣರ ವಾಕ್ಯದಂತೆ ಪೂಜ್ಯ ಶ್ರೀಗಳು ಅನೇಕ ದುಶ್ಚಟಗಳಿಗೆ ದಾಸರಾದ ಯುವಜನರನ್ನು ಸರಿದಾರಿಗೆ ಆಗಾಗ ಅನೇಕ ವಿಧಾಯಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಜನ ಜಾಗೃತಿ ಜಾಥ, ಶಿಬಿರ, ಬೀದಿ ನಾಟಕಗಳ ಮೂಲಕ ಜನರಲ್ಲಿ ಅರಿವು ಮೂಡಿಸುತ್ತಿದ್ದಾರೆ.

ರೋಗಿಗಳಿಗೆ ನೆರವು :

ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಸಮಾಜದ ಅನೇಕ ರೋಗಿಗಳ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಕ್ಯಾನ್ಸರ್ ರೋಗದಿಂದ ಬಳಲುತ್ತಿದವರಿಗೆ, ಮಾನಸಿಕ ರೋಗದಿಂದ ಬಳಲುತ್ತಿದ್ದವರಿಗೆ ಸಹಾಯ ಹಸ್ತ ಚಾಚುತ್ತಾ, ಆಗಾಗ ಭಾಲ್ಕಿ ಹಿರೇಮಠದ ಆಶ್ರಯದಲ್ಲಿ ರಕ್ತದಾನ, ನೇತ್ರದಾನದಂತಹ ಶಿಬಿರಗಳನ್ನು ಅನೇಕ ರೋಗಿಗಳ ಆರೋಗ್ಯವನ್ನು ಕಾಪಾಡುವ ಕಾರ್ಯವು ಮಾಡುತ್ತಾ ರೋಗಿಗಳಿಗೆ ಹಣ್ಣು-ಹಂಪಲುಗಳ ವ್ಯವಸ್ಥೆಯನ್ನು ಕಲ್ಪಿಸುತ್ತಾರೆ.

ಮಾನವೀಯತೆ ಮೆರೆದ ಸಂದರ್ಭಗಳು :

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಮಾನವೀಯತೆ ಮೆರೆದ ಅನೇಕ ಸಂದರ್ಭಗಳನ್ನು ಕಾಣಬಹುದು. ೧೯೯೩ ರಲ್ಲಿ ಮಹಾರಾಷ್ಟ್ರದಲ್ಲಿನ ಖಿಲಾರಿಯಲ್ಲಿ ಭೂಕಂಪ, ೨೦೦೫ ರ ಗುಜರಾತ್ ಕಚ್ ಭೂಕಂಪ, ಇತ್ತೀಚಿಗೆ ಘಟಿಸಿದ ಉತ್ತರ ಕರ್ನಾಟಕದಲ್ಲಿ ಬಂದ ಭೀಕರ ನೆರೆಹಾವಳಿ ಹಾಗೂ ಅನೇಕ ಕಡೆಗಳಲ್ಲಿ ಬಂದ ಸುನಾಮಿಯಂತಹ ಸಂದರ್ಭ ಕೊಡಗಿನ ಪ್ರಕೃತಿವಿಕೋಪ ಹೀಗೆ ಹಲವಾರು ಸಂದರ್ಭಗಳಲ್ಲಿ ಅವರು ಹಣ ಸಂಗ್ರಹಿಸಿ ಅದನ್ನು ಆಯಾ ಭಾಗದ ಜಿಲ್ಲಾಧಿಕಾರಿಗಳ ಮೂಲಕ ಪರಿಹಾರ ನೀಡುತ್ತಿದ್ದಾರೆ.

ಹೀಗೆ ಡಾ.ಬಸವಲಿಂಗ ಪಟ್ಟದ್ದೇವರು ತಮ್ಮ ಗಮನಕ್ಕೆ ಬಂದ ಸಮಸ್ಯೆಗಳನ್ನು ಸ್ಪಂದಿಸುತ್ತಿದ್ದಾರೆ. ಅಜ್ಞಾನ, ಬಡತನ, ನಿರುದ್ಯೋಗ, ಜಾತೀಯತೆ. ಅಸ್ಪೃಶ್ಯದಂಥ ಸಮಸ್ಯೆಗಳ ನಿರ್ಮೂಲನೆಗೆ ಸದಾ ಪ್ರಯತ್ನಿಸುತ್ತಿದ್ದಾರೆ. ರೈತ, ಕೂಲಿಕಾರ್ಮಿಕ, ಬಾಲಕಾರ್ಮಿಕ, ಅಂಗವಿಕಲ, ಮಹಿಳೆ, ದಲಿತ, ವಿಧವೆ, ವೃದ್ಧರಂಥ, ಲೋಕ ನಿರ್ಲಕ್ಷಿತ, ನಿರಾಶ್ರಿತ, ನಿರ್ಗತಿಕ, ನಿಶಕ್ತ ಜನರನ್ನು ಕಂಡು ಅಂಥವರಿಗೆಲ್ಲಾ ಆಶ್ರಯ ನೀಡಿ ಅವರಲ್ಲಿ ಚೈತನ್ಯ ತುಂಬುತ್ತಿದ್ದಾರೆ. ಸಮಾಜದಲ್ಲಿ ಐಕ್ಯತೆ ಸಾಮರಸ್ಯತೆ, ಸೌಹಾರ್ದತೆ, ಸಮಾನತೆ, ವಿಶ್ವಬಂಧುತ್ವದಂಥ ಪೂಜ್ಯರ ಮೌನಕ್ರಾಂತಿ ಅನೇಕರ ಬದುಕಿನ ಕತ್ತಲೆ ಕಳೆದು ಬೆಳಕು ಮೂಡಿಸಿದೆ.

ಧಾರ್ಮಿಕ ಕ್ಷೇತ್ರ :

ಧರ್ಮ ಸಾಹಿತ್ಯವೆಂದರೆ ವೇದ, ಪುರಾಣ, ಶಾಸ್ತ್ರ, ತರ್ಕಗಳಲ್ಲ, ಆಚರಣೆ ಎಂದರೆ ದೀಪ-ಧೂಪ, ವ್ರತ, ಉಪವಾಸ, ಕಾಯಿ-ಕರ್ಪೂರ ಇವಾವೂ ಅಲ್ಲ. ತಾಯಿತ, ದಾರ, ನಿಂಬೆಹಣ್ಣು, ಜ್ಯೋತಿಷ್ಯ ಇವುಗಳನ್ನು ಅವರೆಂದೂ ನಂಬಿದವರಲ್ಲ. ಕನಿಷ್ಠ ಧರ್ಮಾಚರಣೆಯ ಮಾರ್ಗ

ಹಿಡಿಯದೆ ಎಲ್ಲವನ್ನು ವೈಜ್ಞಾನಿಕವಾಗಿ, ವೈಚಾರಿಕವಾಗಿ ಅರಿವನ್ನು ಜಾಗೃತಗೊಳಿಸಿಕೊಳ್ಳವುದಕ್ಕಾಗಿ ನಮ್ಮ ಅಂಗೈಗೆ ಇಷ್ಟಲಿಂಗವನ್ನು ಕೊಟ್ಟಿದ್ದು ಬಸವಣ್ಣನವರು ಮತ್ತು ಬಸವಧರ್ಮ, ವಿಶ್ವ ಮೌಲ್ಯಗಳನ್ನೊಳಗೊಂಡ ವಚನ ಸಾಹಿತ್ಯ ಇಂಥ ಅಮೂಲ್ಯವಾದ ಶರಣ ತತ್ವ ಪ್ರಸಾರಕ್ಕಾಗಿ ತಮ್ಮ ಇಡೀ ಜೀವನವನ್ನೇ ಸಮರ್ಪಿಸಿಕೊಂಡಿದ್ದಾರೆ. ಇಡೀ ವಿಶ್ವಕ್ಕೆ ಬಸವಧರ್ಮದ ಭದ್ರ ತಳಹದಿ ಒದಗಿಸಬೇಕೆಂಬ ಹಿರಿದಾದ ಉದ್ದೇಶ ಅವರದ್ದಾಗಿದೆ. ಅದಕ್ಕಾಗಿಯೇ ಹಗಲಿರುಳೆನ್ನದೆ ನಿರಂತರವಾಗಿ ಶ್ರಮಿಸುತ್ತಿರುವ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಹಿರೇಮಠದಲ್ಲಿ ಪ್ರತಿದಿನ, ಪ್ರತಿವಾರ, ಪ್ರತಿಮಾಸ, ಪ್ರತಿವರ್ಷ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಾ ವಚನ ಸಾಹಿತ್ಯದ ಮೂಲಕ ಬಸವಧರ್ಮದ ಪ್ರಸಾರ ಅದ್ಭುತವಾಗಿ ನಡೆಸುತ್ತಿದ್ದಾರೆ..

ಸಾಮೂಹಿಕ ಪ್ರಾರ್ಥನೆ ಹಾಗೂ ವಚನ ಚಿಂತನೆ :

ಭಾಲ್ಕಿ ಹಿರೇಮಠದಲ್ಲಿ ಮೊದಲಿಗೆ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ೧೯೩೬ ರಲ್ಲಿ ತಮ್ಮ ಹಾನಗಲ್ ಕುಮಾರೇಶ್ವರ ಉಚಿತ ಪ್ರಸಾದ ನಿಲಯದ ವಿದ್ಯಾರ್ಥಿಗಳಿಗಾಗಿ 'ಸಾಮೂಹಿಕ ಪ್ರಾರ್ಥನೆ ಮತ್ತು ವಚನ ಚಿಂತನೆ' ಎಂಬ ಅಧ್ಯಾತ್ಮಿಕ ಪರಂಪರೆಯನ್ನು ಪ್ರಾರಂಭಿಸಿದರು. ಈ ಪ್ರಾರ್ಥನಾ ಮಾರ್ಗವನ್ನು ಪ್ರತಿಯೊಬ್ಬ ವ್ಯಕ್ತಿ ತನ್ನ ಬಾಲ್ಯದಿಂದಲೇ ರೂಢಿಸಿಕೊಳ್ಳುವುದು ಒಳ್ಳೆಯದು, ಮನಸ್ಸಿನ ಶುದ್ಧಿಗೆ ಅಂತರಂಗದ ದರ್ಶನಕ್ಕೆ ಆತ್ಮ-ಪರಮಾತ್ಮರ ಮಧುರ ಬಾಂಧವ್ಯಕ್ಕೆ ೧೨ನೇಯ ಶತಮಾನದ ಶರಣರು ಅನುಸರಿಸಿದ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಮಾರ್ಗಗಳಲ್ಲಿ ಪ್ರಾರ್ಥನೆಯೂ ಒಂದಾಗಿದೆ.

ಸಾಪ್ತಾಹಿಕ ಸಾಮೂಹಿಕ ವಚನ ಪ್ರವಚನ :

ಈ ಸಾಪ್ತಾಹಿಕ ವಚನ ಪ್ರವಚನವನ್ನು ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಎಲ್ಲರಿಗೂ ವಚನಗಳು ಓದುವ ಅಭ್ಯಾಸವಾಗಲೆಂದು ವಾರಕ್ಕೊಮ್ಮೆ ಪ್ರಾರ್ಥನೆಯ ಜೊತೆಗೆ ಒಂದೊಂದು ವಚನ ಚಿಂತನೆ ಮಾಡಿರೆಂದು ಹೇಳುತ್ತಾ ಆ ಕಾರ್ಯಕ್ರಮವನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ಮೊದಲಿನಿಂದಲೂ ಅಲ್ಲಿಯ ಹಿರಿಯರಿಗೆ ವಹಿಸಿ ಬೆಳಗ್ಗೆ ೯ ರಿಂದ ೧೦ ರ ವರೆಗೆ ನಡೆಯುವ ಈ ಕಾರ್ಯಕ್ರಮದಲ್ಲಿ ಭಾಲ್ಕಿ ಪಟ್ಟಣದ ಅನೇಕ ಹಿರಿಯರು, ಯುವಕರು ಪಾಲ್ಗೊಳ್ಳುತ್ತಾರೆ.

ಮಾಸಿಕ ಶಿವಾನುಭವ ಗೋಷ್ಠಿ :

ಶರಣರು ತನು-ಮನ, ಭಾವ-ಪ್ರಾಣ ಶುದ್ಧಿಗಾಗಿ ಮತ್ತು ಭವಬಂಧನದ ಮುಕ್ತಿಗೆ ಅಂತರಂಗದ ಅರಿವಿನ ಬೆಳಕಿಗೆ ನಿಜದ ನಿಲುವಿನ ದರ್ಶನ, ಸಾಕ್ಷಾತ್ಕಾರ ಹಾಗೂ ಸಾಮರಸ್ಯದ ಸುಖಕ್ಕೆ ಏರುವ ೧೨ನೆಯ ಶತಮಾನದ ಆ ಅನುಭವ ಮಂಟಪದ ಪರಂಪರೆಯನ್ನು ಪಾಲಿಸಬೇಕೆಂಬ ನಿಟ್ಟಿನಲ್ಲಿ ಭಾಲ್ಕಿಯ ಹಿರೇಮಠದ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಶಿವಾನುಭವ ಗೋಷ್ಠಿಯನ್ನು ನಡೆಸುವುದರ ಮೂಲಕ ಸಮಾಜದಲ್ಲಿನ ಜನರಲ್ಲಿರುವ ಅಹಂಕಾರದ ಗುಣ, ಸ್ವಾರ್ಥಭಾವನೆ, ಅಜ್ಞಾನ, ಮೌಢ್ಯತೆ ಮೊದಲಾದವುಗಳನ್ನು ಓಡಿಸಿ ಅವರಲ್ಲಿ ವೈಚಾರಿಕತೆ ತರುವುದರ ಜೊತೆಗೆ ಅವರ ವ್ಯಕ್ತಿತ್ವವನ್ನು ಬೆಳೆಸುವ ಈ ಶಿವಾನುಭವದ ಗೋಷ್ಠಿಗಳಿಗೆ ನಾಡಿನ ಅನುಭಾವಿ ಸಾಹಿತಿಗಳಿಗೆ, ವಚನ ಸಾಹಿತ್ಯ ವಿದ್ವಾಂಸರಿಗೆ ಕರೆಸಿ ಉಪನ್ಯಾಸ ಕೊಡಿಸುತ್ತಾರೆ. ಕರ್ನಾಟಕ ಮಾತ್ರವಲ್ಲ ನೆರೆಯ ಮಹಾರಾಷ್ಟ್ರ, ತೆಲಂಗಾಣ, ಆಂಧ್ರದಂಥ ಅನ್ಯ ರಾಜ್ಯಗಳಲ್ಲಿಯೂ ವಚನ ಸಾಹಿತ್ಯವನ್ನು ಕುರಿತು ಅನುಭಾವ ನಡೆಸುತ್ತಾರೆ.

ಮಾಸಿಕ ಶರಣ ಸಂಗಮ :

ಮಾಸಿಕ ಶರಣ ಸಂಗಮ ಕಾರ್ಯಕ್ರಮವನ್ನು ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ತಮ್ಮ ಗುರುಗಳು ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರ ಸ್ಮರಣಾರ್ಥವಾಗಿ ೨೨-೦೫-೧೯೯೯ ರಂದು ಪ್ರಾರಂಭಿಸಿದ್ದಾರೆ. ಪೂಜ್ಯರು ಲಿಂಗೈಕ್ಯರಾದ ಒಂದು ತಿಂಗಳಲ್ಲಿಯೇ ಆರಂಭವಾದ ಈ ಕಾರ್ಯಕ್ರಮ ಪ್ರತಿ ತಿಂಗಳು ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ.

ತಿಂಗಳ ಅನುಭವ ಮಂಟಪ :

ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದೇವರ ನೆತೃತ್ವದಲ್ಲಿ ತಿಂಗಳ ಅನುಭವ ಮಂಟಪವೆಂದು ಬೀದರ, ಬಸವಕಲ್ಯಾಣ, ಉದಗೀರ್, ಸಂತಪೂರ, ಕಾರಾಮುಂಗಿ, ಹೀಗೆ ನಾನಾ ಕಡೆಗಳಲ್ಲಿ ಪ್ರತಿ ತಿಂಗಳು ಶರಣರ ವಚನ ಚಿಂತನೆಯ ಗೋಷ್ಠಿಯನ್ನು ನಡೆಸುತ್ತಾರೆ.

ಮನೆಗೊಂದು ವಚನ ಪ್ರವಚನ :

ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು 'ಮನೆಗೊಂದು ವಚನ-ಪ್ರವಚನ' ಕಾರ್ಯಕ್ರಮವನ್ನು ೧೨-೧೦-೨೦೦೧ ರಂದು ಪ್ರಾರಂಭಿಸಿದರು. ಈ ಮೊದಲು ಶ್ರೀ ಬಸವಜ್ಯೋತಿ, ಮನೆಯಲ್ಲಿ ಮಹಾಮನೆ, ವಚನೋತ್ಸವದಂಥ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಕಾರಣಾಂತರಗಳಿಂದ ಸ್ವಲ್ಪ ಮಟ್ಟಿಗೆ ನಿಲ್ಲಿಸಿ ಮತ್ತೇ ಪ್ರಾರಂಭಿಸಿ ನಿರಂತರವಾಗಿ ನಡೆಸುವುದಕ್ಕೆ ಮತ್ತು ಕಾರ್ಯಕ್ರಮ ಯಶಸ್ವಿಯಾಗಿ ಅಕ್ಕನ ಬಳಗದವರನ್ನೊಳಗೊಂಡು ಶರಣರು ಹಾಕಿ ಕೊಟ್ಟ ದಾರಿಯಲ್ಲಿ ನಡೆಯಬೇಕೆಂಬ ಹಂಬಲದಿಂದ ಈ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಾರೆ.

ಡಾ.ಚನ್ನಬಸವ ಪಟ್ಟದ್ದೇವರ ಜಯಂತೋತ್ಸವ ಸರ್ವಧರ್ಮ ಸಮನ್ವಯ ಸಮಾವೇಶ :

ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಅಪ್ಪಿಕೊಂಡ ಬಸವಧರ್ಮ, ವಿಶ್ವದ ಹಲವು ಧರ್ಮಗಳ ಒಂದು ಮಹಾಸಂಗಮ, ಬುದ್ಧನ ತ್ಯಾಗ, ಮಹಾವೀರನ ಅಹಿಂಸೆ, ಏಸು ಕ್ರಿಸ್ತನ ಪ್ರೀತಿ, ಮಹ್ಮದ್ ಪೈಗಂಬರನ ಶಾಂತಿ ಈ ಎಲ್ಲವುಗಳ ಸಮಾವೇಶವೇ ಬಸವಧರ್ಮ. ಇಲ್ಲಿ ಭಕ್ತಿ, ಜ್ಞಾನ, ಯೋಗ, ಕ್ರಿಯೆ ಧ್ಯಾನ, ವೈರಾಗ್ಯ, ಅನುಭಾವದ ಜೊತೆಗೆ ವೈಜ್ಞಾನಿಕ ಹಾಗೂ ವೈಚಾರಿಕತೆಗಳ ಮನೋಧರ್ಮದ ಹಿನ್ನಲೆಯೂ ಅಡಗಿದೆ. ಹೀಗಾಗಿ ಅದೊಂದು ವಿಶ್ವದಲ್ಲಿಯೇ ಅತ್ಯಂತ ವಿಶಿಷ್ಟವಾದ ಮತ್ತು ಮೌಲ್ಯಯುತವಾದ ಧರ್ಮವಾಗಿದೆ. ಇಂಥ ಧರ್ಮವನ್ನು ೨೦ನೇ ಶತಮಾನದಲ್ಲಿ ಇದೇ ಕಲ್ಯಾಣ ನಾಡಿನ ಭಾಲ್ಕಿ ಹಿರೇಮಠದಲ್ಲಿ ಮತ್ತೆ ಅನುಷ್ಠಾನಗೊಳಿಸಿದ ಶ್ರೇಯಸ್ಸು ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರಿಗೆ ಸಲ್ಲುತ್ತದೆ.

ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಸರ್ವಧರ್ಮ ಸಮನ್ವಯ ಸಮಾವೇಶವನ್ನು ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರ ಜನ್ಮದಿನವಾದ ಡಿಸೆಂಬರ್ ೨೨ ರಂದು ಜಂಟಿ ಸಮಾರಂಭ ಏರ್ಪಡಿಸಿ, ಹಲವಾರು ಕಾರ್ಯಕ್ರಮಗಳಾದ ಬಸವಜ್ಯೋತಿ ಪಾದಯಾತ್ರೆಯಂಥ ಕಾರ್ಯಕ್ರಮಗಳು ನಡೆಸುತ್ತಾರೆ. ಡಾ.ಚನ್ನಬಸವ ಪಟ್ಟದ್ದೇವರ ಜನ್ಮದಿನ ಹಾಗೂ ಸರ್ವಧರ್ಮ ಸಮಸನ್ವಯ ಸಮಾವೇಶ ಸಮಾರಂಭಕ್ಕೆ ಸರ್ವಧರ್ಮಗಳ ಪ್ರವಾದಿಯರನ್ನು ನಾಡಿನ ಖ್ಯಾತ ವಚನ ಸಾಹಿತ್ಯ ವಿದ್ವಾಂಸರನ್ನು ಪ್ರಸಿದ್ಧ ಮಠಾಧೀಶರನ್ನು ಹೀಗೆ ಅನೇಕ ಗಣ್ಯ ವ್ಯಕ್ತಿಗಳನ್ನು ಕರೆಯಿಸಿ ಉಪನ್ಯಾಸಕೊಡಿಸುವ ಮೂಲಕ ಸರ್ವರಿಗೂ ಜ್ಞಾನ ದಾಸೋಹದೊಂದಿಗೆ ಎಲ್ಲರಿಗೂ ಪ್ರಸಾದ ವ್ಯವಸ್ಥೆ ಹಾಗೂ ವಸತಿ ವ್ಯವಸ್ಥೆ ಮಾಡಿಸಿ ಅತ್ಯಂತ ಅರ್ಥಪೂರ್ಣವಾಗಿ ಜರುಗಿಸುತ್ತಾರೆ.

ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರ ಸ್ಮರಣೋತ್ಸವ :

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು, ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರ ಜಯಂತೋತ್ಸವದಂತೆ ಅವರ ಸ್ಮರಣೋತ್ಸವವನ್ನು ಕೂಡ ಪ್ರತಿವರ್ಷ ತಪ್ಪದೇ ಆಚರಿಸಿಕೊಂಡು ಬರುತ್ತಿದ್ದಾರೆ. ಈ ಕಾರ್ಯಕ್ರಮ ಎಪ್ರಿಲ್ ೨೦ ರಿಂದ ೨೨ ರವರೆಗೆ ಮೂರು ದಿವಸಗಳ ಕಾಲ ಅದ್ದೂರಿಯಾಗಿ ನಡೆಸುತ್ತಾರೆ. ಈ ಕಾರ್ಯಕ್ರಮವು ಎಲ್ಲಕಿಂತಲೂ ಅದ್ಭುತವಾಗಿ ಒಂದು ಮಹಾಸಮ್ಮೇಳನದ ಸ್ವರೂಪವೇ ಪಡೆದುಕೊಳ್ಳುತ್ತದೆ.

ಈ ಸ್ಮರಣೋತ್ಸವದ ಅಂಗವಾಗಿ ಬಸವಧರ್ಮ ಜಾಗೃತಿ ಸಂದೇಶ ಯಾತ್ರೆ,, ಬಸವಜ್ಯೋತಿ ಪಾದಯಾತ್ರೆ ಹಾಗೂ ವಚನ ಕಂಠ ಪಾಠ ಸ್ಪರ್ಧೆ, ಪ್ರವಚನದಂಥ ಅನೇಕ ಕಾರ್ಯಕ್ರಮಗಳನ್ನು ಸ್ಮರಣೋತ್ಸವದ ಪೂರ್ವ ಒಂದು ತಿಂಗಳಪರ್ಯಂತರ ನಡೆಸುತ್ತಾರೆ. ಅದನ್ನು ಕರ್ನಾಟಕ ಮಾತ್ರವಲ್ಲ ನೆರೆಯ ತೆಲಂಗಾಣ, ಆಂಧ್ರ, ಮಹಾರಾಷ್ಟ್ರದಂಥ ಅನ್ಯರಾಜ್ಯಗಳಲೆಲ್ಲಾ ಸಂಚರಿಸಿ ಅಲ್ಲಿನ ಜನರಲ್ಲಿ ಬಸವಧರ್ಮ ಸಂದೇಶಗಳನ್ನು ಬಿತ್ತರಿಸುತ್ತಾರೆ.

ಎಪ್ರಿಲ್ ೨೦ ರಿಂದ ೨೨ ರವರೆಗೆ ಮೂರು ದಿವಸಗಳ ಸಮಾರಂಭದಲ್ಲಿ ನಾಡಿನ ಪ್ರಸಿದ್ಧ ಪ್ರವಚನಕಾರರು, ಉಪನ್ಯಾಸಕರು, ಮಠಾಧೀಶಕರು, ವಚನ ಚಿಂತಕರು, ರಾಜಕಾರಣಿಗಳು, ಅನುಭಾವಿಗಳು ಮೊದಲಾದ ಗಣ್ಯರನ್ನು ಕರೆಯಿಸುತ್ತಾರೆ. ಇದೇ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದವರನ್ನು ಗುರುತಿಸಿ 'ಚನ್ನಬಸವ ಪಟ್ಟದ್ದೇವರು ಪ್ರಶಸ್ತಿ' ನೀಡಿ ಗೌರವಿಸುತ್ತಾರೆ. ಕಾರ್ಯಕ್ರಮದಲ್ಲಿ ನಾಡಿನ ಹಲವು ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯುತ್ತದೆ. ವಿದ್ವಾಂಸರಿಂದ ವಚನ ಸಾಹಿತ್ಯ ಹಾಗೂ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರನ್ನು ಕುರಿತು ವಿಶೇಷ ಉಪನ್ಯಾಸಗಳು ನಡೆಯುತ್ತದೆ.

ರಾಜಕಾರಣಿಗಳು ನಾಡಿನ ಸೇವೆಯ ಬಗ್ಗೆ ಮಾತನಾಡುತ್ತಾರೆ. ಮಠಾಧೀಶರು ಆಶೀರ್ವಚನದ ರೂಪದಲ್ಲಿ ಅನುಭಾವ ನೀಡುತ್ತಾರೆ. ಈ ಕಾರ್ಯಕ್ರಮದಲ್ಲಿ ಬಸವ ಹಾಗೂ ಚನ್ನಬಸವಾಭಿಮಾನಿಗಳು ಅಪಾರ ಸಂಖ್ಯೆಯಲ್ಲಿ ಸೇರುತ್ತಾರೆ. ಒಟ್ಟಾರೆ ಈ ಕಾರ್ಯಕ್ರಮ ಎಲ್ಲದರಕ್ಕಿಂತಲೂ ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

ಅಖಿಲ ಭಾರತ ಒಂಬತ್ತನೆಯ ಶರಣ ಸಾಹಿತ್ಯ ಸಮ್ಮೇಳನ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರ ೭ನೇ ಸ್ಮರಣೋತ್ಸವಕ್ಕೆ ಅಖಿಲ ಭಾರತ ೯ನೇ ಶರಣ ಸಾಹಿತ್ಯ ಸಮ್ಮೇಳನವನ್ನು ಸಂಯೋಜಿಸಿದ್ದರು. ಡಾ.ಬಸವಲಿಂಗ ಪಟ್ಟದ್ದೇವರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ ಶ್ರೀ ಗೊ.ರು.ಚೆನ್ನಬಸವಪ್ಪನವರ ನೇತೃತ್ವದಲ್ಲಿ ಈ ಸಮ್ಮೇಳನ ತುಂಬಾ ಯಶಸ್ವಿಯಾಗಿ ಜರುಗಿತು.

ಶರಣ ಕುಂಬಾರ ಗುಂಡಯ್ಯನ ಸ್ಮರಣೋತ್ಸವ :

೧೨ನೇ ಶತಮಾನದ ಶರಣ ಕುಂಬಾರ ಗುಂಡಯ್ಯನ ಸ್ಮರಣೋತ್ಸವವನ್ನು ಕೂಡ ಪ್ರತಿವರ್ಷ ಜೂನ್ ತಿಂಗಳಲ್ಲಿ ತಪ್ಪದೇ ಆಚರಿಸಿಕೊಂಡು ಬರುತ್ತಿದ್ದಾರೆ. ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಶರಣ ಕುಂಬಾರ ಗುಂಡಯ್ಯ ಭಾಲ್ಕಿಯವರೆ ಆಗಿದ್ದು, ಅಲ್ಲಿಯೇ ಗಡಿಗೆ ಮಾಡುವ ಕಾಯಕದಲ್ಲಿ ತೊಡಗಿಸಿಕೊಂಡು ಆ ಕಾಯಕದಲ್ಲಿಯೇ ದೇವರನ್ನು ಕಾಣುವ ಮಹಾನ್ ಶಿವಭಕ್ತರಾಗಿದ್ದರು. ಈತನ ಆರಾಧ್ಯದೇವ ಕುಂಭೇಶ್ವರ.

ಈ ಕುಂಭೇಶ್ವರ ದೇವಾಲಯು ಕ್ರಿ.ಶ.೧೦ನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದುದು, ಗುಂಡಯ್ಯ ರಚಿಸಿದ ವಚನಗಳು ಲಭ್ಯವಾಗಿಲ್ಲ ಆದರೂ ಜನಪದರ ನುಡಿಯಲ್ಲಿ ಕಾಣಬಹುದು. ಆದರೆ ಇವರ ಸತಿ ಕೇತಲದೇವಿಯ ವಚನಾಂಕಿತದಲ್ಲಿ ಕುಂಭೇಶ್ವರಾ ಎಂದು ವಚನಗಳು ಸಿಗುತ್ತವೆ. ಕುಂಭೇಶ್ವರ ದೇವಸ್ಥಾನವನ್ನು ನಾವು

ಈಗಲೂ ಭಾಲ್ಕಿಯಲ್ಲಿ ಕಾಣಬಹುದು. ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಭಾಲ್ಕಿಯವರೇ ಆದ ಶರಣ ಕುಂಬಾರ ಗುಂಡಯ್ಯನ ಸ್ಮರಣೋತ್ಸವದ ಅಂಗವಾಗಿ ಶರಣ ಗುಂಡಯ್ಯನ ಜೀವನ ಸಂದೇಶ ಕುರಿತು ಉಪನ್ಯಾಸಗಳ ಮೂಲಕ ಕಾರ್ಯಕ್ರಮ ನಡೆಸುತ್ತಾರೆ. ಈಗ ಈ ಶರಣರ ಹೆಸರಿನ ಕಲ್ಯಾಣ ಮಂಟಪ ಭಾಲ್ಕಿಯ ಚನ್ನಬಸವಾಶ್ರಮ ಆವರಣದಲ್ಲಿ ನಿರ್ಮಿಸಲಾಗಿದೆ.

ಬಸವಾದಿ ಶರಣರ ಜಯಂತಿ ಆಚರಣೆ :

ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಮಠದಲ್ಲಿ ಬಸವಣ್ಣವರ ಜಯಂತಿಯ ಜೊತೆಗೆ ೧೨ನೇ ಶತಮಾನದ ಎಲ್ಲ ಶರಣರ ಜಯಂತಿಗಳನ್ನು ಒಂದಾದ ಮೇಲೆ ಒಂದರಂತೆ ಶರಣರ ಜಯಂತಿಗಳು ವೈಚಾರಿಕತೆಯ ನೆಲೆಯಲ್ಲಿ ತುಂಬ ಅರ್ಥಪೂರ್ಣವಾಗಿ ಆಚರಿಸುತ್ತಾರೆ. ಅಜ್ಞಾನದ ಕತ್ತಲೆಯಿಂದ ಜ್ಞಾನದ ಬೆಳಕಿನಡೆಗೆ ಕರೆದೊಯ್ಯಲು ಪ್ರಯತ್ನಿಸುತ್ತಿದ್ದಾರೆ. ಬಸವಧರ್ಮದ ಇಂತಹ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ದೇಶದಾದ್ಯಂತ ನಡೆಯುವ ಶರಣರ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶರಣಧರ್ಮದ ದಿವ್ಯ ಸಂದೇಶ ಕೊಡುತ್ತಿದ್ದಾರೆ.

ಲಿಂಗದೀಕ್ಷೆ, ಸಾಮೂಹಿಕ ಇಷ್ಟಲಿಂಗಾರ್ಚನೆ ಕಾರ್ಯಕ್ರಮಗಳನ್ನು ಪೂಜ್ಯರು ಏರ್ಪಡಿಸುವುದರ ಜೊತೆಗೆ ಸರ್ವಸಮಾಜ ಬಾಂಧವರಿಗೆ ಇಷ್ಟಲಿಂಗ ದೀಕ್ಷೆ ಪಡೆಯಲು ಅವಕಾಶ ಕಲ್ಪಿಸುತ್ತಾರೆ. ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಪ್ರಾರಂಭಿಸಿರುವ ಬಸವಧರ್ಮಧ ಪರಂಪರೆಯನ್ನು ಲೋಕದಲ್ಲಿ ಬೆಳೆಸುತ್ತಾ ಕೇವಲ ಧರ್ಮಕ್ಕೆ ಅಂಟಿಕೊಳ್ಳದೆ ಮಾನವೀಯ ಮೌಲ್ಯಗಳೊಂದಿಗೆ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಶೈಕ್ಷಣಿಕ ಕ್ಷೇತ್ರ :

ಕರ್ನಾಟಕದ ಕಿರೀಟದಂತಿರುವ ಬೀದರ ಜಿಲ್ಲೆ ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳಿಗೆ ಹೊಂದಿಕೊಂಡಿದೆ. ಇಲ್ಲಿ ತೆಲಗುಗಿಂತ ಮರಾಠಿ ಭಾಷೆಯ ಪಾಬಲ್ಯ ಹೆಚ್ಚಾಗಿ ಇರುವುದರಿಂದ ಇಲ್ಲಿನ ಎಷ್ಟೋ ಹಳ್ಳಿಗಳಲ್ಲಿ ಕನ್ನಡ ಶಾಲೆಗಳಿಗಿಂತ ಮರಾಠಿ ಶಾಲೆಗಳು ತಲೆಎತ್ತಿ ನಿಂತಿವೆ.ಬೀದರ ಜಿಲ್ಲೆಯ ಶೈಕ್ಷಣಿಕ ಪರಿಸ್ಥಿತಿ ಉತ್ತಮವಾಗಿ ಇಲ್ಲವೆಂದೂ, ಹಿಂದುಳಿದವರು ಎಂಬ ಹಣೆ ಪಟ್ಟಿ ಹೊತ್ತಿದೆ. ಇಲ್ಲಿನ ಆರ್ಥಿಕ ಪರಿಸ್ಥಿತಿಯೂ ಅಷ್ಟೊಂದು ಹೇಳಿಕೊಳ್ಳಹಾಗಿಲ್ಲ. ಮತ್ತೆ ರೈತರು ಸಂಪೂರ್ಣವಾಗಿ ಮಳೆಯನ್ನೇ ನಂಬಿಕೊಂಡು ಬದುಕುವಂಥವರು ರೈತರಲ್ಲಿ ಸಣ್ಣ ರೈತರೇ ಹೆಚ್ಚು. ಇಲ್ಲಿ ಕೂಲಿ ಕಾರ್ಮಿಕರು, ನಿರ್ಗತಿಕರು, ದಲಿತರು ಕೂಡ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ತಮ್ಮ ಮಕ್ಕಳಿಗೆ ಶಾಲೆಗೆ ಕಳಿಸುವ ಬದಲು ಕೂಲಿಗೆ ಕಳಿಸುತ್ತಿದ್ದಾರೆ. ಇತ್ತೀಚೆಗೆ ಶಿಕ್ಷಣ ಬಗ್ಗೆ ಜಾಗೃತಿ ಮೂಡಿಸುತ್ತಾ ಮಕ್ಕಳಿಗೆ ಶಾಲೆಗೆ ಕಳಿಸಬೇಕೆಂದು ಹಳ್ಳಿಗಳಲ್ಲಿ ಪಾಲಕರು ಸರಕಾರಿ ಶಾಲೆಗೆ ಕಳುಹಿಸುತ್ತಾರೆ. ಆದರೆ ನಮ್ಮ ಆಧುನಿಕ ಶಿಕ್ಷಣದ ಹಲವಾರು ದೋಷಗಳಿಂದ ಕೂಡಿದೆ. ಪ್ರಾಥಮಿಕ ಹಂತದ ಶೈಕ್ಷಣಿಕ ಭೋಧನಾ ಪದ್ಧತಿಯಲ್ಲಿನ ಗುಣಮಟ್ಟ ಹೆಚ್ಚೇನಿಲ್ಲ. ನೈತಿಕ ಆಧ್ಯಾತ್ಮಿಕದಿಂದ ವಿಷಯಗಳ ಬೋಧನೆ ಕಳೆದುಕೊಂಡಿದೆ. ಸಂಸ್ಕಾರ ಶಿಕ್ಷಣವಂತೂ ಮಾಯವಾಗಿ ಬಿಟ್ಟಿದೆ. ಕೇವಲ ಗೀಚುವುದು ಗಿಳಿಪಾಠ ಮಾಡುವುದು ಮುಂದಿನ ಕ್ಲಾಸಿಗೆ ನೂಕುವುದು ಇಂಥ ಶಿಕ್ಷಣ ಪದ್ಧತಿಯ ಮೇಲೆ ಮಕ್ಕಳ ಭವಿಷ್ಯ ನಿಂತಿದೆ.

ಈ ತಂತ್ರಜ್ಞಾನ ಶ್ರೀಮಂತರ ವಶದಲ್ಲಿದೆ. ಅದನ್ನು ಕಲಿಯುವುದು ಕೂಡ ಹಣವಿದ್ದವರಿಗೆ ಮಾತ್ರ ಸಾಧ್ಯವಿದೆ. ಜಾತಿ, ಮತ, ಬಡತನ ಇದ್ಯಾವುದೂ ಇಲ್ಲಿಲ್ಲ. ಅನುಕಂಪ, ಮಾನವೀಯತೆಯಂಥ ಮನುಷ್ಯ, ಮೌಲ್ಯಗಳಿಗೆ ಇಲ್ಲಿ ಯಾವ ಸ್ಥಾನವೂ ಇಲ್ಲ. ಸರ್ವರಿಗೂ ಸರ್ವಶಿಕ್ಷಣ ಎಂಬ ಮಂತ್ರ ಇಂದು ನೆಲೆಕಚ್ಚುತ್ತಿದೆ. ಪ್ರಸಕ್ತ ತಾಂತ್ರಿಕ ಯುಗದಲ್ಲಿ ವೃತ್ತಿಪರ

ಶಿಕ್ಷಣ ಪಡೆದವರಿಗೆ ಮಾತ್ರ ಆದ್ಯತೆ ಇದೆ. ಇಲ್ಲಿ ಪ್ರೀತಿ, ನ್ಯಾಯ, ದಯೆ, ಅನುಕಂಪ, ಯಾವ ಮಾನವೀಯ ಆದರ್ಶಗಳಾಗಲಿ, ಮನುಷ್ಯ ಸಂಬಂಧಗಳಾಗಲಿ ಬೇಕಾಗಿಲ್ಲ. ಈ ಆಧುನಿಕ ಕಾಲದ ಅನೇಕ ಸಮಸ್ಯೆಗಳಿಗೆ ಪರ್ಯ್ಯಾಯ ಹುಡುಕುತ್ತಾ ಶೈಕ್ಷಣಿಕ ಸಾಧನೆಯ ಮಾರ್ಗದಲ್ಲಿ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಅನ್ನ ದಾಸೋಹ ಒಂದು ಕಣ್ಣಾದರೆ, ಜ್ಞಾನ ದಾಸೋಹ ಇನ್ನೊಂದು ಕಣ್ಣು ಅನ್ನ ದಾಸೋಹದ ಮೂಲಕ ಸಾಮಾಜಿಕವಾಗಿ ಜೀವನ ಉನ್ನತಿಕರಿಸಿದರೆ' ಶಿಕ್ಷಣ ದಾಸೋಹದ ಮೂಲಕ ಬದುಕನ್ನು ಸಾರ್ಥಕಗೊಳಿಸುವಲ್ಲಿ ಸತತ ಪ್ರಯತ್ನ ನಡೆಸುತ್ತಿದ್ದಾರೆ.

ಭಾಲ್ಕಿ ಹಿರೇಮಠದ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಅಂದಿನ ಭಾಲ್ಕಿಯಂಥ ಬೆಂಗಾಡಿನಲ್ಲಿ ಕನ್ನಡ ಭಾಷೆ ಮತ್ತು ಶಿಕ್ಷಣ ಇಲ್ಲದಿರುವ ಸಂದರ್ಭದಲ್ಲಿ ಹಿರಿಯ ಶ್ರೀಗಳು ಅಲೆಮಾರಿಯಾಗಿ ಸುತ್ತಾಡಿ ಮುಷ್ಟಿ ಫಂಡ ಮೂಲಕ 'ಶಾಂತಿ ವರ್ಧಕ ಶಿಕ್ಷಣ ಸಂಸ್ಥೆ' ಯನ್ನು ಹುಟ್ಟು ಹಾಕಿ ಈ ಭಾಗದ ಶೈಕ್ಷಣಿಕ ಕ್ರಾಂತಿಗೆ ನಾಂದಿಹಾಡಿದರು.

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಪೀಠಕ್ಕೆ ಬಂದಾಗ ಕೇವಲ ಕೈಯಲ್ಲಿ ವಚನ ಪುಸ್ತಕ ಕಂಕುಳಲ್ಲಿ ಮಠದ ಮಕ್ಕಳು ಜೋಳಿಗೆಯಲ್ಲಿ ಶ್ರೀ ಚನ್ನಬಸವ ಪಟ್ಟದ್ದೇವರ ಆಶೀರ್ವಾದ ಅಷ್ಟೇ ಇತ್ತು. ಶ್ರೀಗಳು ಅನೇಕ ನೋವು ನುಂಗುತ್ತಲೇ ಕಷ್ಟ ನಷ್ಟಗಳನ್ನು ಎದುರಿಸುತ್ತಲೇ ಮತ್ತೊಂದು ಶೈಕ್ಷಣಿಕ ನೀಲಿನಕ್ಷೆಯೊಂದು ರೂಪಿಸಿ ೧೯೯೨-೯೩ನೇ ಶೈಕ್ಷಣಿಕ ವರ್ಷದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ (ಟ್ರಸ್ಟ್) ಎಂಬ ಶಿಕ್ಷಣ ಸಂಸ್ಥೆಯನ್ನು ಭಾಲ್ಕಿ ಮಠದಲ್ಲಿಯೇ ಪ್ರಾರಂಭಿಸಿದರು.

ಶ್ರೀ ಚನ್ನಬಸವೇಶ್ವರ ಗುರುಕುಲ :

ಶ್ರೀ ಚನ್ನಬಸವೇಶ್ವರ ಗುರುಕುಲವನ್ನು ಜೂನ್-೧೫, ೧೯೯೨ ರಂದು ಹಿರೇಮಠದ ಪರಿಸರಲ್ಲಿಯೇ ಪ್ರಾರಂಭಿಸಿದರು. ಮೂವರು ಶಿಕ್ಷಕರು

ಹಾಗೂ ನಲವತ್ತು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಗುರುಕುಲವನ್ನು ನಾಲ್ಕು ವರ್ಷಗಳವರೆಗೆ ಮಠದಲ್ಲಿಯೇ ನಡೆಸಿದರು. ಅನಂತರ ಸ್ಥಳದ ಅಭಾವದಿಂದಾಗಿ ಅದನ್ನು ಹಿರೇಮಠದಿಂದ ಭಾಲ್ಕಿ ತಾಲ್ಲೂಕಿನ ಕರಡ್ಯಾಳ ಗ್ರಾಮದ ಹೊರಗೆ ೫೦ ಎಕರೆ ವಿಶಾಲವಾದ ಭೂಮಿಯಲ್ಲಿ ಮೊದಲಿಗೆ ಗುರುಮಠ ಮತ್ತು ಲಿಂಗಮಠ ಎಂಬ ಚಿಕ್ಕ ಕಟ್ಟಡಗಳು ಮಾಡಿಕೊಳ್ಳಲಾಗಿತ್ತು.

ಕಟ್ಟಡ :

ಪೂಜ್ಯ ಶ್ರೀಗಳು ಗುರುಕುಲದ ಕಟ್ಟಡವನ್ನು ತುಂಬ ವಿಶಾಲವಾಗಿ ಕಟ್ಟಿಸಿದ್ದಾರೆ. ಈ ಕಟ್ಟಡ ಅತ್ಯಂತ ಭವ್ಯವಾಗಿದೆ, ಸುಸಜ್ಜಿತವಾಗಿದೆ, ಸುಂದರವಾಗಿದೆ, ಅಚ್ಚು ಕಟ್ಟುತನದಿಂದ ಕೂಡಿದೆ. ವಸತಿ ವರ್ಗಗಳಿಗಾಗಿ ಮಾತ್ರವಲ್ಲ, ಅಡಿಗೆ, ಪ್ರಸಾದ, ಉಗ್ರಾಣ, ತರಕಾರಿ, ಆಸ್ಪತ್ರೆ, ಗ್ರಂಥಾಲಯ, ಕಾರ್ಯಾಲಯ, ಪ್ರಾರ್ಥನಾ ಮಂದಿರ, ಶೌಚಾಲಯ, ಸ್ನಾನಗೃಹ ಹೀಗೆ ಪ್ರತಿಯೊಂದು ಪ್ರತ್ಯೇಕ ಕೋಣೆಗಳನ್ನು ನಿರ್ಮಿಸಿದ್ದಾರೆ. ಒಂದೊಂದು ಕೋಣೆಯಲ್ಲಿ ೪ ಮಂಚಗಳು ಹಾಕಿ ೪ ಮಕ್ಕಳಿಗೆ ಎಲ್ಲ ಸೌಲಭ್ಯದೊಂದಿಗೆ ವಸತಿಗಾಗಿ ಅನುಕೂಲ ಮಾಡಿಕೊಟ್ಟಿದ್ದಾರೆ. ಕದಳಿ ಎಂದು ಹುಡುಗಿಯರ ವಸತಿ ಗೃಹಕ್ಕೆ ಹೆಸರು ಕೊಟ್ಟು ಒಳಗಿನ ಕೋಣೆಗಳಿಗೆ ಒಬ್ಬೊಬ್ಬ ಶರಣೆಯರ ಹೆಸರು ಅಕ್ಕಮಹಾದೇವಿ, ನೀಲಾಂಬಿಕಾ, ಮುಕ್ತಾಯಕ್ಕ, ಬೊಂತಾದೇವಿ ಹೀಗೆ ಅನೇಕರ ಹೆಸರು ಕೊಟ್ಟು ಶರಣರ ನೆನೆಸುವಂತೆ ಮಾಡಿದ್ದಾರೆ. ಅರಿವಿನಮನೆ ಎಂಬ ಹೆಸರಿನಿಂದ ಬಾಲಕರ ವಸತಿ ಗೃಹಕ್ಕೆ ಹೆಸರಿಟ್ಟಿದಾರೆ. ಗುರುಕುಲದಲ್ಲಿ ೬ ವಸತಿ ಗೃಹಗಳಿವೆ. ಅವುಗಳಿಗೆ ಪೂಜ್ಯ ಶ್ರೀಗಳು ಅಷ್ಟಾವರಣಗಳ ಹೆಸರುಗಳನ್ನು ಇಟ್ಟಿದ್ದಾರೆ. ಈ ಕೋಣೆಗಳು ಗಾಳಿ ಬೆಳಕಿನಿಂದ ಕೂಡಿದ್ದು, ವಿದ್ಯಾರ್ಥಿಗಳಿಗೆ ನೋಡಿಕೊಳ್ಳುವುದಕ್ಕಾಗಿ ನಿಷ್ಠಾವಂತ ಮೇಲ್ವಿಚಾರಕರಿದ್ದಾರೆ. ವಿದ್ಯಾರ್ಥಿಗಳು ತಡರಾತ್ರಿವರೆಗೂ ಅಭ್ಯಾಸದಲ್ಲಿ ತೊಡಗಿದ್ದರೂ ಯಾವ ತೊಂದರೆಯಾಗದಂತೆ

ನೋಡಿಕೊಳ್ಳುತ್ತಾರೆ. ಸ್ನಾನಗೃಹಗಳಲ್ಲಿ ಕೂಡ ಬಿಸಿ ನೀರಿದ್ದು, ಸ್ವಚ್ಛವಾಗಿರುವಂತೆ ನೋಡಿಕೊಳ್ಳುವ ವ್ಯವಸ್ಥೆ ಮಾಡಿದ್ದಾರೆ. ಗುರುಕುಲದ ಒಳಭಾಗದಲ್ಲಿಯೇ ಮಡಿವಾಳ ಹಾಗೂ ಕ್ಷೌರಿಕರ ವ್ಯವಸ್ಥೆಯನ್ನು ಕೂಡ ಮಾಡಿದ್ದಾರೆ.

ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಗುರುಕುಲದ ಅಡಿಗೆ ಮನೆಯನ್ನು ತುಂಬ ದೊಡ್ಡದಾಗಿ ಕಟ್ಟಿಸಿದ್ದಾರೆ. ಈ ಅಡಿಗೆ ಮನೆಗೆ ಪ್ರತ್ಯೇಕವಾದ ಉಗ್ರಾಣ ತರಕಾರಿ ಕೋಣೆ ಮತ್ತು ೧೫ ಜನ ಅಡಿಗೆ ಮಾಡುವುದಕ್ಕಾಗಿ ಇದ್ದಾರೆ. ಮತ್ತೆ ದೊಡ್ಡ ದೊಡ್ಡ ಅಡಿಗೆ ಸಾಮಗ್ರಿಗಳು ಒಂದೊಂದರಲ್ಲಿ ಏಕಕಾಲಕ್ಕೆ ೧೦೦೦ ಜನರಿಗಾಗುವಷ್ಟು ಅಡಿಗೆ ತಯಾರಿಸಿಕೊಡುವಂಥವುಗಳಾಗಿವೆ. ಪ್ರಸಾದ ನಿಲಯ ಅಡಿಗೆ ಮನೆಗೆ ಹೊಂದಿಕೊಂಡಿದೆ. ಏಕಕಾಲಕ್ಕೆ ೫೦೦ ವಿದ್ಯಾರ್ಥಿಗಳು ಕುಳಿತು ಊಟ ಮಾಡುವಷ್ಟು ವಿಶಾಲವಾಗಿದೆ. ಈ ಪ್ರಸಾದ ನಿಲಯದಲ್ಲಿ ಶುದ್ಧ ಕುಡಿಯುವ ನೀರು ಮತ್ತು ಪೌಷ್ಟಿಕ ಹಾಗೂ ಸಾತ್ವಿಕವಾದ ಆಹಾರದೊಂದಿಗೆ ಮಕ್ಕಳನ್ನು ಶಾರೀರಿಕ ಬೆಳವಣಿಗೆಗೆ ಬೇಕಾಗುವ ಅತ್ಯಂತ ದೊಡ್ಡ ಭಾಗ್ಯ ಆರೋಗ್ಯ ಭಾಗ್ಯವಾಗಿದೆ. ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಮಕ್ಕಳ ಆರೋಗ್ಯ ಕಾಪಾಡುವುದಕ್ಕಾಗಿ ಗುರುಕುಲದಲ್ಲಿಯೇ ಒಂದು ವೈದ್ಯಕೀಯ ವಿಭಾಗವನ್ನೇ ತೆರೆದಿದ್ದಾರೆ. ವೈದ್ಯಕೀಯ ವಿಭಾಗದಲ್ಲಿ ೨೪ ಗಂಟೆಗಳ ಕಾಲ ಇಬ್ಬರು ನರ್ಸಮ್ಮರು (ಶುಶ್ರೂಕಿಯರು) ಇರುತ್ತಾರೆ. ವಾರಕ್ಕೊಮ್ಮೆ ಬೇರೆ ಕಡೆಯಿಂದ ವೈದ್ಯರು ಬಂದು ಮಕ್ಕಳನ್ನು ತಪಾಸಣೆ ಮಾಡುತ್ತಾರೆ.

ಗ್ರಂಥಾಲಯ :

ಶೈಕ್ಷಣಿಕ ವಿಕಾಸಕ್ಕೆ ಮುಖ್ಯವಾಗಿ ಪೂರಕವಾಗುವುದೇ ಗ್ರಂಥಾಲಯವೂ ಹೌದು, ಏಕೆಂದರೆ ಗ್ರಂಥಗಳು ಸೃಷ್ಟಿಯ ಜ್ಞಾನವನ್ನು ಸಂಗ್ರಹಿಸುತ್ತದೆ. ಶಿಕ್ಷಕರು ಮೊದಲುಗೊಂಡು ಮಾನವರೆಲ್ಲರಿಗೂ ಗ್ರಂಥಗಳು

ಬೇಕೆ ಬೇಕು. ಅವುಗಳ ಸಹಾಯವಿಲ್ಲದೆ ಶಾಲೆ-ಕಾಲೇಜುಗಳಲ್ಲಿ ಪಾಠ ಮಾಡಲಿಕ್ಕಾಗುವುದಿಲ್ಲ. ಒಬ್ಬ ಶಿಕ್ಷಕ ಒಂದು ಪುಸ್ತಕ ಓದಿ ಅರ್ಥಮಾಡಿಕೊಂಡರೆ ಅದರಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುತ್ತದೆ. ಆ ದೃಷ್ಟಿಯಿಂದ ಗ್ರಂಥಾಲಯ ಶಿಕ್ಷಣ ಸಂಸ್ಥೆಯ ಜೀವನಾಡಿಯಿದ್ದಂತೆ. ಇಲ್ಲಿ ೧೫೦೦೦ ಕ್ಕೂ ಮೀರಿ ಗ್ರಂಥಗಳಿವೆ. ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಗುರುಕುಲದ ಮಕ್ಕಳ ಹೆಚ್ಚಿನ ಜ್ಞಾನಕ್ಕಾಗಿ ಎಲ್ಲಾ ತರಹದ ಪತ್ರಿಕೆಗಳು ಪಠ್ಯಪೂರಕವಾದವುಗಳೆಲ್ಲ ಅನೇಕ ಗ್ರಂಥಗಳು ಗ್ರಂಥಾಲಯದಲ್ಲಿ ದೊರಕುತ್ತದೆ.

ಇಲ್ಲಿ ಪ್ರಯೋಗಾಲಯ, ಕಂಪ್ಯೂಟರ್ ವಿಭಾಗ, ಚಿತ್ರಕಲೆ, ಕ್ರೀಡಾಂಗಣ, ಪ್ರಾರ್ಥನಾ ಮಂದಿರ, ಶೈಕ್ಷಣಿಕ ವಿಭಾಗ ಹೀಗೆ ಒಂದೊಂದಾಗಿ ಒಂದು ಮಾದರಿ ಶಾಲೆ ಹೇಗಿರಬೇಕೆಂಬುದಕ್ಕೆ ಶಿಕ್ಷಣ ತಜ್ಞರು ನೀಡುವ ಸಲಹೆಯಂತೆ ಎಲ್ಲ ಸೌಲಭ್ಯಗಳು ನೀಡುವುದಕ್ಕೆ ಪ್ರಯತ್ನಿಸುತ್ತಿದ್ದಾರೆ.

ಶೈಕ್ಷಣಿಕ ಸೇವೆ :

ಶೈಕ್ಷಣಿಕ ಕ್ಷೇತ್ರ ಸಹಕಾರಿಯುತ ಬದುಕಿನ ನಿರ್ಮಾಣ ಇದನ್ನು ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಸ್ವತಂತ್ರವಾದ ವಿದ್ಯಾ ಸಂಸ್ಥೆ ೧೯೬೨ ರಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಸಂಸ್ಥಾಪಿಸಿ ಆ ಮೂಲಕ ಶಿಕ್ಷಣ ಕೊಡುವುದು ಪ್ರಾರಂಭವಾಗಿರುವುದು ೪೦ ಮಕ್ಕಳಿಂದ, ಪ್ರಸ್ತುತ ಸರಿಸುಮಾರು ೧೫,೦೦೦ ವಿದ್ಯಾರ್ಥಿಗಳು ಓದುತ್ತಿದ್ದು, ೧೦೦೦ ಕ್ಕಿಂತ ಹೆಚ್ಚು ಶಿಕ್ಷಕರು ಹಾಗೂ ಸಿಬ್ಬಂದಿವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ.

ಹೀರೆಮಠ ಸಂಸ್ಥಾನ ವಿದ್ಯಾಪೀಠದ ಅಂಗಸಂಸ್ಥೆಗಳು :

೧. ಶಿಶುವಿಹಾರ ಪ್ರಾಥಮಿಕ ಶಾಲೆಗಳು	–	೧೫
೨. ಪ್ರೌಢ ಶಾಲೆಗಳು	–	೧೩
೩. ಪದವಿಪೂರ್ವ ಕಾಲೇಜು	–	೦೪
೪. ಡಿಗ್ರಿ ಕಾಲೇಜು	–	೦೧
೫. ಡಿ.ಇಡಿ. ಕಾಲೇಜು	–	೦೨
೬. ಬಿ.ಇಡಿ. ಕಾಲೇಜು	–	೦೧
೭. ಐ.ಟಿ.ಐ. ಕಾಲೇಜು	–	೦೨
೮. ಆಂಗ್ಲ ಮಾಧ್ಯಮ	–	೦೩
೯. ಸ್ವದೇಶಿ ದತ್ತು ಕೇಂದ್ರ	–	೦೧
೧೦. ಪ್ರಸಾದ ನಿಲಯಗಳು	–	೦೨
೧೧. ಗ್ರಂಥಾಲಯಗಳು	–	೦೩
೧೨. ಸಂಗೀತ ಶಾಲೆ	–	೦೨
೧೩. ಗೋಶಾಲೆ (ತುರುಗಾಹಿ ರಾಮಣ್ಣ ಗೋಶಾಲೆ)	–	೦೧

ಹೀಗೆ ಸಕಲ ಸೌಕಾರ್ಯಗಳೊಂದಿಗೆ ಅತ್ಯಂತ ಪರಿಣಾಮಕಾರಿಯಾಗಿ ಬೆಳೆಸಿಕೊಂಡು ತಮ್ಮ ಗುರುಕುಲದಲ್ಲಿ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಒಟ್ಟು ಎಂಟು ಶಾಲೆ ಕಾಲೇಜುಗಳು ನಡೆಸುತ್ತಾರೆ. ೧೫೦೦೦ ವಿದ್ಯಾರ್ಥಿಗಳುಳ್ಳ ಈ ಶಾಲಾ ಕಾಲೇಜಿನಲ್ಲಿ ವ್ಯಕ್ತಿತ್ವ ವಿಕಾಸನ, ಸಂಸ್ಕಾರಯುತ ಶಿಕ್ಷಣ, ರಾಷ್ಟ್ರಪ್ರಜ್ಞೆ, ಸಾಮಾಜಿಕ ಜವಾಬ್ದಾರಿಯನ್ನು ಮಕ್ಕಳಲ್ಲಿ ಹೆಚ್ಚಿಸುವ ಶಿಕ್ಷಣ ಪದ್ಧತಿ ಇಲ್ಲಿದ್ದು, ಕರ್ನಾಟಕದಲ್ಲೀಗ ಕರಡ್ಯಾಳ ಗುರುಕುಲವೆಂದರೆ ಎಲ್ಲರೂ ಗುರುತಿಸುವಂತಾಗಿದೆ. ಈ ಗುರುಕುಲದಿಂದ ಸಾವಿರಾರು ವಿದ್ಯಾರ್ಥಿಗಳು ದೇಶದ ಅತ್ಯುತ್ತಮ ಶಿಕ್ಷಣ ಕೇಂದ್ರಗಳಲ್ಲಿ ಉನ್ನತ ಶಿಕ್ಷಣ ಪಡೆಯುವುದಕ್ಕೆ ಆಯ್ಕೆಯಾಗುತ್ತಾ ಮುನ್ನಡೆಯುತ್ತಿದ್ದಾರೆ. ವಿದ್ಯಾಪೀಠವೆಂಬುದು ಕೇವಲ ಶೈಕ್ಷಣಿಕ ವಿಕಾಸಕ್ಕಾಗಿ ಸೀಮಿತಗೊಳಿಸದೆ

ಅದು ಪ್ರತಿ ವಿಧ್ಯಾರ್ಥಿಯ ಬೌದ್ಧಿಕ, ಮಾನಸಿಕ, ಸಂವೇದನಾತ್ಮಕ, ನೈತಿಕ, ದೈಹಿಕ, ಆಧ್ಯಾತ್ಮಕ, ವಿಕಾಸಗೊಳ್ಳಬೇಕೆಂಬ ಸದಾಶಯ ಹೊಂದಿದ ಪೂಜ್ಯರ ಕಾರ್ಯಮಹತ್ವದ್ದಾಗಿದೆ.

ಗುರುಕುಲದಲ್ಲಿ ಮೊದಲಿನವು ವಸತಿ ಶಾಲೆ, ಕಾಲೇಜುಗಳಾದರೆ ನಂತರ ಸಂಚಾಲಿತ ಶಾಲೆ ಕಾಲೇಜುಗಳಿಗೆ ವಿದ್ಯಾರ್ಥಿಗಳಾಗಿ ಹಳ್ಳಿ ಹಳ್ಳಿಗೂ ವಸತಿ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯ ಹೊರತುಪಡಿಸಿ ಎಲ್ಲಾ ಶಾಲೆ ಕಾಲೇಜುಗಳು ಕನ್ನಡ ಮಾಧ್ಯಮದಲ್ಲಿ ನಡೆಯುತ್ತವೆ ಎಂಬುದು ಹೆಮ್ಮೆ ವಿಷಯವಾಗಿದೆ.

ಪಠ್ಯಕ್ರಮ:

ಗುರುಕುಲದಲ್ಲಿ ಕನ್ನಡ ಮಾಧ್ಯಮದಲ್ಲಿ ನಡೆಯಲಿರುವ ಪ್ರಾಥಮಿಕ ಹಾಗು ಪ್ರೌಢ ಶಾಲೆಗಳಲ್ಲಿ ಕರ್ನಾಟಕ ಸರಕಾರ ನಿಯಮಿತಿ ಪಠ್ಯಕ್ರಮವನ್ನೆ ಬೋಧಿಸಲಾಗುತ್ತದೆ. ಆದರೂ ಮಕ್ಕಳ ಭಾಷಾ ಶ್ರೀಮಂತಿಕೆಯ ದೃಷ್ಟಿಯಿಂದ ಕನ್ನಡದ ಜೊತೆಗೆ ಇಂಗ್ಲೀಷ, ಹಿಂದಿ ಭಾಷೆಗಳನ್ನು ಕಲಿಸಲಾಗುತ್ತದೆ. ಹಾಗೆಯೇ ಇಲ್ಲಿ ಎಲ್ಲಾ ಜಾತಿ, ಜನಾಂಗದ ಮಕ್ಕಳಿಗೂ ಪ್ರವೇಶದ ಅವಕಾಶವಿದೆ. ಇಲ್ಲಿ ಎಲ್ಲಾ ಮಕ್ಕಳು ಒಂದೇ ಕುಟುಂಬದ ಸದಸ್ಯರಂತೆ ಸಹಜೀವನ ನಡೆಸುತ್ತಾ ಆಟ ಪಾಠ ಊಟಗಳಲ್ಲಿ ತೊಡಗಿರುತ್ತಾರೆ. ಇದನ್ನೆಲ್ಲ ಗಮನಿಸಿದರೆ ಗುರುಕುಲದಲ್ಲಿ ಬಸವಾದಿ ಶರಣರು ಪ್ರತಿಪಾದಿಸಿದ ಸಮಾನತೆ ಸಾಮರಸ್ಯತೆಯ ತತ್ವಗಳು ಕಾರ್ಯರೂಪಕ್ಕೆ ಬರುತ್ತಿವೆಯೇನೋ ಎಂದೆನಿಸುತ್ತದೆ. ಇದು ಪೂಜ್ಯ ಶ್ರೀಗಳ ಮಹತ್ವದ ಸಾಧನೆಗಳಲ್ಲಿ ಒಂದಾಗಿದೆ.

ಶೈಕ್ಷಣಿಕ ಸಾಧನೆಯ ಕಾರ್ಯಗಳು:

ಪರಿಕ್ಷೆಗಳು ಸಾಂಸ್ಕೃತಿಕ ಚಟುವಟಿಕೆಗಳು; ಎಲ್ಲಾ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಅಳೆಯುವ ಮುಖ್ಯ ಸಾಧನವೆಂದರೆ ಪರೀಕ್ಷೆ. ವಾರ್ಷಿಕ ಪರೀಕ್ಷೆಯಲ್ಲದೆ ಪ್ರತಿ ತಿಂಗಳ ಕಿರುಪರೀಕ್ಷೆ ಅರ್ಧವಾರ್ಷಿಕ ಪರೀಕ್ಷೆಯನ್ನು ಪಾಲಕರ ಗಮನಕ್ಕೆ ತರಲಾಗುತ್ತದೆ. ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಕೂಡ ವಿಶೇಷ ಮಹತ್ವವನ್ನು ಪಡೆದುಕೊಳ್ಳುತ್ತವೆ. ಗುರುಕುಲದ ಮಕ್ಕಳ ಸಾಧನೆ: ಗುರುಕುಲದ ಮಕ್ಕಳು ತುಂಬಾ ಪ್ರತಿಭಾವಂತರಾಗಿದ್ದಾರೆ.

ಮೊದಲು ಬೀದರ ಜಿಲ್ಲೆಯ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶ ತುಂಬ ಇಳಿಮುಖವಾಗಿರುತ್ತಿತ್ತು. ಆದರೆ ಈಗ ಚನ್ನಬಸವೇಶ್ವರ ಗುರುಕುಲದ ಮಕ್ಕಳಿಂದಾಗಿ ಇಡೀ ಕನ್ನಡನಾಡು ಬೀದರ ಜಿಲ್ಲೆಯ ಕಡೆಗೆ ಮುಖವೆತ್ತಿ ನೋಡುವಂತಾಗಿದೆ. ಇದು ಶ್ರೀ ಪೂಜ್ಯ ಡಾ.ಬಸವಲಿಂಗ ಪಟ್ಟದೇವರು ಗೈಯುತ್ತಿರುವ ವಿಶಿಷ್ಟವೂ, ವಿಭಿನ್ನವೂ ಆಗಿರುವ ಶಿಕ್ಷಣ ಸೇವೆಗೆ ಕನ್ನಡಿ ಹಿಡಿದಂತಿದೆ. ಇತ್ತೀಚೆಗಂತೂ ಪಿ.ಯು.ಸಿ. ವಿದ್ಯಾರ್ಥಿಗಳು ಮೆಡಿಕಲ್ ಇಂಜಿನೀಯರಿಂಗ, ಜೆ.ಇ.ಇ. ಯಲ್ಲೂ ಸಿ.ಇ.ಟಿ.ನಲ್ಲೂ ಉತ್ತಮ ರ್‍ಯಾಂಕ್ ಗಳಿಸುವುದರ ಮೂಲಕ ಗುರುಕುಲದಲ್ಲಿನ ವಿಧ್ಯಾರ್ಥಿಗಳು ಮೂಂಚೂಣಿಯಲ್ಲಿದ್ದಾರೆ.

ಗುರುಕುಲದಲ್ಲಿ ಮಕ್ಕಳ ಸಾಂಸ್ಕೃತಿಕ ಚಟುವಟಿಕೆಗಳು:

ಇಲ್ಲಿಯ ಮಕ್ಕಳು ಓದುವದರ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳ ಸ್ಪರ್ಧೆಗಳು ಏರ್ಪಡಿಸಿ ಅವುಗಳು ಗುರುಕುಲಕಷ್ಟೇ ಸೀಮಿತವಾಗಿಸದೇ ತಾಲ್ಲೂಕು, ಜಿಲ್ಲಾ ಮಟ್ಟವಲ್ಲದೇ ರಾಜ್ಯ ಮಟ್ಟದಲ್ಲಿಯೂ ಭಾಗವಹಿಸುತ್ತಾರೆ. ಗುರುಕುಲದ ಮಕ್ಕಳ ಇನ್ನೊಂದು ಅದ್ಭುತ ಪ್ರತಿಭೆಯೆಂದರೆ ರೂಪಕಗಳ ಪ್ರದರ್ಶನ. ಬಸವಾದಿ ಶರಣರ ಜೀವನ ಆದರ್ಶವನ್ನು ಚಿತ್ರಿಸುವಂತಹ

ಅನೇಕ ರೂಪಕಗಳನ್ನು ತುಂಬಾ ಚೆನ್ನಾಗಿ, ಪರಿಣಾಮಕಾರಿಯಾಗಿ ಪ್ರದರ್ಶಿಸುತ್ತಾರೆ. ಸಾಮಾಜಿಕ, ಧಾರ್ಮಿಕ ಸಮಕಾಲೀನ ರಾಜಕೀಯ ಹೀಗೆ ನಾನಾ ವಿಭಾಗದ ರೂಪಕಗಳು ಕೂಡಾ ಪ್ರತಿಭಾವಂತ ಶಿಕ್ಷಕರ ದಕ್ಷ ನಿರ್ದೇಶನದಲ್ಲಿ ಉತ್ತಮ ಕಲಾವಿದರಾಗಿ ಅರಳಿದ ಪ್ರತಿಭೆಗಳಾಗಿದ್ದಾರೆ. ಇವರು ಕರ್ನಾಟಕ ಮಾತ್ರವಲ್ಲದೇ ಆಂಧ್ರ, ಮಹಾರಾಷ್ಟ್ರ, ತೆಲಂಗಾಣ ಇನ್ನಿತರೆ ರಾಜ್ಯಗಳಲ್ಲಿಯೂ ಕೂಡ ರೂಪಕ ಪ್ರದರ್ಶನವನ್ನು ಏರ್ಪಡಿಸುತ್ತಾರೆ.

ಮಲ್ಲಕಂಬದಾಟ, ಸಾಹಿತ್ಯ ಸಾಧನೆ, ಶಿಶು ವಿಹಾರ ಮತ್ತು ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಕಿರಿಯ ಮಹಾವಿದ್ಯಾಲಯ, ಡಿ.ಇಡಿ, ಬಿ.ಇಡಿ. ಮಹಾವಿದ್ಯಾಲಯ, ಕೈಗಾರಿಕಾ ತರಬೇತಿ ಕೇಂದ್ರ, ಸಂಗೀತ ಶಾಲೆ, ಹಿರೇಮಠ ಸಂಸ್ಥಾನ ಭಾಲ್ಕಿಯಲ್ಲಿ ಅಲ್ಲಮಪ್ರಭು ವಾಚನಾಲಯ ಹೀಗೆ ಹತ್ತು ಹಲವು ಸೌಲಭ್ಯಗಳಿಂದ ಕೂಡಿದೆ. ಶಿಕ್ಷಣ ಎಂಬುದು ನಿಂತ ನೀರಲ್ಲ ಅದು ಹರಿಯುವ ಹೊಳೆ. ಎಲ್ಲಾ ಕಡೆಯಿಂದ ಜ್ಞಾನ ಹರಿದು ಬಂದಾಗ ಶಿಕ್ಷಣವೆಂಬುದು ಸಾಗರವಾಗಲು ಸಾಧ್ಯವೆಂಬ ಅರಿವಿನಿಂದ ಪೂಜ್ಯ ಶ್ರೀಗಳು ಶಿಕ್ಷಣಕ್ಕೆ ಪೂರಕವೆನಿಸುವ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಈ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಪೂಜ್ಯ ಶ್ರೀಗಳು ಬೆನ್ನೆಲುಬಾಗಿ ಪೂಜ್ಯ ಶ್ರೀ ಗುರುಬಸವ ಪಟ್ಟದೇವರು ಅತ್ಯಂತ ದಕ್ಷತೆಯಿಂದ ಎಲ್ಲಾ ಕಾರ್ಯಕಲಾಪಗಳನ್ನು ಚಾಣಾಕ್ಷತೆಯಿಂದ, ನಿಷ್ಠೆಯಿಂದ ಎಲ್ಲರ ಪ್ರೀತಿಗೆ ಪಾತ್ರರಾಗಿ ಪೂಜ್ಯ ಶ್ರೀ ಗುರುಬಸವ ಪಟ್ಟದೇವರು ಪರಮ ಗುರುವಿಗೆ ಹೂ ತರುವೆನು ಎಂದ ಹಾಗೆ ಕಾರ್ಯನಿರ್ವಹಿಸುತ್ತಿದ್ದಾರೆ.ಹೀಗೆ ಶಿಕ್ಷಣದ ಬದುಕನ್ನು ಎತ್ತರಕ್ಕೇರಿಸಿ ಅಕ್ಷರದ ದೀವಿಗೆಯಲ್ಲಿ ಅರಿವಿನ ಜ್ಯೋತಿ ಬೆಳಗಿಸುವ ತವಕದಲ್ಲಿದ್ದಾರೆ.

ಶ್ರೀಗಳ ಸಾಹಿತ್ಯ ಕೃಷಿ :

ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಸಾಹಿತ್ಯಕ್ಕಾಗಿ ಅಭೂತಪೂರ್ವ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಸೃಜನಶೀಲ ಸಾಹಿತಿಗಳಾಗಿ ಅನೇಕ ಕೃತಿಗಳ ಸಂಪಾದಕರಾಗಿ, ಸಂಯೋಜಕರಾಗಿ, ಪ್ರಕಾಶಕರಾಗಿ, ಪೋಷಕರಾಗಿ ಹೀಗೆ ವಿವಿಧ ಆಯಾಮಗಳಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಮೋಘ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಈ ಸೇವೆ ಕರ್ನಾಟಕ ಮಾತ್ರವಲ್ಲದೆ ನೆರೆ ಹೊರೆಯ ರಾಜ್ಯಗಳಲ್ಲಿಯೂ ಹರಡಿದೆ.

ಪೂಜ್ಯ ಶ್ರೀಗಳು ಅಪ್ಪಟ ಶರಣ ಸಾಹಿತಿಗಳಾಗಿದ್ದಾರೆ. ಇವರು ವಿದ್ಯಾರ್ಥಿಗಳಾಗಿದ್ದಾಗಲೇ ಓದುವ ಆಸಕ್ತಿ ಹೊಂದಿದವರಾಗಿದ್ದರು. ಇವರು ಮಠಾಧೀಶರಾಗುವ ಪೂರ್ವದಲ್ಲಿಯೇ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರು. ಬಹುತೇಕ ಸಾಹಿತ್ಯಿಕ ಕವನಗಳು ಬರೆಯುವ ಮೂಲಕ ಸಾಹಿತ್ಯ ಲೋಕಕ್ಕೆ ಪ್ರವೇಶಿಸಿದ್ದಾರೆ. ಹಾಗೆಯೇ ಪೂಜ್ಯ ಶ್ರೀಗಳು ಮೊದಲಿಗೆ ಕವನವನ್ನು ಬರೆಯುತ್ತಿದ್ದರು. ಹಾನಗಲ್ ಕುಮಾರೇಶ್ವರ ಉಚಿತ ಪ್ರಸಾದ ನಿಲಯದ ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ಅನೇಕ ಕವಿತೆಗಳು ರಚಿಸಿದ್ದಾರೆ. ಅವುಗಳಲ್ಲಿ ಭಾಲ್ಕಿ ಚನ್ನಬಸವಣ್ಣ, ಗುರುಪಾದಪೂಜೆ, ಶಿವಯೋಗಿ ಸಿದ್ದರಾಮ ಎಂಬ ಕವಿತೆಗಳು ಚೆಂಬೆಳಕು ಎಂಬ ಕವನ ಸಂಕಲನದಲ್ಲಿ ಪ್ರಕಟವಾಗಿವೆ. ಶರಣರ ದಾರಿಯಲ್ಲಿ ಚನ್ನಬಸವ ಪಟ್ಟದೇವರು ಎಂಬ ಲೇಖನವನ್ನು ಅವರು ಬರೆಯುತ್ತಲೆ ಗದ್ಯ ಸಾಹಿತ್ಯ ರಚನೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಮಠಾಧೀಶರಾದ ಮೇಲೆ ಶ್ರೀ ಬಸವಲಿಂಗ ಪಟ್ಟದೇವರ ಸಾಹಿತ್ಯ ಕೃಷಿ ನಿರಂತರವಾಗಿ ಸಾಗಿದೆ. ಇದುವರೆಗೂ ಅವರು ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ.

ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ರಚಿಸಿದ ಕೃತಿಗಳು:

ಇಷ್ಟಲಿಂಗ ಪೂಜಾ ವಿಧಾನ, ಬಸವಜ್ಯೋತಿ (ವಚನಗಳ ಸಂಗ್ರಹ), ಶಿವಶರಣೆಯರ ವಚನಗಳನ್ನೊಳಗೊಂಡ ಕನ್ನಡ ಕೃತಿಗಳು ೨೪, ೨೫ನೇ ಕೃತಿ ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲಾ, ೨೦೧೭ ರ ವರೆಗೆ ಪ್ರಕಟಗೊಂಡ ಕೃತಿಗಳು. ಇನ್ನೂ ಹಿಂದಿಯಲ್ಲಿ ಒಂದು ಕೃತಿ ಅನುವಾದಗೊಂಡಿದೆ. ಮತ್ತು ಮರಾಠಿಯಲ್ಲಿ ಪೂಜ್ಯ ಶ್ರೀಗಳ ೧೭ ಕೃತಿಗಳು ಅನುವಾದಗೊಂಡಿವೆ. ಹಾಗು ತೆಲಗುನಲ್ಲಿ ೬ ಕೃತಿಗಳು ಅನುವಾದಗೊಂಡಿವೆ ಹೀಗೆ ಪೂಜ್ಯ ಶ್ರೀಗಳ ಈ ಕೃತಿಗಳು ವೈಚಾರಿಕತೆ ಹಾಗೂ ವೈಜ್ಞಾನಿಕತೆಯ ತಳಹದಿಯ ಮೇಲೆ ರಚನೆಯಾಗಿದೆ. ಶ್ರೀಗಳ ಬಸವ ನೈವೇದ್ಯ ಶರಣರ ವಿಚಾರ ಸರಣಿಯನ್ನು ಹಿಡಿದು ಬರೆದ ಚಿಂತನಪರ ಕೃತಿಯಾಗಿದೆ. ಈ ಕೃತಿಯು ಹದಿಮೂರು ಪ್ರಬಂಧಗಳಿಂದ ಕೂಡಿದೆ. ಅರ್ಚನೆ ಅರ್ಪಣೆ ಅನುಷ್ಠಾನ, ಶರಣರು, ಶರಣಧರ್ಮ ಹಾಗೂ ಶರಣರ ಪ್ರಗತಿಪರ ವಚನಗಳು ಹೀಗೆ ಸರಳವಾದ ಶೈಲಿಯಲ್ಲಿ ಬರೆದ ಕೃತಿ ಎಲ್ಲರ ಮನಮುಟ್ಟುವಂತಿದೆ.

ಶರಣ ಸಾಹಿತ್ಯ ಪ್ರಕಾಶನ :

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದೇವರು ಸಾಹಿತಿಯಾಗಿ, ಸಂಪಾದಕರಾಗಿ ಹಲವಾರು ಶರಣರ ವಚನಗಳ ಕೃತಿಗಳು ಸಂಪಾದಿಸಿದ್ದಾರೆ. ಪ್ರಕಾಶಕರಾಗಿ ನಾಡಿನ ಅನೇಕ ಪ್ರಸಿದ್ಧ ಲೇಖಕರ ಕೃತಿಗಳನ್ನು ಪ್ರಕಟಿಸಿದ್ದಾರೆ. ಅಪಾರ ಸಾಹಿತಿಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದಾರೆ. ಸಾಹಿತ್ಯ ಕೃತಿಗಳ ಪ್ರಕಟಣೆಗಾಗಿಯೇ ಅವರು ಮಠದಲ್ಲಿ ಪ್ರತ್ಯೇಕವಾಗಿ ಪ್ರಕಾಶನಗಳನ್ನು ತೆರೆದಿದ್ದಾರೆ. ಇವರು ಮಠದ ಆಶ್ರಯದಲ್ಲಿ ಒಟ್ಟು ಐದು ಪ್ರಕಾಶನಗಳನ್ನು ನಡೆಸುತ್ತಿದ್ದಾರೆ.

೧) ಬಸವಧರ್ಮ ಪ್ರಸಾರ ಸಂಸ್ಥೆ
೨) ಚನ್ನಬಸವ ಪಟ್ಟದ್ದೇವರು ಪ್ರತಿಷ್ಠಾನ
೩) ಮಹಾರಾಷ್ಟ್ರ ಬಸವ ಪರಿಷತ್ತು
೪) ತೆಲಂಗಾಣ ಬಸವ ಪರಿಷತ್ತು
೫) ಬಸವ ಭಾರತಿ ಹಿಂದಿ ಪ್ರತಿಷ್ಠಾನ ಎಂಬ ಪ್ರಸಾರ ಸಂಸ್ಥೆಯನ್ನು ನಡೆಸುತ್ತಾ ಬಂದಿದ್ದಾರೆ.

ಮರಾಠಿ ಕೃತಿಗಳು :

ಬಸವಾದಿ ಶರಣರ ದಿವ್ಯ ತತ್ವಗಳನ್ನು ಮರಾಠಿ ಭಾಷಿಕರಿಗೆ ಒದಗಿಸಿಕೊಡುವ ಸದುದ್ದೇಶದಿಂದ ಮಹಾರಾಷ್ಟ್ರ ಬಸವ ಪರಿಷತ್ತು ಸ್ಥಾಪಿಸಿ ಅದರ ಮೂಲಕ ಪೂಜ್ಯ ಶ್ರೀಗಳು ಈವರೆಗೆ ೧೫೫ ಮರಾಠಿ ಕೃತಿಗಳನ್ನು ಪ್ರಕಟಿಸಿದ್ದಾರೆ.

ತೆಲುಗು ಕೃತಿಗಳು :

ಮರಾಠಿ ಭಾಷಿಕರಂತೆ ತೆಲುಗು ಭಾಷಿಕರಿಗೂ ಬಸವಾದಿ ಶರಣರ ಸಂದೇಶಗಳನ್ನು ತಲುಪಿಸಬೇಕೆಂದು ತೆಲಂಗಾಣ ಬಸವ ಪರಿಷತ್ತು ಸ್ಥಾಪಿಸಿ ಅದರ ಮೂಲಕ ಪೂಜ್ಯ ಶ್ರೀಗಳು ೨೩ ಕೃತಿಗಳನ್ನು ತೆಲುಗಿನಲ್ಲಿ ಪ್ರಕಟಣೆಗೊಳಿಸಿದ್ದಾರೆ.

ಬಸವ ಭಾರತಿ ಹಿಂದಿ ಪ್ರತಿಷ್ಠಾನದ ಅಡಿಯಲ್ಲಿಯೂ ಹತ್ತು ಅನುವಾದ ಕೃತಿ ಪ್ರಕಟಗೊಂಡಿವೆ.

ಸಾಂಸ್ಕೃತಿಕ ಕ್ಷೇತ್ರದಲ್ಲಿ ಶ್ರೀಗಳು :

ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ ಕ್ಷೇತ್ರಗಳಂತೆ ಪೂಜ್ಯರು ಸಾಂಸ್ಕೃತಿಕ ಕ್ಷೇತ್ರದಲ್ಲೂ ಅಮೋಘ ಸೇವೆ ಸಲ್ಲಿಸಿದ್ದಾರೆ. ಸಂಗೀತ, ನಾಟಕ,

ಭಜನೆ, ಕ್ರೀಡೆಯಂಥ ಈ ನೆಲದ ಕಲೆ, ಕ್ರೀಡೆಗಳನ್ನು ಘೋಷಿಸಿದ್ದಾರೆ. ಸಂಗೀತಕ್ಕಾಗಿ ಪೂಜ್ಯ ಶ್ರೀಗಳು ಸಂಗೀತ ಕ್ಷೇತ್ರಕ್ಕಾಗಿಯೂ ಒಂದು ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ. ಖ್ಯಾತ ವಚನ ಸಂಗೀತಗಾರರಾಗಿದ್ದ ಪಂಡಿತ ಸಿದ್ದರಾಮ ಜಂಬಲದಿನ್ನಿ ಅವರ ಹೆಸರಲ್ಲಿ ಅನೇಕ ಪ್ರಖ್ಯಾತ ಸಂಗೀತ ಕಲಾವಿದರಿಗೆ ಪ್ರೋತ್ಸಾಹಿಸುತ್ತಾ ಇದನ್ನು ಪ್ರತಿ ವರ್ಷ ನೀಡುತ್ತಾರೆ.

ನಾಟಕ :

ಸಮಾಜದಲ್ಲಿ ಜನರಿಗೆ ಉಪನ್ಯಾಸ ಪ್ರವಚನಗಿಂತಲೂ ತುಂಬ ಪರಿಣಾಮಕಾರಿಯಾಗಿರುವುದು ದೃಶ್ಯ ಮಾಧ್ಯಮ. ಅದರಲ್ಲೂ ಶರಣರ ಪರ ನಾಟಕಗಳು ಅತ್ಯಂತ ಮಹತ್ವದ ಪಾತ್ರವಹಿಸುತ್ತವೆ. ಅದಕ್ಕಾಗಿ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಪ್ರಸಿದ್ಧ ನಾಟಕ ತಂಡಗಳಿಂದ ಶರಣ ಸಂಸ್ಕೃತಿಯನ್ನು ಪ್ರತಿ ಬಿಂಬಿಸುವಂಥ ಉತ್ತಮ ನಾಟಕಗಳ ಪ್ರದರ್ಶನ ಏರ್ಪಡಿಸುತ್ತಾರೆ. ತಮ್ಮ ಗುರುಕುಲದ ಮಕ್ಕಳು ಶಿಕ್ಷಕ ವೃಂದದವರು ಕೂಡ ಶರಣರ ಜೀವನ ಸಂದೇಶಗಳು ಸರ್ವರಿಗೂ ತಲುಪಿಲಿ ಎಂಬ ಉದ್ದೇಶ ಹೊತ್ತು ಪೂಜ್ಯ ಶ್ರೀಗಳು ಅನೇಕ ರೂಪಕಗಳೂ ನಾಟಕಗಳು ಸಂಯೋಜಿಸಿ ಅನೇಕ ಕಡೆ ಪ್ರದರ್ಶಿಸುತ್ತಿದ್ದಾರೆ.

ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಿಗೆ ಪ್ರೋತ್ಸಾಹ ನೀಡುತ್ತಾ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವದಂಥ ವಿಶೇಷ ದಿನಗಳಲ್ಲಿ ಅವರು ಕನ್ನಡ ನಾಡಿನ ಶಾಲಾ-ಕಾಲೇಜುಗಳ ಮಕ್ಕಳಿಗಾಗಿ ಸಾಂಸ್ಕೃತಿಕ ಚಟುವಟಿಕೆ ಮತ್ತು ಕ್ರೀಡೆಗಳ ಸ್ಪರ್ಧೆಗಳನ್ನು ಏರ್ಪಡಿಸುತ್ತಾರೆ. ವಚನಗಾಯನ, ವಚನ ಕಂಠಪಾಠ, ವಚನ ಭಾಷಣ, ನಿಬಂಧ, ರಂಗೋಲಿ, ಚಿತ್ರಕಲೆ, ರಸಪ್ರಶ್ನೆ, ರೂಪಕ, ನಾಟಕದಂಥ ಸಾಂಸ್ಕೃತಿಕ ವಿಷಯಗಳಲ್ಲಿ ಪುಟ್-ಬಾಲ್, ವಾಲಿಬಾಲ್, ಎತ್ತರ ಜಿಗಿತ, ಖೋ-

ಖೋ, ಓಟ, ಮೊದಲಾದ ಕ್ರೀಡೆಗಳಲ್ಲಿ ಈ ಸ್ಪರ್ಧೆಗಳು ನಡೆಯುತ್ತವೆ. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ನೀಡಿ ಪ್ರೋತ್ಸಾಹಿಸುತ್ತಾರೆ.

ಸಂಘ ಸಂಸ್ಥೆಗಳು

ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ನಾಡಿನ ಸರ್ವಾಂಗೀಣ ಪ್ರಗತಿಗಾಗಿ ಅನೇಕ ಸಂಘ ಸಂಸ್ಥೆಗಳನ್ನು ಹುಟ್ಟು ಹಾಕಿ ಅವುಗಳನ್ನು ಚೆನ್ನಾಗಿ ಬೆಳೆಸಿಕೊಂಡು ಮುನ್ನಡೆಸಿದ್ದಾರೆ. ಈಗ ಇಂಥ ೧೮ ಸಂಘ ಸಂಸ್ಥೆಗಳು ಆದರ್ಶ ತತ್ವಗಳ ನೆಲೆಯಲ್ಲಿ ಶ್ರಮಿಸುತ್ತಿವೆ.

ಅಧಿಕಾರ ನಿರ್ಮೋಹ : ಉತ್ತರಾಧಿಕಾರತ್ವ ನೇಮಕ

ಪೂಜ್ಯಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಅಧಿಕಾರ ನಿರ್ಮೋಹಿಗಳಾಗಿದ್ದಾರೆ. ಅಂತಯೇ ತಮ್ಮೊಂದಿಗೆ ತಮ್ಮ ಹೆಜ್ಜೆಯಲ್ಲಿ ಹೆಜ್ಜೆಯನ್ನಿರಿಸಿ ತಮ್ಮ ನೆರಳಂತೆ ಸಾಗಿಬಂದಿರುವ ಶ್ರೀ ಗುರುಬಸವ ದೇವರಲ್ಲಿ ಭಾವಿ ಪಟ್ಟದ್ದೇವರನ್ನು ಕಂಡವರು. ದೂರದೃಷ್ಟಿಯುಳ್ಳ ಶ್ರೀಗಳು ತಮ್ಮ ಪಟ್ಟಧಿಕಾರ ವಹಿಸಿಕೊಂಡ ಇಪ್ಪತ್ತೈದು ವರ್ಷಗಳ ಕಾಲ ವಿಧಾಯಕ ಸೇವೆ ಸಲ್ಲಿಸಿ ಶ್ರೀಮಠಕ್ಕೆ ಹೊಸ ಶಕ್ತಿ ನೀಡಲೆಂದು ಶ್ರೀ ಗುರುಬಸವ ದೇವರಿಗೆ ದಿನಾಂಕ ೨೨-೧೨-೨೦೧೧ರಂದೇ ಉತ್ತರಾಧಿಕಾರಿಯಾಗಿ ನೇಮಿಸಿ ಶ್ರೀಮಠದ ಸದ್ಭಕ್ತರ ಸದಿಚ್ಛೆಯಂತೆ ದಿನಾಂಕ ೨೨-೦೪-೨೦೧೬ರಂದು ಭಾಲ್ಕಿ ಹಿರೇಮಠ ಸಂಸ್ಥಾನಕ್ಕೆ ಪೂಜ್ಯಶ್ರೀ ಗುರುಬಸವ ದೇವರ ಸ್ಥಿರ-ಚರ ಪಟ್ಟಾಧಿಕಾರ ಸಮಾರಂಭವನ್ನು ನೆರವೇರಿಸಿ ಸಮರ್ಥ ಉತ್ತರಾಧಿಕಾರಿಯನ್ನು ತಂದವರು. ಪೂಜ್ಯಶ್ರೀ ಗುರುಬಸವ ಪಟ್ಟದ್ದೇವರು ಹಿರಿಯ ಶ್ರೀಗಳ ಸದಾಶಯದಂತೆ ಭಾಲ್ಕಿ ಹಿರೇಮಠ ಸಂಸ್ಥಾನವನ್ನು ಯಾವುದೇ ಚ್ಯುತಿಬರದಂತೆ ಅರ್ಥಪೂರ್ಣವಾಗಿ ನಡೆಸಿಕೊಂಡು ಬರುತ್ತಿದ್ದಾರೆ.

ಸಮಕಾಲಿನರ ಅಭಿಪ್ರಾಯಗಳು

ಡಾ. ಬಸವಲಿಂಗ ಪಟ್ಟದ್ದೇವರು ಸರಳ ಸಜ್ಜನಿಕೆಗೆ ಸಾಕಾರಮೂರ್ತಿ, ಗುರುಭಕ್ತಿಯಲ್ಲಿ ಅದ್ವಿತೀಯರು. ಡಾ. ಚನ್ನಬಸವ ಪಟ್ಟದ್ದೇವರ ಹೆಸರಿನಲ್ಲಿ 'ಚನ್ನಬಸವೇಶ್ವರ ಗುರುಕುಲ ವಸತಿ ಶಾಲೆ' ತೆಗೆದು ಗುಣಾತ್ಮಕ ಶಿಕ್ಷಣ ನೀಡುತ್ತಿದ್ದಾರೆ. ಸಿ.ಇ.ಟಿ., ಐಐಟಿ, ನೀಟ್, ವೈದ್ಯಕೀಯ ಪ್ರವೇಶ ಪರೀಕ್ಷೆಯಲ್ಲಿ ಗುರುಕುಲದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಾಸಾಗಿ ರಾಜ್ಯಕ್ಕೆ ಮಾದರಿಯಾಗಿದ್ದು ಎಲ್ಲರೂ ಗುರುಕುಲದ ಕಡೆ ಹೊರಳಿ ನೋಡುವಂತೆ ಮಾಡಿದ್ದು ಇವರ ಬಹುದೊಡ್ಡ ಸಾಧನೆಯಾಗಿದೆ. ಅನಾಥ ಮಕ್ಕಳ ಪಾಲಿನ ದೇವರಾಗಿದ್ದಾರೆ. ಮೇಲಾಗಿ ತಮ್ಮ ಹುಟ್ಟು ಹಬ್ಬವನ್ನು ಅನಾಥ ಮಕ್ಕಳ ಹುಟ್ಟು ಹಬ್ಬವಾಗಿ ಆಚರಿಸಿಕೊಂಡು ತಾಯಿ ವಾತ್ಸಲ್ಯಕ್ಕೆ ಮಾದರಿಯಾಗಿದ್ದಾರೆ. ಡಾ. ಬಸವಲಿಂಗ ಪಟ್ಟದ್ದೇವರ ಸಾಧನೆಯನ್ನು ಪರಿಗಣಿಸಿ ಇತ್ತೀಚೆಗೆ ತುಮಕೂರಿನ ಸಿದ್ದಗಂಗಾ ಶ್ರೀಗಳ ಹೆಸರಲ್ಲಿ ಕೊಡಮಾಡುವ ಪ್ರಶಸ್ತಿಯು ಇವರಿಗೆ ಬಂದುದ್ದು ಇವರ ಸಾಧನೆಯ ಸೇವೆಗೆ ಕಳಸ ಇಟ್ಟಂತಿದೆ. ಬಸವಧರ್ಮ ಪ್ರಸಾರ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಗಾಗಿ ನಡೆದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು ಇತರ ಮಠಾಧೀಶರಿಗೆ ಮಾದರಿಯಾಗಿದ್ದು ನಮ್ಮೆಲ್ಲರ ಹೆಮ್ಮೆಯ ವಿಷಯವಾಗಿದೆ.

ಡಾ. ಸೋಮನಾಥ ನುಚ್ಚಾ, ಭಾಲ್ಕಿ

ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ನಿಜ ಜಂಗಮ ಮೂರ್ತಿ, ಅಪರೂಪದ ಕನ್ನಡ ಜಂಗಮ, ಸಾಮಾನ್ಯರ ಸ್ವಾಮಿಜಿ, ಅವರ ಕರ್ತೃತ್ವ ಶಕ್ತಿ ಅನುಪಮ. ಬಸವನಿಷ್ಠೆ, ಶಿಕ್ಷಣ ಕ್ಷೇತ್ರದಲ್ಲಿ ನಾಡಿನ

ಜನತೆ ಬೀದರ ಕಡೆ ಮುಖ ಮಾಡುವಂತೆ ಮಾಡಿದ ಪೂಜ್ಯ ಶ್ರೀಗಳು ಬಡವರು, ಅಶಕ್ತರು, ನಿರಾಶ್ರಿತರಿಗೆ ನಿಧಿಯಂತೆ ಇರುವ ಸಮಾಜ ಪ್ರೇಮಿ. ಅವರ ಧರ್ಮ ನಿಷ್ಠೆ, ನಿರಂತರ ಶರಣ ತತ್ವ ಪ್ರಸಾರದಲ್ಲಿ ತೊಡಗಿಸಿಕೊಂಡು ಅನೇಕ ಕೃತಿಗಳ ರಚನೆ ಮತ್ತು ಪ್ರಕಟಣೆ ಕಾರ್ಯಕೈಗೊಂಡ ಸಾಹಿತ್ಯಸೇವೆ ಗಮನಾರ್ಹವಾದುದ್ದು. ಬೀದರ ಜಿಲ್ಲೆಯಲ್ಲಿ ಅಷ್ಟೇ ಅಲ್ಲ ಕನ್ನಡ ನಾಡಿನ ತುಂಬಾ ಹೆಸರುವಾಸಿಯಾದ ಅನಾಥ ಮಕ್ಕಳ ರಕ್ಷಕರು. ಅವರ ಎಲ್ಲಾ ಕಾರ್ಯಗಳು ಮಹಾಕಾರ್ಯಗಳಾಗಿವೆ.

ಡಾ. ಸೋಮನಾಥ ಯಾಳವಾರ, ಹುಮನಾಬಾದ.

ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ನಾವು ೧೯೬೨ ರಿಂದ ಒಂದೇ ಕಡೆ, ಒಂದೇ ತರಗತಿಯಲ್ಲಿ ಓದುತ್ತಾ ಬೆಳೆದವರು, ಅವರು ಮೊದಲಿನಿಂದಲೂ ತುಂಬಾ ಮೃದು ಸ್ವಭಾವದವರು ಮತ್ತು ಪ್ರಯತ್ನಶೀಲರು. ನಾವಾದರೋ ಮೈಗಳ್ಳರು ನಮ್ಮಪ್ಪ ರಾಚಪ್ಪ ಮುದ್ದಾರವರು ನಮ್ಮಿಬ್ಬರನ್ನು ಒಟ್ಟಿಗೆ ಮಠಕ್ಕೆ ಸೇರಿಸಿದವರು. ನಾನು ಓದದೇ ಫೇಲಾಗಿ ಹಿಂದಿರುಗಿ ಔರಾದಕ್ಕೆ ಬಂದೆ. ಅವರು ಮಠದಲ್ಲಿಯೇ ಉಳಿದುಕೊಂಡರು. ಮೈಗಳ್ಳರ ಜೀವನ ಅರ್ಥವಿಲ್ಲದ ಜೀವನ. ಎಷ್ಟೇ ಕಷ್ಟ ಬಂದರೂ ಹೆದರದೇ ಹಿಮ್ಮೆಟ್ಟದೇ ಪ್ರಯತ್ನ ಮಾಡುತ್ತ ಮುನ್ನಡೆದವರು ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು. ಅವರದು ಸಾರ್ಥಕ ಜೀವನ ಮಾನವೀಯ ಮೌಲ್ಯವನ್ನೊಳಗೊಂಡ ಬದುಕು. ಮುಂದಿನ ಜನಾಂಗಕ್ಕೆ ಮಾರ್ಗದರ್ಶನವಾಗುವ ಪೂಜ್ಯ ಶ್ರೀಗಳ ಕಾರ್ಯಸಾಧನೆ ಕಂಡು ನನಗೆ ತುಂಬಾ ಖುಷಿಯಾಗುತ್ತದೆ. ಅವರ ಕಾರ್ಯ ಇನ್ನೂ ಎತ್ತರಕ್ಕೆ ಸಾಗಲೆಂದು ಆ ದೇವರಲ್ಲಿ ಬೇಡಿಕೊಳ್ಳುತ್ತೇನೆ.

– ಕಲ್ಲಪ್ಪಾ ಮುದ್ದಾ ಔರಾದ(ಬಿ)

ಪೂಜ್ಯ ಡಾ. ಬಸವಲಿಂಗ ಪಟ್ಟದ್ದೇವರು ಮತ್ತು ನಾನು ಪಿ.ಯು.ಸಿ. ಯಲ್ಲಿ ಒಂದೇ ತರಗತಿಯಲ್ಲಿ ಓದಿದವರು. ನಾನು ತಂದೆ-ತಾಯಿ ಇಲ್ಲದೇ

ತಬ್ಬಲಿತನದಿಂದ ಬಳಲುತ್ತಿದ್ದೆ. ಅದಕ್ಕಾಗಿ ನಾನು ಯಾವಾಗಲೂ ಶ್ರೀಗಳ ಜೊತೆಯಲ್ಲಿಯೇ ಇರುತ್ತಿದ್ದೆ. ಅವರು ದೈಹಿಕವಾಗಿ ಬಲಹೀನರಾಗಿದ್ದರೂ ಕೂಡ ಮಾನಸಿಕವಾಗಿ ಅತ್ಯಂತ ಸಧೃಢವಾಗಿದ್ದರು. ಮೊದಲಿನಿಂದಲೂ ಅವರ ಒಲವು ಪಾರಮಾರ್ಥದ ಕಡೆ ಇತ್ತು. ಮೈ-ಮನ ಬಸವಮಯವಾಗಿತ್ತು. ಸದಾ ಗುರುಗಳ ಹತ್ತಿರವಿದ್ದು ಶಾಂತಿವರ್ಧಕ ಸಂಸ್ಥೆ ನಡೆಸಿಕೊಂಡು ಹೋಗಬೇಕೆಂಬ ಅಪಾರ ಆಸಕ್ತಿ ಇತ್ತು. ಆದರೇನು ಮಾಡುವುದು ಜಯಶ್ರೀಯವರೇ ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರ ಬಲವಾದ ದೈವಿಶಕ್ತಿಯಿಂದಲೇ ನೋಡಿ ಇವತ್ತು ಇನ್ನೊಂದು ಬೃಹತ್ತಾದ ಶಿಕ್ಷಣ ಸಂಸ್ಥೆ ಸ್ಥಾಪಿಸಿದ್ದಾರಲ್ಲ, ನಾಲ್ಕು ದಶಕದಿಂದ ಪಟ್ಟ ಶ್ರಮ ಮತ್ತು ಸಾಧನೆಯ ಬಗ್ಗೆ ಏನು ಹೇಳಿದರೂ ಕಡಿಮೆಯೆ. ಗುರುಬಸವಣ್ಣನವರು ಇನ್ನೂ ಹೆಚ್ಚಿನ ಶಕ್ತಿ ಕೊಡಲೆಂದು ಪ್ರಾರ್ಥಿಸುತ್ತೇನೆ.

ಶ್ರೀ ವೈಜಿನಾಥ ಬಿರಾದರ, ನವದೆಹಲಿ

'ಮೃದು ವಚನವೇ ಸಕಲ ಜಪಂಗಳಯ್ಯಾ !
ಮೃದು ವಚನವೇ ಸಕಲ ತಪಂಗಳಯ್ಯಾ !
ಸದು ವಿನಯವೇ ಸದಾಶಿವನೊಲುಮಯೆಯ್ಯಾ

ಎಂಬ ಬಸವಣ್ಣನವರ ವಾಣಿಯಂತೆ ಡಾ.ಶ್ರೀ ಬಸವಲಿಂಗ ಪಟ್ಟದ್ದೇವರು ಶರಣ ಸಂಸ್ಕೃತಿಯ ಸಂಪನ್ನತೆಯ ಸಾಕಾರ ಮೂರ್ತಿಯಾಗಿದ್ದಾರೆ. ಬೀದರ ಜಿಲ್ಲೆಯಲ್ಲಿ ಶೈಕ್ಷಣಿಕ ಕ್ರಾಂತಿಯನ್ನೇ ಮಾಡಿದ್ದಾರೆ. ಅವರು ಮಕ್ಕಳಿಗೆ ಕೇವಲ ಗುಣಮಟ್ಟದ ಶಿಕ್ಷಣ ಕೊಡಿಸುವುದಲ್ಲದೇ ಸಂಸ್ಕಾರವನ್ನು ಕೂಡ ಕೊಡುತ್ತಿದ್ದಾರೆ. ಈ ಗುರುಕುಲದಲ್ಲಿ ಮಕ್ಕಳಿಗೆ ಯೋಗ, ವ್ಯಾಯಾಮ, ಆಟಗಳು ಎಲ್ಲವುಗಳಿಗೆ ಆದ್ಯತೆ ನೀಡಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗದ್ದು, ಬದುಕಲು ಕಲಿಸುವ ಒಂದು ಗುರುಕುಲವಾಗಿದೆ. ಜಾತಿ ಭೇದವಿಲ್ಲದ ಆಶ್ರಮವಾಗಿದೆ. ಒಂದು ವೇಳೆ ಮಠಗಳು ಗುರುಕುಲಗಳು,

ಆಶ್ರಮಗಳು ಇಲ್ಲದಿದ್ದರೆ ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ಪಡೆಯಲು ಕಷ್ಟವಾಗುತ್ತಿತ್ತು.

ಇವರು ಭಯ, ಭಕ್ತಿ, ದಯೆ, ಧರ್ಮ ಪರೋಪಕಾರಿಗಳೆಂಬ ಪಂಚತತ್ವಗಳ ಆಗರವಾಗಿದ್ದಾರೆ. ಇವರು ಮನದೆರೆದು ನುಡಿಯುವುದರಿಂದ ಅವು ಬರಿ ಮಾತುಗಳಾಗಿರದೇ ಲಿಂಗ ನುಡಿಗಳಾಗಿವೆ. ಸಮಸ್ಯೆಗಳನ್ನು ಹೊತ್ತು ಬಂದ ಮಹಿಳೆಯರ ಮನದ ಕತ್ತಲೆಯನ್ನ ದೂರು ಸರಿಸಿ, ಬೆಳಕು ತೋರಿಸಿದವರಾಗಿದ್ದಾರೆ. ಕೇವಲ ಉಪದೇಶ, ಪ್ರವಚನ ಮಾಡುವ ಶರಣರಲ್ಲದೇ ಸಾಹಿತಿಯು ಕೂಡ ಆಗಿದ್ದಾರೆ. ಮಾನವೀಯ ಸ್ಪಂದನೆಯುಳ್ಳ ಇವರು ಬರೆದಂತೆ ಬದುಕಿದವರು, ನುಡಿದಂತೆ ನಡೆದವರು, ಮಿತ ಭಾಷಿಗಳು, ನಿರಾಡಂಬರ ಜೀವಿಗಳು ಆಗಿದ್ದಾರೆ. ಕನ್ನಡಕ್ಕಾಗಿ ಹೋರಾಡಿದ ಚೆನ್ನಬಸವ ಪಟ್ಟದ್ದೇವರ ಅಪ್ಪಟ ಕೂಸಾಗಿ ಕನ್ನಡವನ್ನು ಬೆಳಗುತ್ತಿದ್ದಾರೆ.

ಸಮಾಜದಲ್ಲಿ ಮೂಢನಂಬಿಕೆಗಳನ್ನು ಹೊಡೆದೋಡಿಸಲು ಪ್ರಯತ್ನಿಸುತ್ತಿದ್ದಾರೆ. ಹಗಲಿರುಳು ಎಲ್ಲಾ ಹಳ್ಳಿಗಳಲ್ಲಿ ಪಾದಯಾತ್ರೆ ಮಾಡಿ ಜನರ ಮನಸ್ಸನ್ನು ಒಟ್ಟುಗೂಡಿಸುವ ಕಾರ್ಯ ಮಾಡುತ್ತಿದ್ದಾರೆ. ಬಸವಣ್ಣನವರ ತತ್ವಗಳನ್ನು ಮೈಗೂಡಿಸಿಕೊಂಡ ಕಪ್ಪು ಚುಕ್ಕೆಯಿಲ್ಲದ ಬಸವಲಿಂಗ ಪಟ್ಟದ್ದೇವರು ಬೇರೆ ಶರಣರಿಗೆ ಮಾದರಿಯಾಗಿದ್ದಾರೆ.

ನಾನು ಯಾವಾಗಲೂ ದೇವರಲ್ಲಿ ಪ್ರಾರ್ಥಿಸುವುದೇನೆಂದರೆ, ಈ ಗುರುಕುಲವು ಇನ್ನೂ ಚೆನ್ನಾಗಿ ಬೆಳಯಬೇಕು, ಸುತ್ತೂರು ಮಠದ ಮಾದರಿಯಲ್ಲಿ ಬೆಳೆದು ಈ ಗುರುಕುಲವು ಒಂದು ವಿಶ್ವವಿದ್ಯಾಲಯವಾಗಲಿ ಅಂತ ದೇವರಲ್ಲಿ ಪ್ರಾರ್ಥಿಸುತ್ತೇನೆ. ಇದಕ್ಕೆಲ್ಲ ಕಾರಣಿಭೂತರಾದ ಶ್ರೀ ಬಸವಲಿಂಗ ಪಟ್ಟದ್ದೇವರು ನೂರು ಕಾಲ ಬಾಳಲಿ ಸಮಾಜಕ್ಕೆ ಅವರ ಆಶೀರ್ವಾದವಿರಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಗುರಮ್ಮಾ ಸಿದ್ಧಾರೆಡ್ಡಿ
ಬೀದರ.

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಜೀವನ ಸಂದೇಶ :

ಯುವಶಕ್ತಿ ಆನೆಶಕ್ತಿ ಇದ್ದ ಹಾಗೆ. ಆನೆಗೆ ಅಂಕುಶದಿಂದ ಪಳಗಿಸಿದಾಗ ಏನೆಲ್ಲ ಕಾರ್ಯ ಮಾಡುತ್ತದೆ. ಅದೇ ರೀತಿ ಯುವಶಕ್ತಿಗೆ ನೈತಿಕತೆ, ಅಧ್ಯಾತ್ಮಿಕತೆ ಎಂಬ ಅಂಕುಶದಿಂದ ಪಳಗಿಸಿದಾಗ ಯುವಶಕ್ತಿ ದೇಶದ ದೊಡ್ಡ ಶಕ್ತಿಯಾಗುತ್ತದೆ. ಹಾಗಾಗಿ ವಿದ್ಯಾರ್ಥಿಗಳು ನೈತಿಕತೆ, ಆಧ್ಯಾತ್ಮಿಕತೆ, ಮಾನವಿಯತೆ ಮೈಗೂಡಿಸಿಕೊಳ್ಳಬೇಕು. ಕಣ್ಣೀರು ಬರಿಸುವ ಕಾರ್ಯಮಾಡಬಾರದು ಕಣ್ಣೀರು ಒರೆಸುವ ಕಾರ್ಯ ಮಾಡಬೇಕು. ಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡಿದರೆ ಅದೇ ನಿಜವಾದ ದೇವರ ಸೇವೆ. ವಯಕ್ತಿಕ ಬದುಕು ಸ್ವಚ್ಛವಾಗಿಟ್ಟುಕೊಂಡು ಸಮಾಜಕ್ಕೆ ಏನಾದರು ಕೊಡುಗೆ ನೀಡಬೇಕು. ಸಮಾಜಕ್ಕೆ ಕೊಡುಗೆ ನೀಡುವುದರಲ್ಲಿ ಸ್ವಾರ್ಥ ಇರಬಾರದು. ಭವ್ಯ ಭಾರತದ ಕನಸು ನನಸಾಗಬೇಕಾದರೆ ನೀವೆ ಮುಂದಿನ ಆಶಾಕಿರಣಗಳು ನೀವು ಪ್ರಮಾಣಿಕವಾದ ಕಾಯಕ ದಾಸೋಹ ದೇವರ ನೆನಹು ಪೂಜೆ ಮಾಡುತ್ತಾ ಹೋದರೆ ಭಾರತ ವಿಶ್ವಕ್ಕೆ ಗುರುವಾಗುತ್ತದೆ. ಮತ್ತೆ ಕಲ್ಯಾಣ ರಾಜ್ಯ ನಿರ್ಮಾಣವಾಗುತ್ತದೆ.

]ಪೂಜ್ಯ ಶ್ರಿಗಳಿಗೆ ದೊರೆತ ಪ್ರಶಸ್ತಿ ಪುರಸ್ಕಾರಗಳು:

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಅದ್ಭುತ ಕಾರ್ಯ ಸಾಧನೆಯನ್ನು ಗುರುತಿಸಿ ನಾಡಿನ ವಿವಿಧ ಸಂಘ ಸಂಸ್ಥೆಗಳು ಪೂಜ್ಯರಿಗೆ ಹೆಮ್ಮೆಯಿಂದ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವದಿಂದ ಸತ್ಕರಿಸಿದ್ದಾರೆ. ಪೂಜ್ಯ ಶ್ರೀಗಳ ಅಭೂತಪೂರ್ವ ಸೇವೆ ಗಮನಿಸಿದ ಸರ್ಕಾರ ಗೌರವ ಡಾಕ್ಟರೇಟ್ ಪದವಿಯನ್ನು ಅವರ ಮೂಡಿಗೇರಿಸಿದೆ.

ಪ್ರಶಸ್ತಿ–ಪುರಸ್ಕಾರಗಳು :

೧) ಸುವರ್ಣ ಕರ್ನಾಟಕ ಏಕೀಕರಣ ಪ್ರಶಸ್ತಿ.

೨) ರಮಣಶ್ರೀ ಶರಣ ಪ್ರಶಸ್ತಿ

೩)	ಗುಲಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್
೪)	ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ
೫)	ನಾಗಪುರದ ಡಾ.ಸುಧಾಕರ ಮೊಗಲೆವಾಸ ಬಸವನ್ಮಯ ಪುರಸ್ಕಾರ.
೬)	ಆಳ್ವಾಸ್ ನುಡಿಸಿರಿ ವಿರಾಸತ್ ಪುರಸ್ಕಾರ.
೭)	ಸೇವಾಬಂಗಾರ ಬೆಂಗಳೂರು.
೮)	ಕನಕಶ್ರೀ ಪ್ರಶಸ್ತಿ–ಧಾರವಾಡ
೯)	ದಾಸೋಹರತ್ನ ಪ್ರಶಸ್ತಿ–ಮಧುರಖಂಡಿ.
೧೦)	ಮೃತ್ಯುಂಜಯ ಮಹಾಂತ ಪ್ರಶಸ್ತಿ–ಧಾರವಾಡ.
೧೧)	ಜಗಜ್ಯೋತಿ ವಿಶ್ವಗುರು ಬಸವೇಶ್ವರ ಪ್ರಶಸ್ತಿ.
೧೨)	ಹೂವಿನ ಹಡಗಲಿ ಎಂ.ಎಂ.ಪಾಟೀಲ್ ಜನಸೇವಕ.
೧೩)	ಬೀರಿ ಕಲ್ಯಾಣಜ್ಯೋತಿ ಪ್ರಶಸ್ತಿ.
೧೪)	ಬೆಂಗಳೂರು ಡಿ.ಎಸ್.ಮ್ಯಾಕ್ ಸಾಹಿತ್ಯ ಪುರಸ್ಕಾರ.
೧೫)	ವಚನಶ್ರೀ ಪ್ರಶಸ್ತಿ ಬೆಂಗಳೂರು.
೧೬)	ಸಿದ್ಧಗಂಗಾ ಶ್ರೀ ಪ್ರಶಸ್ತಿ ತುಮಕೂರು.

ಹೀಗೆ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರಿಗೆ ಹಲವಾರು ಪ್ರಶಸ್ತಿಗಳು ದೊರೆತಿವೆ. ಸುವರ್ಣ ಕರ್ನಾಟಕ ಏಕೀಕರಣ ವರ್ಷಾಚರಣೆಯ ಸಂದರ್ಭದಲ್ಲಿ ಬೆಂಗಳೂರಿನ 'ವಾರದಸ್ಫೋಟ' ಕನ್ನಡ ದಿನಪತ್ರಿಕೆಯ ವತಿಯಿಂದ ಶ್ರೀ ಗವಿಸಿದ್ದಪ್ಪಾ ಪಾಟೀಲ್ ಅವರು ಇದನ್ನುನೀಡಿ ಗೌರವಿಸಿದ್ದಾರೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತನಿಂದ ಪೂಜ್ಯರಿಗೆ ಅವರ ಶರಣ ಸೇವೆಯನ್ನು ಗುರುತಿಸಿ 'ರಮಣಶ್ರೀ ಶರಣ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ.

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರಿಗೆ ೧೭-೦೨-೨೦೧೦ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪ್ರದಾನವಾಗಿದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ೨೦೧೨ ರಂದು ಡಾ.ಬಸವಲಿಂಗ ಪಟ್ಟದ್ದೇವರಿಗೆ ಈ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರ

ನವೆಂಬರ್-೦೧, ೨೦೧೨ ರಂದು ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಭಾಲ್ಕಿ ಕ್ಷೇತ್ರದಲ್ಲಿ ಅವರು ಸಲ್ಲಿಸಿರುವ ಅನುಪಮ ಸೇವೆಯನ್ನು ಗಮನಿಸಿ ನೀಡಿದ ಪ್ರಶಸ್ತಿಯಾಗಿದೆ.

ಇತ್ತೀಚಿಗೆ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಅಗಾಧ ಸಾಧನೆ ಗುರುತಿಸಿ ತುಮಕೂರಿನ ಪೂಜ್ಯ ಶ್ರೀ ಡಾ.ಶಿವಕುಮಾರ ಮಹಾಸ್ವಾಮಿಗಳ ಲಿಂಗಹಸ್ತದಿಂದ 'ಸಿದ್ಧಗಂಗಾ ಶ್ರೀ ಪ್ರಶಸ್ತಿ' ನೀಡಿ ಗೌರವಿಸಿದ್ದಾರೆ. ಹೀಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಪೂಜ್ಯ ಶ್ರೀ ಗಳಿಗೆ ದೊರೆತಿವೆ.

ಶ್ರೀಗಳಿಗೆ ಪ್ರಮುಖ ಗೌರವ ಸನ್ಮಾನಗಳು

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಶರಣ ಸಾಹಿತ್ಯ ಸೇವೆಯನ್ನು ಗಮನಿಸಿ ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ೨೦೦೪ ರಲ್ಲಿ ನಡೆದ ಬೀದರ ಶರಣ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಸ್ಥಾನವನ್ನು ನೀಡಿ ಗೌರವಿಸಿತ್ತು. ಬಸವಾದಿ ಶರಣರ ಸೇವೆಗೆ ತಮ್ಮ ಇಡೀ ಜೀವನವನ್ನೇ ಸಮರ್ಪಿಸಿಕೊಂಡಿದ್ದ ನಿಟ್ಟಿನಲ್ಲಿ ಪೂಜ್ಯರ ಕ್ರೀಯಾಶೀಲತೆಯನ್ನು ಕಂಡು ಕರ್ನಾಟಕ ಸರಕಾರ ಅವರನ್ನು ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ಆಡಳಿತ ಮಂಡಳಿಯ ಸದಸ್ಯರನ್ನಾಗಿ ನೇಮಿಸಿದೆ. ೦೧-೧೧-೨೦೧೮ ರಂದು ಕರ್ನಾಟಕ ರಾಜ್ಯೋತ್ಸವ ದಿನದ ಅಂಗವಾಗಿ ಚಂದನ ವಾಹಿನಿಯಲ್ಲಿ ಶುಭೋದಯ ಎಂಬ ಕಾರ್ಯಕ್ರಮದಲ್ಲಿ ಪೂಜ್ಯರ ನೇರ ಪ್ರಸಾರದಲ್ಲಿ ಸಂದರ್ಶನ ನಡೆಯಿತು. ಹಾಗೆಯೇ ಅನೇಕ ಸಂಘ ಸಂಸ್ಥೆಗಳು ಸರ್ಕಾರಿ ಮತ್ತು ಸಹಕಾರಿ ಸಂಘ ಸಂಸ್ಥೆಗಳು ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಸನ್ನಿಧಾನ ಹಾಗೂ ನೇತೃತ್ವದಲ್ಲಿ ಜರುಗಿರುವ ಕಾರ್ಯಕ್ರಮಗಳು ಸಾವಿರ ಇವೆ. ಮತ್ತು ನಾನಾ ರೀತಿಯಿಂದ ಗೌರವ ಸನ್ಮಾನಗಳು ಸಂದಿವೆ.

ಸಮಾರೋಪ

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಬಸವಬಳ್ಳಿಯ ಚೇತನಕ್ಕೆ ಚೈತ್ಯನವಾಗಿ ಸರ್ವ ಕ್ಷೇತ್ರಗಳಲ್ಲೂ ಆಶಾದಾಯಕ ಧನಾತ್ಮಕ ಬೆಳವಣಿಗೆಯನ್ನು ಪೂಜ್ಯರು ಕಂಡು ಕೊಂಡರು. ಬಡತನದ ಬೇಗೆಯಲ್ಲಿ ಬೆಂದರೂ ಬದುಕಿನ ಛಲ ಬಿಡದೆ ಜ್ಞಾನವನ್ನು ಅರಸುತ್ತಾ ಜ್ಞಾನವನ್ನು ಪಡೆಯುವ ಹಾದಿಯಲ್ಲಿ ನಿಜವಾದ ಸುಜ್ಞಾನವನ್ನು ಪಡೆದರು. ಸಾಮಾನ್ಯ ವಿದ್ಯಾರ್ಥಿಯಾಗಿ ಮಠದೊಳಗೆ ಪ್ರವೇಶ ಪಡೆದು ಆ ಮಠದ ಪೀಠಾಧಿಪತಿಯಾಗಿ ಜಾತಿ, ಮತ, ಪಂಥ, ಸಂಪ್ರದಾಯ, ಹೋಮ, ಹವನ, ಯಜ್ಞಯಾಗ, ಅಭಿಷೇಕ ಎಂದು ದೇಶವನ್ನು ಅಡ್ಡ ದಾರಿಗೆ ಕೊಂಡೊಯ್ಯುತ್ತಿರುವ ಇಂದಿನ ಅದೆಷ್ಟೋ ಮಠಾಧೀಶರಿಗೆ ಸತ್ಯ, ಶುಧ್ಧ ಬಸವ ತತ್ವದ ನೆಲೆಯಲ್ಲಿ ವೈಜ್ಞಾನಿಕ ವೈಚಾರಿಕವಾಗಿ ಇಡೀ ಮಾನವ ಲೋಕವೇ ತನ್ನ ಮನೆ, ಮಾನವ ಕುಲವೇ ತನ್ನ ಕುಟುಂಬ ಎಂದು ವಿಶ್ವ ಪ್ರಜ್ಞೆಯನ್ನು ಹೊಂದಿರುವ ಪೂಜ್ಯ ಶ್ರೀಗಳು ಬರೀ ಸ್ವಾಮಿಯಾಗಿ ಪೀಠಕ್ಕೆ ಅಂಟಿ ಕುಳಿತುಕೊಳ್ಳದೇ ಚರ ಜಂಗಮರಾಗಿ ಜಗವನೆಲ್ಲ ಸುತ್ತಿಕೊಂಡು ಶರಣರ ಜೀವನ ಮಾರ್ಗವನ್ನೇ ಹಿಡಿದು ಅನ್ನ ದಾಸೋಹ, ಜ್ಞಾನ ದಾಸೋಹಗಳನ್ನು ಮಠದ ಎರಡು ಕಣ್ಣುಗಳಾಗಿ ಮಾಡಿಕೊಂಡು ತಮ್ಮ ಸೇವೆಗೆ ಮುನ್ನುಡಿಯನ್ನು ಬರೆಯುತ್ತಾ ಬದುಕಿನಲ್ಲಿ ವಿಚಾರಕ್ಕಿಂತ ಆಚಾರಕ್ಕೆ ಪ್ರಾಶಸ್ತ್ಯ ನೀಡಿದರು. ಜಾತಿ ರಹಿತ ಕಲ್ಯಾಣ ರಾಜ್ಯ ಕಟ್ಟಬೇಕೆಂಬುದು ಅವರ ಪ್ರಮುಖ ಉದ್ದೇಶವಾಗಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಹೊಂದಿರುವ ನಮ್ಮ ದೇಶ ಅನೇಕ ಜಟಿಲವಾದ ಸಮಸ್ಯೆಗಳನ್ನು ಎದುರಿಸುತ್ತಿದೆ. ಅಜ್ಞಾನ, ಮೌಢ್ಯತೆ, ಅಂಧಶ್ರದ್ಧೆ, ಭಯೋತ್ಪಾದನೆ, ಜಾತಿಯತೆ, ಬಡತನದಂಥ ಹತ್ತು ಹಲವಾರು ಸಮಸ್ಯೆಗಳಿಗೆ ಶ್ರೀಗಳು ಬಸವಧರ್ಮದ ವಚನಗಳಲ್ಲಿ ಸ್ಪಷ್ಟ ಪರಿಹಾರ ಕಂಡುಕೊಂಡಿದ್ದಾರೆ.

ಡಾ. ಬಸವಲಿಂಗ ಪಟ್ಟದ್ದೇವರ ಶೈಕ್ಷಣಿಕ ಸಾಧನೆ ಅಮೋಘವಾದುದು. ಶಿಕ್ಷಣದಲ್ಲಿ ಆಧುನಿಕ ಪಠ್ಯಕ್ರಮದ ಜೊತೆಗೆ ಯೋಗ ಹಾಗೂ ಆಧ್ಯಾತ್ಮದ ವಿಷಯಗಳು ಕೂಡ ಬಹುಮುಖ್ಯವಾದವುಗಳಾಗಿವೆ. ಆದ್ದರಿಂದ ಅವರು ಶಿಕ್ಷಣಕ್ಕೆ ಭದ್ರವಾದ ಬುನಾದಿ ಹಾಕಿದರು. ಶ್ರೀಗಳು ತಮ್ಮ ಗುರು ಹಾಕಿದ ಬುನಾದಿಯ ಮೇಲೆ ಭವ್ಯಸೌಧವನ್ನು ನಿರ್ಮಿಸಿ ಅದಕ್ಕೆ ಹೊಸ ಆಯಾಮಗಳನ್ನು ಒದಗಿಸಿಕೊಡುತ್ತಿದ್ದಾರೆ.

ಡಾ.ಬಸವಲಿಂಗ ಪಟ್ಟದ್ದೇವರ ಬದುಕಿನ ಸೂತ್ರವೆಂದರೆ ಶರಣರ ವಚನಗಳಂತೆ ಅವರ ಕಾಯಕ ದಾಸೋಹ, ನಡೆ–ನುಡಿಗಳಂಥ ಸುಂದರ ಸಮನ್ವಯದ ತತ್ವಗಳ ನೆಲೆಯಲ್ಲಿ ಸಾಗುವುದು.

ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು, ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಹಾಗೂ ಶ್ರೀ ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರ ಗುರು ಶಿಷ್ಯರ ಜೋಡಿ ಜ್ಯೋತಿ ಮುಟ್ಟಿದ ಬತ್ತಿ ಜ್ಯೋತಿಯಾದಂತೆ, ಲಿಂಗಮುಟ್ಟಿದ ಅಂಗ ಲಿಂಗವಾದಂತೆ, ಗುರು ಮುಟ್ಟಿದ ಶಿಷ್ಯ ಗುರುವಾಗುವ ಬಸವ ಧರ್ಮದ ನೀತಿ ಶರಣರಿಗೆ ಮಾತ್ರ ಸಾಧ್ಯ. ಅಂಥ ಶರಣ ಪರಂಪರೆಯ ಮುಂದುವರಿಕೆಯಾಗಿ ಭಾಲ್ಕಿ ಹಿರೇಮಠ ಸಂಸ್ಥಾನದ ಗುರು–ಶಿಷ್ಯ ಪರಂಪರೆಯಲ್ಲಿ ಜಾತಿ ಜಂಗಮ ಮಠವಾಗದೇ ಸದ್ಗುಣ ಸಂಪನ್ನತೆಯಿಂದ ಕೂಡಿದೆ. ಶಿಷ್ಯ ಗುರುವಾಗುವ ಪರಿ ನಿರಂತರ ಎಂಬುದಕ್ಕೆ ಪೂಜ್ಯ ಶ್ರೀ ಡಾ.ಚೆನ್ನಬಸವ ಪಟ್ಟದ್ದೇವರು, ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು, ಗುರು ಮುಟ್ಟಿ ಗುರುವಾಗಿದ ಇದೀಗ ಪೂಜ್ಯ ಶ್ರೀ ಗುರುಬಸವ ದೇವರು ಭಾಲ್ಕಿ ಹಿರೇಮಠ ಸಂಸ್ಥಾನಕ್ಕೆ ಪಟ್ಟದ್ದೇವರಾಗುವ ಮೂಲಕ ಬಸವತತ್ವದ ಸಿದ್ಧಾಂತವನ್ನು ಆಚರಣೆಗೆ ತರುವದಕ್ಕಾಗಿ ದುಶ್ಚಟಗಳನ್ನು ನನ್ನ ಜೋಳಿಗೆಗೆ ಹಾಕಿರೆಂಬ ಅಭಿಯಾನ ಚರ ಜಂಗಮರಾಗಿ ಮಾಡುತ್ತಿರುವುದು ಅಭಿನಂದನಾರ್ಹವಾಗಿದೆ.

ಹೀಗೆ ಭಾಲ್ಕಿ ಹಿರೇಮಠದ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ವಿಶ್ವದ ಅತ್ಯಂತ ಶ್ರೇಷ್ಠ ದಾರ್ಶನಿಕರು ಶರಣರ ಆದರ್ಶವನ್ನು ಹಿಡಿದು ಸಮಾಜಕ್ಕಾಗಿಯೇ ತಮ್ಮ ಸರ್ವಸ್ವವನ್ನೆಲ್ಲ ಅರ್ಪಿಸಿದ ಸೇವಾಧಾರಿಗಳಾಗಿದ್ದಾರೆ. ಶರಣರ ತತ್ವವನ್ನು ಬಿತ್ತುವ ನಿಜವಾರಸುದಾರರಾಗಿ ಇದೀಗ ದೇಶದಲ್ಲಿ ಭುಗಿಲೆದ್ದ ಲಿಂಗಾಯತ ಸ್ವಾತಂತ್ರ್ಯತೆಗೆ ಪ್ರತ್ಯೇಕ ಲಿಂಗಾಯತ ಧರ್ಮದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು, ಹೋರಾಟ ನಡೆಸುತ್ತಿರುವ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಕಾಯಕ ಯೋಗಿಯ ಕಾಯಕ ಮುಂದುವರೆಸಿಕೊಂಡು ಸಾಗುತ್ತಾ ಬಸವಕಲ್ಯಾಣದ ಪ್ರಣತೆಯಲ್ಲಿ ಅಪ್ಪಟ ಬಸವಧರ್ಮದ ಜ್ಯೋತಿ ಸದಾ ಬೆಳಗುತ್ತಿರಬೇಕೆಂಬ ಸದಾಶಯದಿಂದ ಶ್ರಮಿಸುತ್ತಿರುವ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಕಾಯಕ ಮಹತ್ವದ್ದಾಗಿದೆ.

ತಮ್ಮ ಜೀವಿತಾವಧಿಯಲ್ಲಿಯೇ ಮಠಾಧೀಶರು ಉತ್ತರಾಧಿಕಾರಿಗಳನ್ನು ನೇಮಿಸುವುದು ಬಹಳ ಅಪರೂಪ, ಆದರೆ ಪೂಜ್ಯರು ಹಿಂದಿನ ಶ್ರೀಗಳಂತೆ ಇವರು ಸಹ ಸಮರ್ಥ ಉತ್ತರಾಧಿಕಾರಿಯಾಗಿ ಪೂಜ್ಯ ಶ್ರೀ ಗುರುಬಸವದೇವರಿಗೆ ಪಟ್ಟದ್ದೇವರನ್ನಾಗಿ ಮಾಡಿ ತಾವು ಇನ್ನೂ ಅನೇಕ ರೀತಿಯಲ್ಲಿ ಕಾಯಕಗಳನ್ನು ಮುಂದುವರೆಸಿಕೊಂಡು ಬಸವಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷರಾಗಿ ಇಡೀ ಸಮಸ್ತ ಬಸವ ಭಕ್ತರ ಕೈ ಹಿಡಿದು ಮುನ್ನಡೆಸುತ್ತಿರುವುದು ನಮ್ಮೆಲ್ಲರ ಸೌಭಾಗ್ಯವೆನ್ನಬಹುದು.

ಅನುಬಂಧ

೧. ಪರಮಪೂಜ್ಯ ಶ್ರೀ ಮ.ಘ.ಚ. ಡಾ.ಬಸವಲಿಂಗ ಪಟ್ಟದ್ದೇವರು ಜೀವನದ ಪ್ರಮುಖ ಘಟನಾವಳಿಗಳು

ಜನನ	:	೨೫-೦೮-೧೯೫೦
ಜನ್ಮಸ್ಥಳ	:	ನಾಗೂರು(ಬಿ) ಮಂಡಲ:ಕಂಗಟಿ ತಾ:ನಾರಾಯಣಖೇಡ, ಜಿಲ್ಲೆ:ಸಂಗಾರೆಡ್ಡಿ ರಾಜ್ಯ: ತೆಲಂಗಾಣ
ವಿದ್ಯಾರ್ಹತೆ	:	ಎಂ.ಎ. (ಕನ್ನಡ) ೧೯೮೨
ದಿಕ್ಷಾ ಗುರುಗಳು	:	ಪರಮಪೂಜ್ಯ ಶ್ರೀ ಮ.ಘ.ಚ. ಡಾ. ಚನ್ನಬಸವ ಪಟ್ಟದ್ದೇವರು
ಉತ್ತರಾಧಿಕಾರಿ ನೇಮಕ	:	೧೯೭೮ ಬಸವ ಜಯಂತಿಯಂದು
ಪಟ್ಟಾಧಿಕಾರ	:	೦೧-೦೬-೧೯೮೫
೧. **ಸಾಹಿತ್ಯ ಸೇವೆ**	:	ಸ್ವರಚಿತ ಕೃತಿಗಳು-***
	:	ಸಂಪಾದಿತ ಕೃತಿಗಳು-***
	:	ಅನುವಾದಿತ ಕೃತಿಗಳು-*** ಮರಾಠಿ-** ತೆಲುಗು-** ಹಿಂದಿ-**
ಹಿರೇಮಠದಿಂದ ಪುಸ್ತಕ ಪ್ರಕಟಣೆ	:	ಕನ್ನಡ - ೧೦೦ ಮರಾಠಿ - ೧೫೫ ತೆಲಗು - ೩೦ ಹಿಂದಿ - ೨೦ ಇಂಗ್ಲೀಷ - ೦೨

೨. **ಬಸವತತ್ವ ಪ್ರಸಾರ ಸೇವೆ**

೧. **ಮಹಾರಾಷ್ಟ್ರದಲ್ಲಿ:-**

- ೨೭ ನೇ ಜನೆವರಿ ೨೦೦೭ ರಲ್ಲಿ ಮಹಾರಾಷ್ಟ್ರ ಬಸವ ಪರಿಷತ್ತು ಸ್ಥಾಪನೆ.
- ಇಲ್ಲಿಯವರೆಗೆ ೧೬೫ ಮರಾಠಿ ಗ್ರಂಥಗಳ ಪ್ರಕಟನೆ ಹಾಗೂ ೫ ಲಕ್ಷಕ್ಕೂ ಹೆಚ್ಚು ಗ್ರಂಥಗಳ ವಿತರಣೆ.
- ೨೦೧೨ ರಲ್ಲಿ ಅಖಂಡ ಮಹಾರಾಷ್ಟ್ರದ ೩೬ ಜಿಲ್ಲೆಗಳಲ್ಲಿ ಬಸವ ಸಂದೇಶ ಯಾತ್ರೆಯ ಮೂಲಕ ಬಸವತತ್ವ ಪ್ರಸಾರ.
- ೧೦ ರಾಜ್ಯಮಟ್ಟದ ಬಸವಸಮ್ಮೇಳನಗಳ ಆಯೋಜನೆ.
- ಜಿಲ್ಲಾ ಹಾಗೂ ತಾಲೂಕಾ ಕೇಂದ್ರಗಳಲ್ಲಿ ವಚನ ಗ್ರಂಥದಿಂಡಿ ಮೂಲಕ ಪುಸ್ತಕ ವಿತರಣೆ.
- ರಾಜ್ಯಮಟ್ಟದ ನಿಬಂಧ ಕಾವ್ಯ, ಭಾಷಣ ಸ್ಪರ್ಧೆಗಳ ಆಯೋಜನೆ.
- ರಾಜ್ಯಮಟ್ಟದ ಅನುಭವಮಂಟಪ ಪರೀಕ್ಷೆಯ ಆಯೋಜನೆ.

೨. **ತೆಲಂಗಾಣದಲ್ಲಿ:-**

- ೨೨ ನೇ ಡಿಸೆಂಬರ್ ೨೦೦೭ ರಲ್ಲಿ ತೆಲಂಗಾಣ ಬಸವ ಪರಿಷತ್ತು ಸ್ಥಾಪನೆ.
- ಇಲ್ಲಿಯವರೆಗೆ ೩೦ ತೆಲಗು ಗ್ರಂಥಗಳ ಪ್ರಕಟನೆ ಹಾಗೂ ವಿತರಣೆ.
- ೨೦೧೯ ರಲ್ಲಿ ಅಖಂಡ ತೆಲಂಗಾಣದ ೩೧ ಜಿಲ್ಲೆಗಳಲ್ಲಿ ಬಸವ ಸಂದೇಶ ಯಾತ್ರೆಯ ಮೂಲಕ ಬಸವತತ್ವ ಪ್ರಸಾರ.
- ಬಸವಸಮ್ಮೇಳನಗಳು, ವಚನಗ್ರಂಥ ದಿಂಡಿ, ಅನುಭವಮಂಟಪ ಪರೀಕ್ಷೆ ಹಾಗೂ ನಿಬಂಧ, ಕಾವ್ಯ, ಭಾಷಣ ಸ್ಪರ್ಧೆಗಳ ಆಯೋಜನೆ.

೩. **ವಿದೇಶಗಳಲ್ಲಿ:-**

- ಅಲ್ಲಿನ ಭಕ್ತರ ಆಮಂತ್ರಣ ಮೇರೆಗೆ ೨೦೧೫ ರಲ್ಲಿ ಮಸ್ಕಟ್ ದೇಶದಲ್ಲಿ ಬಸವಜಯಂತಿ ನಿಮಿತ್ಯ ೧೦ ದಿವಸಗಳ ಪರ್ಯಂತ ಬಸವತತ್ವ ಪ್ರಸಾರ.
- ಅಲ್ಲಿನ ಭಕ್ತರ ಆಮಂತ್ರಣ ಮೇರೆಗೆ ೨೦೧೭ ರಲ್ಲಿ ಆಸ್ಟ್ರೇಲಿಯಾ ಹಾಗೂ ಸಿಂಗಾಪೂರದಲ್ಲಿ ಬಸವಜಯಂತಿ ನಿಮಿತ್ಯ ೧೫ ದಿವಸಗಳ ಪರ್ಯಂತ ಬಸವತತ್ವ ಪ್ರಸಾರ.

೪. **ಹಿರೇಮಠ ಸಂಸ್ಥಾನದ ಆಶ್ರಯದಲ್ಲಿ ಬಸವಭಾರತಿ ಹಿಂದಿ ಪ್ರತಿಷ್ಠಾನ:-**

- ದೆಹಲಿ ಹಾಗೂ ಉತ್ತರಭಾರತಕ್ಕೆ ಬಸವತತ್ವ ಪರಿಚಯಿಸುವ ಸದುದ್ದೇಶದಿಂದ ಹಿಂದಿ ಭಾಷೆಯಲ್ಲಿ ಗ್ರಂಥಗಳ ಪ್ರಕಟಣೆ. ಹಾಗೂ ಆ ರಾಜ್ಯಗಳ ವಿಶ್ವವಿದ್ಯಾಲಯಕ್ಕೆ ಗ್ರಂಥಗಳು ವಿತರಣೆ.

೩. **ಬಸವಕಲ್ಯಾಣ ಅನುಭವಮಂಟಪ ಅಧ್ಯಕ್ಷರಾಗಿ ಸೇವೆ : ಕಾರ್ಯ ಯೋಜನೆಗಳು**

- ಪ್ರಪ್ರಥಮ ಪ್ರಜಾಪ್ರಭುತ್ವ ಸಂಸತ್ತು ಎನಿಸಿರುವ ಬಸವಕಲ್ಯಾಣ ಅನುಭವಮಂಟಪದ ಪ್ರಸ್ತುತ ಅಧ್ಯಕ್ಷರಾಗಿ ಹಲವಾರು ವಿನೂತನ ಕಾರ್ಯಕ್ರಮಗಳನ್ನು ಸಂಯೋಜಿಸಿರುವುದು.
- ಪ್ರತಿವರ್ಷ ರಾಷ್ಟ್ರೀಯ ಅನುಭವಮಂಟಪ ಉತ್ಸವದ ಆಯೋಜನೆ ಮೂಲಕ ಹೊರರಾಜ್ಯ ಹಾಗೂ ಹೊರದೇಶಗಳಲ್ಲಿ ವಾಸಿಸಿರುವ ಶರಣರ ಸಮಾವೇಶ.
- ಡಾ.ಚನ್ನಬಸವ ಪಟ್ಟದ್ದೇವರು ಅನುಭವಮಂಟಪ ಪ್ರಶಸ್ತಿ, ಡಾ.ಜಯದೇವಿತಾಯಿ ಲಿಗಾಡೆ ರಾಷ್ಟ್ರೀಯ ಪುರಸ್ಕಾರ, ಡಾ.ಎಂ.ಎಂ.ಕಲಬುರಗಿ ಸಾಹಿತ್ಯ ಸಂಶೋಧನೆ ರಾಷ್ಟ್ರೀಯ ಪುರಸ್ಕಾರ ಮುಂತಾದ ಪುರಸ್ಕಾರ ವಿತರಣೆ.

- ಬಸವಾದಿ ಶರಣರ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣಗಳ ಆಯೋಜನೆ.
- ಪ್ರತಿವರ್ಷ ರಾಜ್ಯಮಟ್ಟದ ಬಸವಣ್ಣನವರ ವಚನಕಂಠಪಾಠ ಸ್ಪರ್ಧೆ ಆಯೋಜನೆ.
- ಪ್ರತಿವರ್ಷ ಬಸವ ಸಂಸ್ಕಾರ ಶಿಬಿರ ನಡೆಯುತ್ತದೆ.
- ರಾಜ್ಯಮಟ್ಟದ ವಚನಸಂಗೀತೋತ್ಸವ, ನಾಟಕ ಪ್ರದರ್ಶನ, ವಚನ ನೃತ್ಯ, ವಚನಭಜನೆ, ಶರಣರ ರೂಪಕಗಳ ಪ್ರದರ್ಶನ.
- ಲಿಂಗಾಯತ ವಿಶ್ವವಿದ್ಯಾಲಯದ ಮೂಲಕ ಪ್ರಸಾರಾಂಗ, ಸಂಶೋಧನಾಂಗ, ಭೋಧನಾಂಗ, ಧರ್ಮ ಪ್ರಸಾರಕರ ತರಬೇತಿ, ಗ್ರಂಥಾಲಯ, ದತ್ತಿ ಉಪನ್ಯಾಸ, ಪ್ರಶಸ್ತಿ ವಿತರಣೆ ಇತ್ಯಾದಿ ಕಾರ್ಯಕ್ರಮಗಳು.
- ಬಸವಕಲ್ಯಾಣಕ್ಕೆ ಬಂದ ಅತಿಥಿಗಳ ವಾಸ್ತವ್ಯಕ್ಕಾಗಿ ಸುಸಜ್ಜಿತವಾದ ಶರಣಧಾಮ ಹಾಗೂ ಬಸವಭವನ ಕಟ್ಟಡ ನಿರ್ಮಾಣ.
- ಅನುಭವಮಂಟಪದಲ್ಲಿ ನಿರಂತರ ಅನ್ನ ದಾಸೋಹ ವ್ಯವಸ್ಥೆ.

೪. **ಸಾಮಾಜಿಕ ಸೇವೆ:**

೧. ಹಾನಗಲ್ಲ ಕುಮಾರೇಶ್ವರ ಉಚಿತ ಪ್ರಸಾದ ನಿಲಯದಲ್ಲಿ ೪೦೦ ಮಕ್ಕಳಿಗೆ ಉಚಿತ ಪ್ರಸಾದ, ವಸತಿ ಶಿಕ್ಷಣ ನೀಡುತ್ತಿದ್ದಾರೆ.

೨. ಪೂಜ್ಯ ಚನ್ನಬಸವ ಪಟ್ಟದ್ದೇವರ ಪ್ರಸಾದ ನಿಲಯ, ಬೀದರದಲ್ಲಿ ಸ್ಥಾಪನೆ.

೩. ಹಿರೇಮಠ ಸಂಸ್ಥಾನ ದತ್ತು ಸ್ವೀಕಾರ ಕೇಂದ್ರ, ಭಾಲ್ಕಿ-ಬೀದರ

೪. ನಿರಾಶ್ರಿತರಾದವರಿಗೆ, ವೃದ್ಧರಿಗೆ, ವಿಧವೆಯರಿಗೆ, ಅನಾಥ ಮಕ್ಕಳಿಗೆ ಆಶ್ರಯ ನೀಡುವುದು.

೫. ಪ್ರಕೃತಿ ವಿಸ್ಮಯ ಹಾಗೂ ವಿಕೋಪಗಳಿಂದ ನಿರಾಶ್ರಿತರಿಗೆ ಸಹಾಯ ಮಾಡುವುದು
೬. ಸಮಾಜದಲ್ಲಿ ಪರಿಸರ ಪ್ರೇಮ ಒಡಮೂಡಿಸುವುದು ಇದರಡಿಯಲ್ಲಿ ಉಚಿತ ಸಸಿಗಳನ್ನು ನೀಡುವುದು; ಸಾರ್ವಜನಿಕ ಸ್ಥಳಗಳಲ್ಲಿ ಸಸಿ ನೆಡುವಂತೆ ಪ್ರೇರೆಪಿಸುವುದು
೭. ರೈತರಿಗಾಗಿ "ಕೃಷಿ ಸ್ನೇಹ' ಮೇಳ ಏರ್ಪಡಿಸಿ, ಮಾದರಿ ಕೃಷಿ ಪದ್ಧತಿ ಅಳವಡಿಸಿಕೊಳ್ಳಲು ಪ್ರೇರೆಪಿಸುವುದು.

೫. **ಧಾರ್ಮಿಕ ಸೇವೆ :**

೧. ಮಠದಲ್ಲಿ ಪ್ರತಿ ತಿಂಗಳು ಶರಣಸಂಗಮ ಹಾಗೂ ಶಿವಾನುಭವ ಗೋಷ್ಠಿಗಳನ್ನು ಏರ್ಪಡಿಸಿ, ಬಸವಾದಿ ಶರಣರ ಮೌಲಿಕ ವಿಚಾರಗಳನ್ನು ಜನಮನದಲ್ಲಿ ಬಿತ್ತುವುದು.
೨. ಶ್ರಾವಣ ಮಾಸದಲ್ಲಿ ಒಂದು ತಿಂಗಳು ವಚನ ಪ್ರವಚನ ಹಾಗೂ ವಚನ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗುತ್ತದೆ.
೩. ಮಠದಲ್ಲಿ ನಿರಂತರ ಅನ್ನದಾಸೋಹ ಹಾಗೂ ಜ್ಞಾನದಾಸೋಹ ಬಸವಧರ್ಮದ ಕಾರ್ಯಕ್ರಮಗಳು ಜರುಗುತ್ತವೆ.
೪. ಹಿರಿಯ ಗುರುಗಳ ಜನ್ಮದಿನೋತ್ಸವ ಹಾಗೂ ಸ್ಮರಣೋತ್ಸವ, ವಚನಜಾತ್ರೆ ಕಾರ್ಯಕ್ರಮದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿಯ ಹಾಗೂ ಜಾನಪದ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.
೫. ಪ್ರತಿವರ್ಷ ಶರಣರ ಜಯಂತಿ ಹಾಗೂ ಸ್ಮರಣೋತ್ಸವಗಳ ಆಯೋಜನೆ ಮಾಡಲಾಗುತ್ತದೆ.
೬. ಬೀದರ ಜಿಲ್ಲೆ ಹಾಗೂ ಹೊರರಾಜ್ಯದ ಬೇರೆ ಬೇರೆ ಹಳ್ಳಿಹಗಳಲ್ಲಿ ತಿಂಗಳ ಅನುಭವಮಂಟಪ ಕಾರ್ಯಕ್ರಮ ಆಯೋಜಿಸಲಾಗುತ್ತದೆ.

೭. ಪ್ರತಿವರ್ಷ ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರಮಟ್ಟದ ಉತ್ತಮ ಸಾಹಿತಿ, ಸಂಗೀತ ಹಾಗೂ ಬೇರೆ ಬೇರೆ ಕಲಾವಿಧರನ್ನು ಪ್ರಶಸ್ತಿ ನೀಡಿ ಗೌರವಿಸುವುದು.

೮. ಶಾಖಾ ಮಠಗಳ ಜೀರ್ಣೋದ್ಧಾರ.

೬. ಶೈಕ್ಷಣಿಕ ಸೇವೆ:

೧೯೭೨-೭೩ ರಲ್ಲಿ "ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ" ಸಂಸ್ಥಾಪಿಸಿ ಆ ಮೂಲಕ ಶಿಕ್ಷಣ ಪ್ರಸಾರಕ್ಕೆ ನಾಂದಿ ಹಾಡಲಾಯಿತು. ಈ ಟ್ರಸ್ಟಿನ ಅಡಿಯಲ್ಲಿ ಈಗ ೫೦ ವಿದ್ಯಾಸಂಸ್ಥೆಗಳು ಕಾರ್ಯ ನಿರ್ವಹಿಸುತ್ತವೆ. ಅವುಗಳಲ್ಲಿ

೧. ಶಿಶುವಿಹಾರ ಪ್ರಾಥಮಿಕ ಶಾಲೆಗಳು-೧೫
೨. ಪ್ರೌಢ ಶಾಲೆಗಳು-೧೩
೩. ಪದವಿಪೂರ್ವ ಕಾಲೇಜು-೦೪
೪. ಡಿಗ್ರಿ ಕಾಲೇಜು-೦೧
೫. ಡಿ.ಇಡಿ. ಕಾಲೇಜು-೦೨
೬. ಬಿ.ಇಡಿ. ಕಾಲೇಜು-೦೧
೭. ಐ.ಟಿ.ಐ. ಕಾಲೇಜು-೦೨
೮. ಆಂಗ್ಲ ಮಾಧ್ಯಮ-೦೩
೯. ಸ್ವದೇಶಿ ದತ್ತು ಕೇಂದ್ರ-೦೧
೧೦. ಪ್ರಸಾದ ನಿಲಯಗಳು-೦೨
೧೧. ಗ್ರಂಥಾಲಯಗಳು-೦೩
೧೨. ಸಂಗೀತ ಶಾಲೆ-೦೨
೧೩. ಗೋಶಾಲೆ-೦೧ (ತುರುಗಾಹಿ ರಾಮಣ್ಣ ಗೋಶಾಲೆ)

ನಲವತ್ತು ಮಕ್ಕಳಿಂದ ಪ್ರಾರಂಭವಾಗಿರುವ ಈ ಸಂಸ್ಥೆಗಳಲ್ಲಿ ಈಗ ಸುಮಾರು ೧೫,೦೦೦ ವಿದ್ಯಾರ್ಥಿಗಳು ಓದುತ್ತಿದ್ದು ೧೦೦೦ ಕ್ಕಿಂತ ಹೆಚ್ಚು ಶಿಕ್ಷಕರು ಹಾಗೂ ಸಿಬ್ಬಂದಿವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ. ವ್ಯಕ್ತಿತ್ವ ವಿಕಸನ, ಸಂಸ್ಕಾರಯುತ

ಶಿಕ್ಷಣ, ರಾಷ್ಟ್ರಪ್ರಜ್ಞೆ, ಸಾಮಾಜಿಕ ಜವಾಬ್ದಾರಿಯನ್ನು ಮಕ್ಕಳಲ್ಲಿ ಹೆಚ್ಚಿಸುವ ಶಿಕ್ಷಣ ಪದ್ಧತಿ ಇಲ್ಲಿದ್ದು, ಕರ್ನಾಟಕದಲ್ಲಿ ಇದರ ಹೆಸರು ಮನೆ ಮಾತಾಗಿದೆ. ಈ ಸಂಸ್ಥೆಯಿಂದ ಸಾವಿರಾರು ವಿದ್ಯಾರ್ಥಿಗಳು ದೇಶದ ಅತ್ಯುನ್ನತ ಶಿಕ್ಷಣ ಕೇಂದ್ರಗಳಲ್ಲಿ ಉನ್ನತ ಶಿಕ್ಷಣಕ್ಕಾಗಿ ಆಯ್ಕೆಯಾಗಿದ್ದಾರೆ. ವಿಶೇಶವೆಂದರೆ ಗಡಿನಾಡು ಗ್ರಾಮೀಣ ಭಾಗದಲ್ಲಿ ಒಂದನೆಯ ವರ್ಗದಿಂದ ಹತ್ತನೆಯ ವರ್ಗದವರೆಗೆ ಕನ್ನಡ ಮಾಧ್ಯಮದಲ್ಲಿ ಓದಿ ನೂರಾರು ಮೆಡಿಕಲ್, ಐ.ಐ.ಟಿ, ಐ.ಏ.ಎಸ್, ಕೆ.ಏ.ಎಸ್, ಪೈಲಟ್, ವಿಜ್ಞಾನಿ ಮುಂತಾದ ಕ್ಷೇತ್ರಗಳಿಗೂ ನೇಮಕಗೊಂಡಿದ್ದಾರೆ.

೭. **ಸಾಂಸ್ಕೃತಿಕ ಸೇವೆ:**

೧. 'ಶಾಂತಿಕಿರಣ' ಎಂಬ ತಿಂಗಳ ಸಂಚಿಕೆಯನ್ನು ೧೯೭೧ ರಿಂದಲೇ ಶ್ರೀಮಠದ ಪ್ರಕಾಶನದಿಂದ ಪ್ರಕಟಿಸಲಾಗುತ್ತಿದೆ.

೨. ಪ್ರತಿವರ್ಷ ಮಠದ ಆಶ್ರಯದಲ್ಲಿ ನಾಟಕೋತ್ಸವಗಳನ್ನು ಏರ್ಪಡಿಸಿ ಒಳ್ಳೆಯ ನಾಟಕಗಳನ್ನು ಪ್ರದರ್ಶಿಸಲಾಗುವುದು.

೩. ವಿವಿಧ ನಾಟ್ಯ ಸಂಘಕ್ಕೆ ಸಾವಿರಾರು ರೂಪಾಯಿ ಧನಸಹಾಯ ನೀಡಲಾಗಿದೆ.

೪. ಮಕ್ಕಳ ವ್ಯಕ್ತಿತ್ವ ವಿಕಸನಕ್ಕಾಗಿ ನಾನಾ ಸ್ಪರ್ಧೆ, ಸಂಕಿರಣ ಹಾಗೂ ಸಭಾ ಗೋಷ್ಠಿಗಳನ್ನು ಏರ್ಪಡಿಸುವುದು.

೫. ರಾಜ್ಯ ಹಾಗೂ ರಾಷ್ಟ್ರಮಟ್ಟದ ಸಮ್ಮೇಳನ, ಸಮಾರಂಭಗಳನ್ನು ಶ್ರೀಗಳ ನೇತೃತ್ವದಲ್ಲಿ ಹಲವು ಬಾರಿ ಆಯೋಜಿಸಲಾಗಿದೆ.

೮. **ಪೂಜ್ಯರು ಸ್ಥಾಪಿಸಿದ ಸಂಘ ಸಂಸ್ಥೆಗಳು:**

೧. ಡಾ॥ ಚನ್ನಬಸವ ಪಟ್ಟದ್ದೇವರ ಸಹಕಾರ ಸಂಘ ಭಾಲ್ಕಿ

೨. ಅನುಭವಮಂಟಪ ಟ್ರಸ್ಟ ಸಂತಪೂರ

೩. ಡಾ.ಚನ್ನಬಸವ ಪಟ್ಟದ್ದೇವರು ಜನಕಲ್ಯಾಣ ಟ್ರಸ್ಟ್ ಕಮಲನಗರ

೪. ಗುರುಚನ್ನಬಸವ ಸಾಂಸ್ಕೃತಿಕ ಕಲಾ ಮತ್ತು ಕ್ರೀಡಾ ವೇದಿಕೆ ಟ್ರಸ್ಟ್, ಭಾಲ್ಕಿ
೫. ಹಿರೇಮಠ ಸಂಸ್ಥಾನ ವಿದ್ಯಾಪೀಠ ಕಾರಾಮುಂಗಿ, ತಾ॥ ನಾರಾಯಣಖೇಡ, ಮಂಡಲ:ನಾಗಲಗಿದ್ದಾ, ಜಿ॥ ಸಂಗಾರೆಡ್ಡಿ.
೬. ಮಹಾತ್ಮ ಬಸವೇಶ್ವರ ಸ್ಮಾರಕ ಮತ್ತು ಜನಕಲ್ಯಾಣ ಟ್ರಸ್ಟ್, ಮಂಗಳವೇಡೆ, ಜಿ॥ ಸೊಲಾಪೂರ.
೭. ಹಿರೇಮಠ ಸಂಸ್ಥಾನ ಟ್ರಸ್ಟ (ರಿ) ಭಾಲ್ಕಿ.

೯. **ಮಾಧ್ಯಮಗಳಲ್ಲಿ ಪೂಜ್ಯರು:**

- ಡಿ.ಡಿ.ಚಂದನ ವಾಹಿನಿ ಜೀವನಮಾರ್ಗ ಕಾರ್ಯಕ್ರಮದಲ್ಲಿ ೨೦೧೫ ರಂದು ಪೂಜ್ಯರು ಬಸವತತ್ವ ಮತ್ತು ಮಾನವೀಯತೆ ಕುರಿತು ಅನುಭಾವ.
- ದಿ: ೦೧-೧೧-೨೦೧೮ ರಂದು ಕರ್ನಾಟಕ ರಾಜ್ಯೋತ್ಸವ ದಿವಸ ಚಂದನ ವಾಹಿನಿಯಲ್ಲಿ ಶುಭೋದಯ ನೇರ ಪ್ರಸಾರ.
- ಟಿವಿ-೯ ರಲ್ಲಿ ನಿಮಗೊಂದು ಸಲಾಂ ಕಾರ್ಯಕ್ರಮ.

೧೦. **ಪೂಜ್ಯರ ಕುರಿತು ಬಂದ ಕೃತಿಗಳು:**

೧) **ಸ್ವತಂತ್ರ ಕೃತಿಗಳು:**

೧. ಡಾ.ಬಸವಲಿಂಗ ಪಟ್ಟದ್ದೇವರು
: ಲೇ.ಡಾ.ಗುರುಲಿಂಗಪ್ಪ ಧಬಾಲೆ
೨. ಹಿರೇಮಠ ಮತ್ತು ದಲಿತೋದ್ಧಾರ
: ಲೇ.ಡಾ.ಇಂದುಮತಿ ಪಾಟೀಲ
೩. ಡಾ.ಬಸವಲಿಂಗ ಪಟ್ಟದ್ದೇವರು
: ಲೇ.ಡಾ.ಶಿವಣ್ಣ ಬೆಂಗಳೂರು
೪. ಅಕ್ಷರ ಕಲ್ಯಾಣ
: ಲೇ.ಡಾ.ಬಸವರಾಜ ಬಲ್ಲೂರು

೫. ಗುರುಮಹಿಮೆ

: ಲೇ.ಜಗನ್ನಾಥ ಬಿರಾದಾರ

೬. ಭಾಲ್ಕಿಯ ಚಂದ್ರನ ಮಹಾಬೆಳಗು

: ಲೇ.ಡಾ.ಎಂ.ಮಕ್ತುಂಬಿ

೭. ಅರಿವಿನ ಬೆಳಕು

: ಲೇ.ರವೀಂದ್ರ ಎಸ್.ಮುತ್ತಂಗೆ

೨) ಸಂಪಾದಿತ ಕೃತಿಗಳು:

೮. ಬಸವಶಿಶು

: ಸಂ.ದೇಶಾಂಶ ಹುಡಗಿ

೯. ಕನ್ನಡ ಜಂಗಮ

: ಸಂ.ಸಂಜುಕುಮಾರ ಜುಮ್ಮಾ

೧೦. ಕಲ್ಯಾಣದೀಪ್ತಿ

: ಸಂ.ಡಾ.ಎಂ.ಎಂ.ಕಲಬುರಗಿ

: ಸಂ.ಡಾ.ಗುರುಲಿಂಗಪ್ಪ ಧಬಾಲೆ

೧೧. ಜಂಗಮದಾಸೋಹಿ

: ಸಂ:ಡಾ.ನಾಗರಾಜ ಹೀರಾ

೧೧. ಪ್ರಶಸ್ತಿಗಳು:

೨೦೦೬ ಸುವರ್ಣ ಕರ್ನಾಟಕ ಏಕೀಕರಣ ಪ್ರಶಸ್ತಿ, ಬೆಂಗಳೂರು.

೨೦೦೮ ರಮಣಶ್ರೀ ಶರಣ ಪ್ರಶಸ್ತಿ, ಬೆಂಗಳೂರು.

೨೦೧೦ ಬಸವಭೂಷಣ ಪ್ರಶಸ್ತಿ, ಉದಗೀರ.(ಮಹಾರಾಷ್ಟ್ರ)

೨೦೧೦ ಗುಲಬರ್ಗಾ ವಿಶ್ವವಿದ್ಯಾಲಯಿಂದ ಗೌರವ ಡಾಕ್ಟರೇಟ್.

೨೦೧೨ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಬೆಂಗಳೂರು.

೨೦೧೩ ದಿಟ್ಟಧೀರ ಗಣಾಚಾರಿ ಶರಣ ಅಂಬಿಗಕುಮಾರ ಚೌಡಯ್ಯ ಪ್ರಶಸ್ತಿ-ಗದಗ-ಬೆಟಗೇರಿ.

೨೦೧೩ ಡಾ.ಸುಧಾಕರ ಮೊಗಲೆವಾರ ಬಸವಸಾಹಿತ್ಯ ಪುರಸ್ಕಾರ–ನಾಗಪುರ. (ಮಹಾರಾಷ್ಟ್ರ)

೨೦೧೩ ಆಳ್ವಾಸ್ ನುಡಿಸಿರಿ ವಿಳಾಸತ್ ಪುರಸ್ಕಾರ, ಮೂಡಬಿದರಿ.

೨೦೧೩ ಸಮಾಜ ಸೇವಾರತ್ನ ಪ್ರಶಸ್ತಿ, ಅಥಣಿ.

೨೦೧೫ ಸೇವಾಬಂಗಾರ–ಬೆಂಗಳೂರು.

೨೦೧೫ ಕನಕಶ್ರೀ ಪ್ರಶಸ್ತಿ–ಧಾರವಾಡ.

೨೦೧೫ ದಾಸೋಹರತ್ನ ಪ್ರಶಸ್ತಿ, ಹುನ್ನೂರು.

೨೦೧೬ ಮೃತ್ಯುಂಜಯ ಮಹಾಂತ ಪ್ರಶಸ್ತಿ–ಧಾರವಾಡ.

೨೦೧೬ ಜಗಜ್ಯೋತಿ ವಿಶ್ವಗುರು ಬಸವೇಶ್ವರ ಪ್ರಶಸ್ತಿ, ಬೆಂಗಳೂರು.

೨೦೧೬ ಎಂ.ಎಂ.ಪಾಟೀಲ ಜನಸೇವಕ ಪ್ರಶಸ್ತಿ, ಹೂವಿನ ಹಡಗಲಿ.

೨೦೧೬ ಕಲ್ಯಾಣಜ್ಯೋತಿ ಪ್ರಶಸ್ತಿ–ಬೀರಿ(ಬಿ).

೨೦೧೬ ಡಿಎಸ್–ಮ್ಯಾಕ್ಸ ಸಾಹಿತ್ಯ ಪುರಸ್ಕಾರ ಬೆಂಗಳೂರು.

೨೦೧೬ ಬಸವಶ್ರೀ ಪ್ರಶಸ್ತಿ, ಸಿದ್ಧಲಿಂಗೇಶ್ವರ ಪ್ರಕಾಶನ ಕಲಬುರಗಿ.

೨೦೧೭ ವಚನಶ್ರೀ ಪ್ರಶಸ್ತಿ ಬೆಂಗಳೂರು.

೨೦೧೭ ಮಾತೃಭೂಮಿ ಸೇವಾ ಪ್ರಶಸ್ತಿ, ಟಿ.ವಿ–೯, ಬೆಂಗಳೂರು.

೨೦೧೭ ಶ್ರೀ ಸಿದ್ಧತೋಟೆಂದ್ರ ಗುರುಕುಲ ರತ್ನ ಪ್ರಶಸ್ತಿ–ನಾಲವಾರ,

೨೦೧೮ ಮರುಳುಶಂಕರದೇವ ಸಾಹಿತ್ಯ ಪ್ರಶಸ್ತಿ ಭಾಲ್ಕಿ.

೨೦೧೮ ಸಿದ್ಧಗಂಗಾ ಶ್ರೀ ಪ್ರಶಸ್ತಿ, ತುಮಕೂರು.

೨೦೧೯ ಬಸವಭೂಷಣ ಪ್ರಶಸ್ತಿ, ಅಥಣಿ.

೨೦೨೦ ಸರ್ವೋತ್ತಮ ಶರಣ ಸಾಹಿತ್ಯ ಪ್ರಕಾಶನ ಪ್ರಶಸ್ತಿ–ಲಾತುರ. (ಮಹಾರಾಷ್ಟ್ರ)

೨೦೧೯–೨೦ ನೇ ಸಾಲಿನ ಬಸವ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ.

೨. ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಕನ್ನಡ ಕೃತಿಗಳು

ಕ್ರ.ಸಂ.	ಕೃತಿಗಳ ಹೆಸರು	ವರ್ಷ
೧.	ಇಷ್ಟಲಿಂಗ ಪೂಜಾ ವಿಧಾನ	೧೯೮೪
೨.	ಬಸವಜ್ಯೋತಿ (ವಚನಗಳ ಸಂಗ್ರಹ)	೧೯೯೯
೩.	ಬಸವನೈವೇದ್ಯ	೨೦೦೨
೪.	ಧರ್ಮಗುರು ಬಸವಣ್ಣ ಮತ್ತು ಅಷ್ಟಾವರಣ	೨೦೦೬
೫.	ಬಸವ ಸಂತತಿ	೨೦೦೬
೬.	ಚನ್ನಬಸವ ಪಟ್ಟದ್ದೇವರು**	೨೦೦೬
೭.	ಶರಣ ಸಾಹಿತ್ಯ ದರ್ಪಣ	೨೦೦೬
೮.	ಬಸವತತ್ವ ಆಚರಣೆ ಮತ್ತು ನಾವು	೨೦೦೮
೯.	ಬಸವ ಚಿಂತನ	೨೦೦೯
೧೦.	ದಿನಕ್ಕೊಮ್ಮೆ ಶರಣರ ನೆನದೇನ	೨೦೦೯
೧೧.	ಬಸವಧರ್ಮ ದರ್ಪಣ	೨೦೦೯
೧೨.	ಶರಣರು ನಿಮಗೆಷ್ಟು ಗೊತ್ತು?	೨೦೧೩
೧೩.	ವಚನ ಬಂಧು	೨೦೧೩
೧೪.	ಮಕ್ಕಳಿಗಾಗಿ ಅಷ್ಟಾವರಣ	೨೦೧೩
೧೫.	ಬಸವನ ಮೂರ್ತಿಯೇ ಧ್ಯಾನಕ್ಕೆ ಮೂಲ	೨೦೧೪
೧೬.	ಇಷ್ಟಲಿಂಗ ದೀಕ್ಷಾ ವಿಧಾನ *	೨೦೧೪
೧೭.	ವಚನ ಶಿಕ್ಷಣ *	೨೦೧೪
೧೮.	ಶ್ರಾವಣ ಸೌರಭ * (ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಪ್ರವಚನ ಸಂಗ್ರಹ)	೨೦೧೪

೧೯. ನಾ ಕಂಡ ನನ್ನ ಗುರುದೇವರು ೨೦೧೪

೨೦. ವಚನ ಸಂಪತ್ತು ೨೦೧೭

೨೧. ಬಸವಣ್ಣನಿಂದ ಬದುಕಿತ್ತೀಲೋಕವೆಲ್ಲ *** ೨೦೧೭

೨೨. ಶರಣ ಮೇದಾರ ಕೇತಯ್ಯ * ೨೦೧೮

೨೩. ಶರಣರ ಐದು ಆಚಾರಗಳು **** ೨೦೧೯

ಕ್ರ.ಸಂ.	ಸಂಪಾದಿತ ಕೃತಿಗಳು	ವರ್ಷ
೧.	ಶಿವಶರಣೆಯರ ವಚನಗಳು *	೨೦೦೦
೨.	ವಚನ ಪ್ರಸಾದ (ವಚನಗಳ ಸಂಗ್ರಹ) *	೨೦೦೫
೩.	ಬಸವ ವಚನ ಸಿಂಚನ (ಸಂಗ್ರಹ) *	೨೦೦೮
೪.	ಗುರುಕರುಣ ತ್ರಿವಿಧಿ *	೨೦೧೭

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ
ಅನುವಾದಿತ ಕೃತಿಗಳು
ತೆಲುಗು

೦೧ ಬಸವ ಶಿಶುನಿ ಆತ್ಮಯೋ ಚನ್ನಬಸವ ಶಿಶಿಡು
ಅನುವಾದಕರು : ಈಶ್ವರಯ್ಯಾ ಮಠಪತಿ ೨೦೦೨

೦೨ ಬಸವ ಚಿಂತನ
ಅನುವಾದಕರು : ಈಶ್ವರಯ್ಯಾ ಮಠಪತಿ ೨೦೦೨

೦೩ ನಿತ್ಯ ಸತ್ಯ ಶರಣಲಾ ಸ್ಮರಣಂ
ಅನುವಾದಕರು : ಈಶ್ವರಯ್ಯಾ ಮಠಪತಿ ೨೦೦೨

೦೪ ಬಸವ ವೆಲಗು
ಅನುವಾದಕರು : ಈಶ್ವರಯ್ಯಾ ಮಠಪತಿ ೨೦೦೨

೦೫ ಇಷ್ಟಲಿಂಗ ಪೂಜಾ ವಿಧಾನಮು
ಅನುವಾದಕರು : ಈಶ್ವರಯ್ಯಾ ಮಠಪತಿ ೨೦೦೫

೦೬ ಬಾಲಲ ಅಷ್ಟಾವರಣಮು
ಅನುವಾದಕರು : ಸೋಮಶೇಖರ ಪಾಟೀಲ ೨೦೧೯

ಮರಾಠಿ

೦೧ ಇಷ್ಟಲಿಂಗ ಪೂಜಾ ವಿಧಾನ
ಅನುವಾದಕರು : ಶಿವಾನಂದ ೧೯೮೭

೦೨ ಬಸವ ನೈವೆದ್ಯ
ಅನುವಾದಕರು : ಸ್ವರೂಪತಾಯಿ ಬಿರಾಜದಾರ ೨೦೦೬

೦೩ ಧರ್ಮಗುರು ಬಸವಣ್ಣ ಆಣಿ ಅಷ್ಟಾವರಣ
ಅನುವಾದಕರು : ಸ್ವರೂಪತಾಯಿ ಬಿರಾಜದಾರ ೨೦೦೭

೦೪ ಬಸವತತ್ವಗಳ ಆಚರಣೆ ಆಣಿ ಆಪಣ
ಅನುವಾದಕರು : ಸವಿತಾ ನಡಕಟ್ಟಿ
ಮೃಣಾಲಿನಿ ಕೊಟ್ಟೂರ ೨೦೦೯

೦೫ ಗುರು
ಅನುವಾದಕರು : ಸ್ವರೂಪತಾಯಿ ಬಿರಾಜದಾರ ೨೦೧೨

೦೬ ಲಿಂಗ
ಅನುವಾದಕರು : ಸ್ವರೂಪತಾಯಿ ಬಿರಾಜದಾರ ೨೦೧೨

೦೭ ಜಂಗಮ
ಅನುವಾದಕರು : ಸ್ವರೂಪತಾಯಿ ಬಿರಾಜದಾರ ೨೦೧೨

೦೮ ವಿಭೂತಿ ರುದ್ರಾಕ್ಷಿ ಮಂತ್ರ
ಅನುವಾದಕರು : ಸ್ವರೂಪತಾಯಿ ಬಿರಾಜದಾರ ೨೦೧೨

೦೯ ಪಾದೋದಕ–ಪ್ರಸಾದ
ಅನುವಾದಕರು : ಸ್ವರೂಪತಾಯಿ ಬಿರಾಜದಾರ ೨೦೧೨

೧೦ ವಚನಸಾಹಿತ್ಯ ಚಿಂತನ
ಅನುವಾದಕರು : **** ೨೦೧೩

೧೧ ಮಹಾತ್ಮ ಬಸವಣ್ಣ (ವಿ)
ಅನುವಾದಕರು : ರಾಜು ಜುಬರೆ ೨೦೧೩

೧೨ ಷಟಸ್ಥಲ ದರ್ಶನ
ಅನುವಾದಕರು : ರಾಜು ಜುಬರೆ ೨೦೧೩

೧೩ ನಿತ್ಯ ಕರಿನ ಶರಣ ಸ್ಮರಣ
ಅನುವಾದಕರು : ಸ್ವರೂಪತಾಯಿ ಬಿರಾಜದಾರ ೨೦೧೪

೧೪ ಅಷ್ಟಾವರಣ
ಅನುವಾದಕರು : ಸ್ವರೂಪತಾಯಿ ಬಿರಾಜದಾರ ೨೦೧೭

೧೫ ಪಾಚ ನೀತಿತತ್ತ್ವ
ಅನುವಾದಕರು : ರಾಜು ಜುಬರೆ ೨೦೧೯

೧೬ ವಚನ ಚಿಂತನ
ಅನುವಾದಕರು : ಸ್ವರೂಪತಾಯಿ ಬಿರಾಜದಾರ ೨೦೧೯

ವಿ.ಸೂ. : ಮೇಲಿನ ಪುಸ್ತಕಗಳ ಪ್ರಕಾಶಕರು

* ಬಸವಧರ್ಮ ಪ್ರಸಾರ ಸಂಸ್ಥೆ ಹಿರೇಮಠ ಸಂಸ್ಥಾನ ಭಾಲ್ಕಿ

** ಸಿದ್ಧಲಿಂಗೇಶ್ವರ ಪ್ರಕಾಶನ ಗುಲಬರ್ಗಾ

*** ಶ್ರೀ ಮುರುಘಾ ಮಠ ಧಾರವಾಡ

**** ಲಿಂಗಾಯತ ವಿಶ್ವವಿದ್ಯಾಲಯ ಬಸವಕಲ್ಯಾಣ

೩. ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಕುರಿತು ಪ್ರಕಟವಾದ ಕೃತಿಗಳು

೦೧ **ಬಸವ ಶಿಶು**
ಸಂ. ದೇಶಾಂಶ ಹುಡಗಿ
ಬಸವಧರ್ಮ ಪ್ರಸಾರ ಸಂಸ್ಥೆ ಹಿರೇಮಠ ಸಂಸ್ಥಾನ ಭಾಲ್ಕಿ
೨೦೦೨

೦೨ **ಕನ್ನಡ ಜಂಗಮ**
ಸಂ. ಸಂಜೀವಕುಮಾರ ಜುಮ್ಮಾ
ಅನುಭವ ಮಂಟಪ ಗುರುಕುಲ
ದಶಮಾನೋತ್ಸವ ಸ್ವಾಗತ ಸಮಿತಿ, ಸಂತಪೂರ
೨೦೦೨

೦೩ **ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು**
ಡಾ. ಗುರುಲಿಂಗಪ್ಪಾ ಧಬಾಲೆ
ಗಡಿ ಕನ್ನಡ ನುಡಿ ಸಾಂಸ್ಕೃತಿಕ ವೇದಿಕೆ, ಅಕ್ಕಲಕೋಟ
೨೦೦೯

೦೪ **ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು**
ಡಾ. ಗುರುಲಿಂಗಪ್ಪಾ ಧಬಾಲೆ
ಗಡಿನಾಡ ಕನ್ನಡ ನುಡಿ ಅಕ್ಕಲಕೋಟ
೨೦೧೦

೦೫ **ಅರಿವಿನ ಬೆಳಕು**
ರವಿಂದ್ರ ಎಸ್ ಮುತ್ತಂಗಿ
ಕುವೆಂಪು ಕ.ಸಂಘ ಬೀದರ
೨೦೧೩

೦೬ **ಭಾಲ್ಕಿ ಹೀರೇಮಠದ ಡಾ.ಬಸವಲಿಂಗ ಪಟ್ಟದ್ದೇವರು**
ಡಾ. ಆರ್ ಶಿವಣ್ಣ
ಬಸವತತ್ವ ಪ್ರಸಾರ ಹಾಗೂ ಸಂಶೋಧನ ಕೇಂದ್ರ ಬೆಂಗಳೂರು
೨೦೧೪

೦೭ **ಜಂಗಮ ದಾಸೋಹಿ**
ಡಾ. ನಾಗರಾಜ ಹಿರಾ
ಪರಮ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರ
ನುಡಿ ಗೌರವ ಸಮಿತಿ, ಹಿರೇಮಠ ಸಂಸ್ಥಾನ, ಭಾಲ್ಕಿ
೨೦೧೪

೦೮ **ಕಲ್ಯಾಣ ದೀಪ್ತಿ (ಅಭಿನಂದನಾ ಗ್ರಂಥ)**
ಗೌ. ಸಂ. ಡಾ.ಎಂ.ಎಂ. ಕಲಬುರಗಿ
ಪೂಜ್ಯ ಶ್ರೀಮದ್ ಘನಲಿಂಗ ಚಕ್ರವರ್ತಿ ಡಾ. ಬಸವಲಿಂಗ
ಪಟ್ಟದ್ದೇವರ ಅಭಿನಂದನ ಗ್ರಂಥ ಸಮಿತಿ, ಭಾಲ್ಕಿ
೨೦೧೪

೦೯ **ಅಕ್ಷರ ಕಲ್ಯಾಣ**
ಡಾ.ಬಸವರಾಜ ಬಲ್ಲೂರ / ವಿದ್ಯಾವತಿ ಬಲ್ಲೂರ
ಕನ್ನಡ ಸಾಹಿತ್ಯ ಸಂಘ, ಬೀದರ
೨೦೧೪


೧೦ **ಭಾಲ್ಕಿ ಚಂದ್ರನ ಮಹಾಬೆಳಗು**
ಲೇ. ಮಕ್ತುಂಬಿ
ಅಮರಾವತಿ ಪ್ರಕಾಶನ ಭಾಲ್ಕಿ
೨೦೧೫

೧೧ **ಮಾತೃ ಹೃದಯಿ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು**
ಜಯಶ್ರೀ ಸುಕಾಲೆ
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ
೨೦೨೦

೧೨ **ಸಂಸ್ಕೃತಿ ಚಿಂತನೆಯ ಹಿರೇಮಠ ಸಂಸ್ಥಾನ ಭಾಲ್ಕಿ**
ಡಾ. ಬಸವರಾಜ ಬಲ್ಲೂರ
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ
೨೦೨೦



ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರ ಪಟ್ಟಾಧಿಕಾರ



ಪೂಜ್ಯಶ್ರೀ ಗುರುಬಸವ ಪಟ್ಟದ್ದೇವರ ಪಟ್ಟಾಧಿಕಾರ



ಕನ್ನಡ ಸೇವೆಗಾಗಿ ಹಿರೇಮಠ ಸಂಸ್ಥಾನಕ್ಕೆ ಸುವರ್ಣ ಕರ್ನಾಟಕ ಏಕೀಕರಣ ಪುರಸ್ಕಾರ ೨೦೦೬




ಪೂಜ್ಯಶ್ರೀ ಬಸವಲಿಂಗ ಪಟ್ಟದ್ದೇವರಿಗೆ
ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ೨೦೧೦



ಪೂಜ್ಯಶ್ರೀ ಬಸವಲಿಂಗ ಪಟ್ಟದ್ದೇವರಿಗೆ
ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ ೨೦೧೨

ಪುಸ್ತಕ ದಾಸೋಹಿಗಳು

ಶ್ರೀ ಶಿವಕುಮಾರ ಕಟ್ಟೆ



"ಅಧಿಕಾರ ಮನುಷ್ಯರನ್ನು ಭ್ರಷ್ಟರನ್ನಾಗಿಸುತ್ತದೆ" ಎಂಬ ತತ್ವಜ್ಞಾನಿ
ಂಸೋ ಅವರ ಮಾತನ್ನು ಹುಸಿಗೊಳಿಸಿ ಅಧಿಕಾರ ಅನುಭವಿಸಲಿಕ್ಕಲ್ಲ,
ನಸೇವೆ ಮಾಡಲು ಸಿಕ್ಕ ಅವಕಾಶವೆಂದರಿತ ಸಹೃದಯಿ, ಸ್ನೇಹ ಜೀವಿ
ಶಿವಕುಮಾರ ಕಟ್ಟೆ ನಮ್ಮ ಮಧ್ಯದ ಅಪರೂಪದ ವ್ಯಕ್ತಿ, ಶ್ರೇಷ್ಠ ಚಿಂತಕ.
ೀದರ ಜಿಲ್ಲೆಯ ಔರಾದ (ಬಿ)ನ ಪ್ರತಿಷ್ಠಿತ ಕಟ್ಟೆ ಪರಿವಾರದ ಸದ್ಗೃಹಸ್ತರಾದ
ದ್ಯಾವತಿ, ವೈಜನಾಥವರ ಮಗನಾಗಿ ಜನಿಸಿ ಡಿ.ಸಿ.ಪಿ, ಎಂ.ಕಾಂ, ಹಾಗೂ
ಲ್.ಎಲ್.ಬಿ ಪದವಿ ಪಡೆದವರು. ಶ್ರೀಮತಿ ಜ್ಯೋತಿ ಅವರನ್ನು ಕೈಹಿಡಿದು ಮಗ ಸಾಯಿ ತರುಣ,
ಗಳು ಭೂಮಿಕಾಳನ್ನು ಪಡೆದು ತುಂಬು ಸಂಸಾರ ನಡೆಸುತ್ತಿದ್ದಾರೆ.

ನ್ಯಾಯಾಲಯದಲ್ಲಿ ಶೀಘ್ರ ಲಿಪಿಕಾರರಾಗಿ ವೃತ್ತಿ ಜೀವನ ಆರಂಭಿಸಿ, ನಂತರ ಕಾರ್ಮಿಕ
ಲಾಖೆಯಲ್ಲಿ ಸೇವೆ ಸಲ್ಲಿಸಿ ಪ್ರಸ್ತುತ ಬೀದರ ಸರಕಾರಿ ಪಾಲಿಟೆಕ್ನಿಕ್ ಕಾಲೇಜು ಉಪನ್ಯಾಸಕರಾಗಿದ್ದು
ಪಾರ ವಿದ್ಯಾರ್ಥಿಗಳ ಮೆಚ್ಚುಗೆಗೆ ಪಾತ್ರರಾದವರು. ಪ್ರವೃತ್ತಿಯಿಂದ ಸಾಹಿತಿಗಳಾಗಿದ್ದು, ವಿದ್ಯಾರ್ಥಿ
ಸೆಯಲ್ಲಿಯೇ "ನೆನಪು" ಕವನ ಸಂಕಲನ ತಂದು ಸೈ ಅನಿಸಿಕೊಂಡು ಸಾಹಿತ್ಯ ಲೋಕ ಪ್ರವೇಶಿಸಿದ
ವರು "ಔರಾದ ತಾಲೂಕು ದರ್ಶನ, ಅಂಬಿಗರ ಚೌಡಯ್ಯ", "ಕನ್ನಡ ಡಿಂಡಮ" ಮೊದಲಾದ
ತಿಗಳನ್ನು ರಚಿಸಿದಲ್ಲದೆ "ಸಿಡಿಲು", "ಅಂತಃಪುರ", "ಚಿತ್ತಾರ", ಸಂಪಾದಕರಾಗಿ "ನಾಟ್ಯಶ್ರೀ"
ಾಗೂ "ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣ" ಮೊದಲಾದವು ಅವರ
ಹತ್ವದ ಸಂಪಾದಿತ ಕೃತಿಗಳಾಗಿವೆ. "ಸಂಸ್ಕೃತಿ" ಮಾಸಪತ್ರಿಕೆಯ ಸಂಪಾದಕರಾಗಿ
ವೆಸಲ್ಲಿಸಿದವರು. ನಾಡಿನ ಖ್ಯಾತ ಪತ್ರಿಕೆಗಳಲ್ಲಿ ಬಿಡಿ ಲೇಖನ ಪ್ರಕಟವಾಗಿದ್ದು, ಆಕಾಶವಾಣಿಯಲ್ಲಿ
ಂತನೆಗಳು ಬಿತ್ತರವಾಗಿವೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾಗಿ ಕಾರ್ಯ
ರ್ವಹಿಸಿದ ಕಟ್ಟೆಯವರು ಬೀದರ ಜಿಲ್ಲಾ ಬರಹಗಾರರ ಕಲಾವಿದರ ಸಂಘದ
ರವಾಧ್ಯಕ್ಷರಾಗಿ,ಭಾರತ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಕಾರ್ಯದರ್ಶಿಯಾಗಿ, ಪ್ರಭುರಾವ
ಬಳಿವಾಲೆ ಕನ್ನಡ ಸೇವಾ ಪ್ರತಿಷ್ಠಾನದ ಉಪಾಧ್ಯಕ್ಷರಾಗಿ, ಲಿಂಗಾಯತ ಸರಕಾರಿ ಅರೆ ಸರಕಾರಿ
ಕರರ ಸಂಘದ ಉಪಾಧ್ಯಕ್ಷರಾಗಿ, ಸೇವೆ ಸಲ್ಲಿಸುತ್ತಿದ್ದು ಪ್ರಸ್ತುತ ಬೀದರ ಜಿಲ್ಲಾ ಉಸ್ತುವಾರಿ
ಚಿವರ ವಿಶೇಷ ಅಧಿಕಾರಿಗಳಾಗಿ ಆಯಾ ಹುದ್ದೆಗಳಿಗೆ ಗೌರವ ತಂದು ಕೊಟ್ಟಿದ್ದಾರೆ. ಪರೀಕ್ಷಾ
ಯ ನಿವಾರಣೆ, ವ್ಯಕ್ತಿತ್ವ ವಿಕಸನ, ಸಮಯ ನಿರ್ವಹಣೆ, ಧನಾತ್ಮಕ ಚಿಂತನೆ, ಸಂವಹನ ಕೌಶಲ್ಯ
ಗ್ಗೆ ಉತ್ತಮ ಮಾರ್ಗದರ್ಶನ ನೀಡುವ ಸಂಪನ್ಮೂಲ ವ್ಯಕ್ತಿಗಳಾಗಿದ್ದಾರೆ.

ಶ್ರೀಯುತರ ಸಾಹಿತ್ಯಿಕ, ಸಾಂಸ್ಕೃತಿಕ ಸೇವೆ ಸಾಧನೆಗಾಗಿ ಕನ್ನಡ ಸಿರಿ, ಧರಿನಾಡ ಸಿರಿ,
ದ್ಯಾಭೂಷಣ, ಸಮಾಜ ವಿಭೂಷಣ, ಕಾವ್ಯ ಪ್ರತಿಭಾ ರತ್ನ, ಕವಿ ಭಾರ್ಗವ ಮೊದಲಾದ ಪ್ರಶಸ್ತಿ
ದಿದ್ದು, ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದರೆ
ಲ್ಲಾಡಳಿತ ಗಣರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ವಿಶೇಷವಾಗಿ ಔರಾದ ತಾಲ್ಲೂಕು
ೂರನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಾಗೂ ಮಂದಾರ ಕಲಾ ವೇದಿಕೆಯ ರಾಜ್ಯ ಮಟ್ಟದ ಕವಿ ಸಮ್ಮೇಳನದ ಸರ್ವಾಧ್ಯಕ್ಷತೆ ಗೌರವಕ್ಕೆ
ತ್ರರಾಗಿದ್ದಾರೆ. ಇವರ ಬದುಕು ಹಸನಾಗಲೆಂದು ಶುಭ ಹಾರೈಸುವೆ.



ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ, ಹಾಗೂ ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆಯ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯು ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿ ಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ. ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ.

ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲಗರ್ಭದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಕನ್ನಡ ಕಟ್ಟಿದವರು ಮಾಲಿಕೆ ಆರಂಭಿಸಲಾಗಿದೆ. ಇದು ಚಾರಿತ್ರಿಕವಾಗಿ ಮಹತ್ವದ ಯೋಜನೆಯಾಗಿದೆ.

ಉದಯೋನ್ಮುಖ ಬರಹಗಾರರಾದ ನಮ್ಮ ಮಧ್ಯದ ಅಪರೂಪದ ಸಾಹಿತಿಗಳಾದ ಶ್ರೀಮತಿ ಜಯಶ್ರೀ ಸುಕಾಲೆ ಅವರು ಬರೆದ ಮಾತೃ ಹೃದಯಿ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಜೀವನ ಸಾಧನೆ ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. . ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಬಸವತತ್ವ, ಕನ್ನಡತ್ವವನ್ನು ಸಮನ್ವಯಗೊಳಿಸಿ ಈ ಭಾಗದಲ್ಲಿ ಶೈಕ್ಷಣಿಕವಾಗಿ ಬಹುದೊಡ್ಡ ಕ್ರಾಂತಿ ಮಾಡಿರುವರು. ಅನೇಕ ಶರಣ ಸಾಹಿತ್ಯ ಕುರಿತ, ವಿಶೇಷವಾಗಿ ವೈಚಾರಿಕವಾದ ಹಲವಾರು ಮೌಲಿಕ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಬಸವ ತತ್ವವನ್ನು ನಿಜಾಚರಣೆಯಲ್ಲಿ ತಂದ ಶ್ರೀಗಳ ಬದುಕು ಬರಹ ಕುರಿತ ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ. ಆದ್ದರಿಂದ ಸಹೃದಯರು ಸಹಸ್ಪಂದಿಸಿ ಈ ಪುಸ್ತಕ ಓದುವ ಮೂಲಕ ಅಕ್ಷರ ಪ್ರೀತಿ ಮೆರೆದರೆ ಪರಿಷತ್ತಿನ ಶ್ರಮ ಸಾರ್ಥಕವೆಂದು ಭಾವಿಸಲಾಗಿದೆ.

ಸುರೇಶ ಚನಶೆಟ್ಟಿ

ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ